ಶ್ರೀ: ಶಿಶುಪಾಲವಧೆಂ

1956

ಪ್ರಕಾಶಕರು:

ಪ್ರಬೋಧ ಪುಸ್ತಕಮಾಲೆ

೭೮೮ | ೧೦೬ ರಾಜಾರಾಮ ಅಗ್ರಹಾರ

ಮೈಸೂರು

ಮಧುರಛಂದಸಿನ

ಸಿರಿಗನ್ನಡ

ಶಿಶುಪಾಲವಧಂ

(ಮಾಘಕವಿಯ ಸಂಸ್ಕೃತ ಮಹಾಕಾವ್ಯದ ಪದ್ಯಾನುವಾದ.)

(ಸರ್ಗ ೧—೧೩)

ಅಭಿಗಮನಸಂಪುಟಂ

ಅಮರವಾಣಿ

ಪ್ರಕಾಶಕರು:

ಪ್ರಬೋಧ ಪುಸ್ತಕಮಾಲೆ

೭೮೮ | ೧೦೬ ರಾಜಾರಾಮ ಅಗ್ರಹಾರ

ಮೈಸೂರು

ಮೊದಲನೆಯ ಮುದ್ರಣ—೧೯೫೬

ಬೆಲೆ ಸಾಧಾರಣಪ್ರತಿ ೨–೦–೦
ಕ್ಯಾಲಿಕೊ ೩–೦–೦

ಮುದ್ರಕರು:
ಆದರ್ಶ ಮುದ್ರಣ ಮತ್ತು ಪ್ರಕಟನಾಲಯ
ವಾಣೀವಿಲಾಸ ರಸ್ತೆ, ಮೈಸೂರು.



ಸಮರ್ಪಣೆ

ನುಡಿದೇವಿ ಸಿರಿಮುಡಿಗೆ ಕನ್ನಡಿಸಿ ಬಿಡಿಸಿರ್ಪ
ವಾಕ್ಸುಮಗಳಂಜಲಿಯ ಮಾಘವಾಣಿ
ರಾಷ್ಟ್ರಕವಿ ರಸಋಷಿ ಕುವೆಂಪು ಕರಕಮಲದಲಿ
ನಲ್ಮೆಯಿಂದರ್ಪಿಸಿಹನಮರವಾಣಿ.

ಮುನ್ನುಡಿ

ವಿದ್ವಾನ್ ಮ. ಗಂ. ನಂಜುಂಡಾರಾಧ್ಯರು ಅಮರವಾಣಿ ಎಂಬ ಕಾವ್ಯ ನಾಮದಿಂದ ರಚಿಸಿರುವ ತಮ್ಮ "ಸಿರಿಗನ್ನಡ ಶಿಶುಪಾಲವಧಂ" ಎಂಬ ಕಾವ್ಯಕ್ಕೆ ಮುನ್ನುಡಿಯಾಗಿ ನಾಲ್ಕುಮಾತನ್ನು ಹೇಳಬೇಕೆಂದು ನನ್ನನ್ನು ಕೋರಿದ್ದಾರೆ. ಶ್ರೀಯುತರು ಕನ್ನಡಿಗರಿಗೆ ಅಪರಿಚಿತರೇನೂ ಅಲ್ಲ. ಅವರು ತಮ್ಮ ಸಂಸ್ಕೃತಾಭಿಮಾನವನ್ನೂ ಅಭ್ಯಾಸವನ್ನೂ ತಮ್ಮಲ್ಲಿಯೇ ಅಡಗಿಸಿಕೊಂಡು ಅಷ್ಟಕ್ಕೇ ಕೃತಕೃತ್ಯರೆಂದುಕೊಳ್ಳದೆ ತಾವು ಅನುಭವಿಸಿದ ಸಂಸ್ಕೃತ ಕಾವ್ಯದ ಸವಿಯನ್ನು ಕನ್ನಡಿಗರಿಗೂ ಪರಿಚಯ ಮಾಡಿಸುವುದಕ್ಕಾಗಿ, ಅಲ್ಲಿಂದ ಅನೇಕ ಭಾಗಗಳನ್ನು ಪುಸ್ತಕ ರೂಪದಲ್ಲೋ ಮಾಸಪತ್ರಿಕೆಗಳಲ್ಲೋ ಆಗಾಗ ಕನ್ನಡಿಸುತ್ತ ಬಂದಿದ್ದಾರೆ. ಈ ಭಾಷಾಂತರ ಮತ್ತು ಭಾವಾನುವಾದಗಳಿಗಾಗಿ ಕನ್ನಡಿಗರು ಇವರಿಗೆ ಈಗಾಗಲೇ ಋಣಿಗಳು. ಇವರು ಕಾಳಿದಾಸನ 'ರಘುವಂಶ' 'ಕುಮಾರಸಂಭವ' ಕಾವ್ಯಗಳನ್ನು ಕೂಡ ಭಾಷಾಂತರಿಸಿದ್ದಾರೆಂದು ಕೇಳಿದ್ದೇನೆ. ಆದರೆ ಅವನ್ನು ಅಚ್ಚುಮಾಡಿಸಿಲ್ಲ. ಕಾಳಿದಾಸನ ಮಹಾಕಾವ್ಯಗಳ ಅನುವಾದದಲ್ಲಿ ಪಳಗಿದ ಕೈ ಭಾರವಿಯ ಕಿರಾತಾರ್ಜುನೀಯವನ್ನು ಕನ್ನಡಿಸಿ ಈಗ ಮಾಘನ "ಶಿಶುಪಾಲವಧ" ವನ್ನು ಕನ್ನಡಿಸುವುದರಲ್ಲಿ ತೊಡಗಿದೆಯೆಂದು ಹೇಳಬಹುದು. ಸಂಸ್ಕೃತ ಕಾವ್ಯಗಳಲ್ಲಿ ಹೆಚ್ಚಾಗಿ ಈ ಕಾವ್ಯ ನಮ್ಮ ಹಿಂದಿನ ಕನ್ನಡ ಕವಿಗಳಿಗೆ ಬಹಳ ಪ್ರಿಯವಾಗಿದ್ದಂತೆ ತಿಳಿದುಬರುತ್ತದೆ—ಅಲಂಕಾರ ಶಾಸ್ತ್ರದಲ್ಲಿ ದಂಡಿಯ "ಕಾವ್ಯಾದರ್ಶ" ವಿದ್ದಂತೆ. ಆದರೂ ಇದರ ಕನ್ನಡ ಅನುವಾದವು ಯಾವುದೂ ಪ್ರಚಾರದಲ್ಲಿದ್ದಂತೆ ಕಂಡುಬರುವುದಿಲ್ಲ. ಶ್ರೀಯುತ ಆರಾಧ್ಯರು ಈ ಕೆಲಸವನ್ನು ಈಗ ವಹಿಸಿಕೊಂಡು ತಮ್ಮ ಸರಳವಾದ ತಿಳಿಗನ್ನಡ ಶೈಲಿಯಲ್ಲಿ ಮುದ್ದಾದ ಕುಸುಮ ಷಟ್ಪದಿಯಲ್ಲಿ ಆಧುನಿಕರಂತೆ ಪ್ರಾಸವನ್ನು ಬಿಟ್ಟು ಭಾಷಾಂತರ ಮಾಡಿದ್ದಾರೆ. ಮಾಘನ ಶೈಲಿಯನ್ನು ಕ್ಲಿಷ್ಟವೆಂದು ಕರೆಯದಿದ್ದರೂ ಸರಳವೆಂದು ಹೇಳುವುದಕ್ಕಾಗುವುದಿಲ್ಲ. ಆದರಿಂದ ಮೂಲವನ್ನು ಅರಿತವರು ಶ್ರೀಯುತರ ಶ್ರಮವನ್ನು ಮೆಚ್ಚಬಲ್ಲರು. ಜೊತೆಗೆ ಓದುಗರ ಸಹಾಯಕ್ಕಾಗಿ ಅನೇಕ ಉಪಯುಕ್ತ ವಿಷಯಗಳನ್ನೂ

ಸಾಧು ವಿಮರ್ಶೆಯನ್ನೂ ಒಳಗೊಂಡ ಪೀಠಿಕೆ, ಟಿಪ್ಪಣಿಗಳು–ಇವನ್ನೂ ಸೇರಿಸಿದ್ದಾರೆ. ಮಾಘನ ಕಾವ್ಯವನ್ನು ಕಾಳಿದಾಸನ ಕಾವ್ಯಗಳಂತೆ ಶುದ್ಧಕಾವ್ಯವೆಂದು ಕರೆಯುವುದು ಕಷ್ಟವಾಗಬಹುದು. ಇಲ್ಲಿ ಹೃದಯಕ್ಕೆ ಎಷ್ಟು ಆನಂದವೋ ಬುದ್ಧಿಗೆ ಅಷ್ಟು ಪರಿಶ್ರಮವೂ ಬೆರೆದುಕೊಂಡಿದೆ. ಈ ವಿದ್ವತ್ಪ್ರಿಯತೆ ಅನೇಕ ಮಧ್ಯಯುಗದ ಸಂಸ್ಕೃತ ಕವಿಗಳನ್ನು ಮುಸುಕಿಕೊಂಡು ಅವರಲ್ಲಿ ಕಾಣಬರುವ ಕಾವ್ಯಗುಣವನ್ನು ಅನೇಕ ವೇಳೆ ಮುಚ್ಚಿಬಿಡುತ್ತದೆ. ಕಾವ್ಯಪ್ರಿಯತೆ ಶಾಸ್ತ್ರಪ್ರಿಯತೆ ಎರಡನ್ನೂ ಹೊಂದಿಸಿಕೊಂಡ ಅಭಿರುಚಿಯುಳ್ಳವರಿಗೆ ಮಾಘನು ಮೆಚ್ಚಿನ ಕವಿ. ಹೀಗೆ ಪ್ರಸಿದ್ಧನಾದ ಮಾಘಕವಿಯನ್ನು ಕನ್ನಡಿಗರಿಗೆ ಪರಿಚಯಮಾಡಿಸಿಕೊಟ್ಟ ಶ್ರೀಯುತ ಆರಾಧ್ಯರು ನಿಜವಾಗಿಯೂ ಅಭಿನಂದನಾರ್ಹರು. ಅವರ ಕೃತಿಯನ್ನು ಕನ್ನಡಜನ ಆದರಿಸಲೆಂದು ಹಾರೈಸುತ್ತೇನೆ.

ನಂ|| ಶಿವರಾಮಶಾಸ್ತ್ರಿ
ಸಂಸ್ಕೃತ ಪ್ರೊಫೆಸರ್
ಮಹಾರಾಜ ಕಾಲೇಜು,
ಮೈಸೂರು ವಿಶ್ವವಿದ್ಯಾನಿಲಯ.

ತಾ. ೨೯–೧೦–೧೯೫೭

ಬಿನ್ನಹ

ಸಂಸ್ಕೃತ ಮಹಾಕವಿಗಳಲ್ಲೊಬ್ಬನಾದ ಮಾಘನ ಕೃತಿರತ್ನವನ್ನು ಕನ್ನಡಿಸುವ ಸುಯೋಗವು ಲಭಿಸಿದುದು ನನ್ನ ಭಾಗ್ಯ. ಈ ಕೃತಿಸುಮವನ್ನು ನವಕನ್ನಡ ಛಂದಶ್ಶಿಲ್ಪಿ ಕವಿವರ್ಯ ಕುವೆಂಪು ಅವರ ಕರಕಮಲದಲ್ಲಿ ಸಮರ್ಪಿಸುವುದು ನನಗೊಂದು ಹೆಮ್ಮೆ. ಇಂಥ ಸುಮಧುರ ಸನ್ನಿವೇಶವನ್ನುದೊರಕಿಸಿ ಕೊಟ್ಟ ಶ್ರೀಯುತರಿಗೆ ಚಿರಋಣಿಯಾಗಿದ್ದೇನೆ.

ಎರಡನೆಯದಾಗಿ ಕೃತಿಸುದತಿಯ ಮುಖಕಮಲಕ್ಕೆ ಮುನ್ನುಡಿಯ ಮೂಗುತಿಯನ್ನಿಟ್ಟು ಅಲಂಕರಿಸಿದ ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀಮಾನ್ ಎನ್. ಶಿವರಾಮಶಾಸ್ತ್ರಿ, ಎಂ. ಎ., ಅವರಿಗೆ ತುಂಬಾ ಆಭಾರಿಯಾಗಿದ್ದೇನೆ.

ಈ ಕೃತಿಯನ್ನು ಆಮೂಲಾಗ್ರವಾಗಿ ಅವಲೋಕಿಸಿ ಅಮೂಲ್ಯವಾದ ಸಲಹೆಗಳನ್ನು ನೀಡಿದ ಬೆಂಗಳೂರು ಸಂಸ್ಕೃತ ಕಾಲೇಜಿನ ಪಂಡಿತರಾದ ವಿದ್ವಾನ್॥ ಶ್ರೀ ಕೆ. ನರಸಿಂಹಾಚಾರ್ಯರು ಸಾಹಿತ್ಯಶಿರೋಮಣಿ, ಮತ್ತು ಮೈಸೂರು ಸಂಸ್ಕೃತ ಕಾಲೇಜಿನ ವ್ಯಾಕರಣ ಪ್ರೊ॥ ಶ್ರೀ ಕೆ. ಎಸ್. ಲಕ್ಷ್ಮೀ ಕಾಂತಯ್ಯಂಗಾರ್' ಸಾಹಿತ್ಯ ವ್ಯಾಕರಣವಿದ್ವಾನ್, ಮತ್ತು ಕನ್ನಡ ಪಂಡಿತರು ಅಭಿನಂದ್ಯರಾಗಿದ್ದಾರೆ. ಮೇಲಾಗಿ ನನ್ನ ಗ್ರಂಥವನ್ನು ಪರಿಶೀಲಿಸಿ ಪ್ರೋತ್ಸಾಹಿಸಿ ಉಪಕರಿಸಿದ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಡೈರೆಕ್ಟರವರಾದ ಶ್ರೀ ಹೆಚ್. ದೇವೀರಪ್ಪ, ಎಂ. ಎ. ಅವರು ಮತ್ತು ವಿಶ್ವವಿದ್ಯಾನಿಲಯದ ಪರೀಕ್ಷೆಗಳ ಕಂಟ್ರೋಲರ ರಾದ ಶ್ರೀ ದೇ. ಜವರೇಗೌಡ, ಎಂ. ಎ. ಅವರಿಗೆ ಚಿರಋಣಿಯಾಗಿದ್ದೇನೆ. ಈ ಗ್ರಂಥಪ್ರಕಟನ ಕಾರ್ಯದಲ್ಲಿ ಸಹಕರಿಸಿದ ಮಿತ್ರರಿಗೂ ಪ್ರಬೋಧ ಮುದ್ರಣ ಮತ್ತು ಪ್ರಕಟನಮಂದಿರದ ಗೆಳೆಯರಿಗೂ ನನ್ನ ವಂದನೆಗಳು.

ಕನ್ನಡ ರಾಜ್ಯೋದಯದ
ದ್ವಿತೀಯ ಯುಗಾದಿ
೧–೧೧–೧೯೫೭
ಮೈಸೂರು.

ಇಂತು
ಎಂ. ಜಿ. ನಂಜುಂಡಾರಾಧ್ಯ.

ಉಪೋದ್ಘಾತ

ಸಂಸ್ಕೃತ ಮಹಾಕಾವ್ಯಗಳಲ್ಲಿ ರಘುವಂಶ ಕುಮಾರಸಂಭವ ಕಿರಾತಾರ್ಜುನೀಯ ಶಿಶುಪಾಲವಧ ಮತ್ತು ನೈಷಧೀಯಚರಿತೆಗಳಿಗೆ ಅಗ್ರಸ್ಥಾನವಿದೆ. ಇವು "ಪಂಚಮಹಾಕಾವ್ಯ" ಗಳೆಂದು ಪ್ರಸಿದ್ಧವಾಗಿವೆ. ಇವುಗಳಲ್ಲಿ ಮೊದಲನೆಯ ಎರಡನ್ನು ಕಾಳಿದಾಸನೂ ಉಳಿದವುಗಳನ್ನು ಕ್ರಮವಾಗಿ ಭಾರವಿ ಮಾಘ ಮತ್ತು ಶ್ರೀಹರ್ಷ ಎಂಬ ಕವಿಗಳು ಬರೆದಿದ್ದಾರೆ. ಇವುಗಳಲ್ಲಿ ಮಾಘಕವಿ ವಿರಚಿತವಾದ "ಶಿಶುಪಾಲವಧ" ಕ್ಕೆ "ಮಾಘ" ಎಂಬ ಕವಿಯ ಹೆಸರೇ ರೂಢಿಯಲ್ಲಿರುವುದು ಒಂದು ವಿಶೇಷ. "ಕಾವ್ಯೇಷು ಮಾಘಃ" "ಕವಿಷು ಕಾಳಿದಾಸಃ" ಎಂಬ ಉಕ್ತಿ ಇದನ್ನು ಸಮರ್ಥಿಸುತ್ತದೆ.

ಮೇಲೆ ಉದಾಹರಿಸಿದ ಕವಿಕೃತಿಗಳಲ್ಲಿನ ವೈಶಿಷ್ಟ್ಯವನ್ನು ಕುರಿತು ಹಿಂದಿನ ಪಂಡಿತರು ಹೇಳುತ್ತಿದ್ದ ಉಕ್ತಿಯಿದು.

ಉಪಮಾ ಕಾಲಿದಾಸಸ್ಯ ಭಾರವೇರರ್ಥಗೌರವಂ
ದಂಡಿನಃ ಪದಲಾಲಿತ್ಯಂ ಮಾಘೇ ಸಂತಿ ತ್ರಯೋ ಗುಣಾಃ ||

ಅಂದರೆ "ಉಪಮೆಗೆ ಕಾಳಿದಾಸ, ಅರ್ಥಗಾಂಭೀರ್ಯಕ್ಕೆ ಭಾರವಿ, ಲಲಿತಪದ ವಿನ್ಯಾಸಕ್ಕೆ ದಂಡಿ ಕವಿಗಳು ಪ್ರಸಿದ್ಧರು. ಆದರೂ ಮೇಲೆ ಕಂಡ ಉಪಮೆ ಅರ್ಥಗಾಂಭೀರ್ಯ ಮತ್ತು ಪದಲಾಲಿತ್ಯ ಎಂಬ ಮೂರು ಗುಣಗಳೂ ಮಾಘ ಕಾವ್ಯದಲ್ಲಿವೆ" ಎಂಬ ಮಾತು ಮಾಘಕವಿ ಕೃತಿಯಲ್ಲಿನ ಅಗ್ಗಳಿಕೆಯನ್ನು ಸಾರುತ್ತದೆ. ಸಂಸ್ಕೃತ ಕವಿಗಳಲ್ಲಿ ಇಂಥ "ಪಂಡಿತಪ್ರಶಸ್ತಿ" ದೊರೆತಿರುವುದು ಮಾಘನೊಬ್ಬನಿಗೇ.

ಆಧುನಿಕ ವಿಮರ್ಶಕರ ದೃಷ್ಟಿಯಿಂದ ಈ ಮಾತು ಕೊಂಚ ಅತಿಶಯೋಕ್ತಿಯೆಂದು ಕಂಡುಬರುವುದು ಸಹಜ. ಆದರೆ ಮಾಘ ಕಾವ್ಯದಲ್ಲಿ ಕಾಣುವ ಅದ್ಭುತ ಕಲ್ಪನಾಶಕ್ತಿ, ಅಪೂರ್ವ ಪದಪ್ರಯೋಗ, ಹೃದಯಂಗಮ ನಿಸರ್ಗ ವೈಖರಿ, ಉದಾತ್ತಧ್ಯೇಯ, ಕಥಾವಿನ್ಯಾಸದಲ್ಲಿನ ಔಚಿತ್ಯ ಮತ್ತು ಪದಶಯ್ಯೆಮುಂತಾದ ಆತನ ಸರ್ವತೋಮುಖವಾದ ಪ್ರತಿಭೆ ಮತ್ತು ಪಾಂಡಿತ್ಯಗಳು ಸಾಹಿತ್ಯ ಕ್ಷೇತ್ರದಲ್ಲಿ ಮಾಘನ ಸ್ಥಾನವನ್ನು ಚಿರ ನೂತನವನ್ನಾಗಿಸಿವೆ.

(i) ಕವಿಯ ಕಾಲ ದೇಶ ಮತ್ತು ಜೀವನ

ಮಾಘನು ತನ್ನ ವಿಚಾರವನ್ನು ಕಾವ್ಯಾಂತ್ಯದಲ್ಲಿ ಹೇಳಿಕೊಂಡಿರುವುದು ಸಂಸ್ಕೃತ ಕವಿ ಸಂಪ್ರದಾಯಕ್ಕೆ ಹೊಸತು. ಅಲ್ಲಿ "ಮಾಘನ ಪಿತಾಮಹನಾದ ಸುಪ್ರಭದೇವನು ಗುರ್ಜರದೇಶದ ಶ್ರೀಮಾಲದ ದೊರೆ ಶ್ರೀ ವರ್ಮಲನ ಹತ್ತಿರ ಮಂತ್ರಿಯಾಗಿದ್ದನು. ಅವನ ಮಗ ದತ್ತಕ. ಅವನ ಪುತ್ರನೇ ಮಾಘಕವಿ" ಎಂದಿದೆ. ಇದಿಷ್ಟರಿಂದ ಮಾಘನ ಪೂರ್ವಜರು ಗುರ್ಜರದೇಶದ ರಾಜನೊಬ್ಬನಲ್ಲಿ ಮಂತ್ರಿಪದವಿಯಲ್ಲಿದ್ದರೆಂದು ಮಾತ್ರ ತಿಳಿಯಬಹುದಲ್ಲದೆ ಆತನಿದ್ದ ಕಾಲ ಮತ್ತು ಜೀವನಗಳ ಬಗ್ಗೆ ಏನೂ ತಿಳಿಯುವುದಿಲ್ಲ. ಮೇಲಾಗಿ ಗುರ್ಜರದೇಶದ ಶ್ರೀಮಾಲ ಎಂಬ ನಗರದ ಹಾಗೂ ಶ್ರೀವರ್ಮಲನ ಬಗ್ಗೆ ಚಾರಿತ್ರಕಾಂಶಗಳು ಸ್ಪಷ್ಟವಾಗಿಲ್ಲ.

ಮಾಘಕವಿಯ ವಿಚಾರವಾಗಿ ಬಲ್ಲಾಳಕೃತ "ಭೋಜಪ್ರಬಂಧ" ಮೇರುತುಂಗಾಚಾರ್ಯನ "ಪ್ರಬಂಧಚಿಂತಾಮಣಿ" ಮತ್ತು ಪ್ರಭಾಚಂದ್ರನ "ಪ್ರಭಾವಕ ಚರಿತೆ"* ಗಳಲ್ಲಿ ಕೆಲವು ವಿಚಾರಗಳು ದೊರೆಯುತ್ತವೆ. ಆದರೆ ಇಲ್ಲಿ ಉಕ್ತವಾಗಿರುವ ಕಥಾಭಾಗವು ಕೇವಲ ಜನ ಮನರಂಜನೆಯ ಉದ್ದೇಶದಿಂದ ಚಿತ್ರಿತವಾಗಿರುವುದರಿಂದ ಮಾಘನ ದೇಶಕಾಲಗಳ ಬಗ್ಗೆ ಯಾವ ಪ್ರಭಾವವೂ ಬೀಳುವುದಿಲ್ಲವೆಂದು ವಿಮರ್ಶಕರು ಭಾವಿಸಿದ್ದಾರೆ. ಏಕೆಂದರೆ ಮೇಲೆ ಹೇಳಿದ ಮೂರು ಗ್ರಂಥಗಳಲ್ಲಿ ಮಾಘನು ಕ್ರಿ.ಶ. ೧೧ನೆಯ ಶತಮಾನದಲ್ಲಿ ಮಾಲವ ದೇಶವನ್ನಾಳುತ್ತಿದ್ದ ಧಾರಾನಗರದ ಭೋಜರಾಜನ ಸಮಕಾಲಿಕನೆಂದು ಉಕ್ತವಾಗಿದೆ. ಆದರೆ ಮಾಘನ ಕಾಲ ನಿರ್ಣಯದ ವಿಚಾರವಾಗಿ ದೊರೆತಿರುವ ಅನೇಕ ನಿದರ್ಶನಗಳು ಈ ಕಾಲದಲ್ಲಿ ಮಾಘನಿದ್ದನೆಂಬುದನ್ನು ಸಮರ್ಥಿಸುವುದಿಲ್ಲ. ಬದಲಾಗಿ ಕಾವ್ಯದ ಆಂತರಿಕ ಮತ್ತು ಬಾಹ್ಯ ಪ್ರಮಾಣಗಳ ಪರ್ಯಾಲೋಚನೆಯಿಂದ ಮಾಘನು ಬೌದ್ಧಮತವು ಉಚ್ಛ್ರಾಯಸ್ಥಿತಿಯಲ್ಲಿದ್ದ ಕಾಲದಲ್ಲಿ ಜೀವಿಸಿದ್ದನೆಂಬುದಕ್ಕೆ ಸಮರ್ಥಕವಾಗಿವೆ. ಕವಿಕಾಲದ ವಿಷಯದಲ್ಲಿ ಪಂಡಿತರಲ್ಲಿ ಭಿನ್ನಾಭಿಪ್ರಾಯವಿದೆ.

---

* ಈ ಕಥೆಗಳು ನಿರ್ಣಯಸಾಗರ ಪ್ರೆಸ್ಸಿನ ಶಿಶುಪಾಲವಧ ಪೀಠಿಕೆಯಲ್ಲಿ ಉಲ್ಲೇಖಿಸಲ್ಪಟ್ಟಿವೆ.

ಪ್ರಸಿದ್ಧ ಜರ್ಮನ್ ಪಂಡಿತನಾದ ಜಾಕೊಬಿ (Jacobi) ಮಾಘನು ಕ್ರಿ.ಶ. ೬ನೆಯ ಶತಮಾನದ ಮಧ್ಯದಲ್ಲಿದ್ದನೆಂದು ಅಭಿಪ್ರಾಯ ಪಟ್ಟಿದ್ದಾನೆ.[1] ಮತ್ತೊಬ್ಬ ಜರ್ಮನ್ ವಿದ್ವಾಂಸ ಕ್ಲಾಟ್ (Clatt) ಎಂಬುವನು ಮಾಘನನ್ನು ಹತ್ತನೆಯ ಶತಮಾನದ ಆದಿಭಾಗದಲ್ಲಿದ್ದನೆಂದು ಹೇಳುತ್ತಾನೆ.[2] ಆರ್. ಸಿ. ದತ್, ಎಂಬುವರು ೧೨ನೆಯ ಶತಮಾನದಲ್ಲಿದ್ದನೆಂದೂ,[3] ಪ್ರೊ. ಮ್ಯಾಕ್ಡೋನಾಲ್ಡರು ೯ನೆಯ ಶತಮಾನದಲ್ಲಿದ್ದನೆಂದೂ ಹೇಳುತ್ತಾರೆ. ಆದರೆ ಈ ವಾದಗಳು ಸಾಕಷ್ಟು ಸಮರ್ಥನೆಯಿಂದ ಕೂಡಿರುವುದಿಲ್ಲ. ಏಕೆಂದರೆ ಪ್ರಸಿದ್ಧ ಆಲಂಕಾರಿಕನಾದ ಆನಂದವರ್ಧನನು ತನ್ನ ಧ್ವನ್ಯಾಲೋಕದ ಎರಡನೆಯ ಉದ್ಯೋತದಲ್ಲಿ "ತ್ರಾಸಾಕುಲಃ ಪರಿಪತನ್" (ಸ. ೫. ಶ್ಲೋ. ೨೬) "ರಮ್ಯಾ ಇತಿ ಪ್ರಾಪ್ತವತೀಃ" (ಸ. ೩. ಶ್ಲೋ ೫೩) ಎಂಬ ಎರಡು ಪದ್ಯಗಳನ್ನು ಮಾಘನ 'ಶಿಶುಪಾಲವಧ' ಕಾವ್ಯದಿಂದ ಉದ್ಧರಿಸಿದ್ದಾನೆ. ಇದರಿಂದ ಮಾಘನು ಆನಂದವರ್ಧನ (೯ನೆಯ ಶತಮಾನ) ನಿಗಿಂತಲೂ ಪೂರ್ವದವನೆಂದು ಸ್ಪಷ್ಟವಾಗುತ್ತದೆ.

ಮಾಘನು ಭಾರವಿ ಭಟ್ಟಿ ಕುಮಾರದಾಸ ಮತ್ತು ಶ್ರೀಹರ್ಷರ ತರುವಾಯ ಬಂದವನು. ಇವನಿಗೆ ನಾಗಾನಂದ ನಾಟಕದ ಪರಿಚಯವಿದ್ದಂತೆ ತೋರುತ್ತದೆ. ಮೇಲಾಗಿ ಈತ ಸುಬಂಧುವಿಗಿಂತ ಹಿಂದಿನವನು. ಏಳನೆಯ ಶತಮಾನದ ಕವಿಗಳಾರೂ ಮಾಘನ ಹೆಸರನ್ನು ಹೇಳದಿರುವುದರಿಂದಲೂ ೯ನೆಯ ಶತಮಾನದಲ್ಲಿ ಈತನ ಕಾವ್ಯವು ಪ್ರಸಿದ್ಧಿಗೆ ಬಂದಿದ್ದುದರಿಂದಲೂ ಇವನು ಎಂಟನೆಯ ಶತಮಾನದವನೆಂದು ಕೀತ್ ಪಂಡಿತ ಮತ್ತು ಪ್ರೊ. ತರಣೀಚಂದ್ರಚೌಧರಿಯವರು ಅಭಿಪ್ರಾಯ ಪಡುತ್ತಾರೆ. ಆದರೆ ಪ್ರೊ. ದತ್ ಎಂಬುವರು ಮಾಘನ ಕಾಲದ ವಿಚಾರವಾಗಿ ಬರೆಯುತ್ತಾ ಈತನು ಎಂಟನೆಯ ಶತಮಾನದ ಪೂರ್ವಾರ್ಧದಲ್ಲಿದ್ದಿರಬೇಕೆಂದು ನಿರ್ಧರಿಸಿದ್ದಾರೆ. ಮೇಲೆ ಕಂಡ ಕಾರಣಗಳಿಂದ ಮಾಘನು ಧಾರಾನಗರದ ಭೋಜರಾಜನ ಸಮಕಾಲೀನ

---

1 ವಿಯನ್ನಾ 'ಓರಿಯಂಟಲ್ ಜರ್ನಲ್' Vol. iv. ಪು. ೬೧.

2 ಡಿಟೋ ಜರ್ನಲ್ Vol iv ಪು ೨೩೬

3 "ಇಂಡಿಯಾದೇಶದ ನಾಗರಿಕತೆಯ ಚರಿತ್ರೆ" ಭಾಗ v ಅಧ್ಯಾಯ xii:

ನೆಂಬುದು ನಿರ್ಧಾರವಾದ ವಿಚಾರವೆಂದು ಸ್ಪಷ್ಟವಾಗುತ್ತದೆ. ಇದಕ್ಕೆ ಬದಲಾಗಿ ಸದರಿ ಭೋಜನು ತಾನು ರಚಿಸಿರುವ "ಸರಸ್ವತೀಕಂಠಾಭರಣ" ವೆಂಬ ಅಲಂಕಾರಕ ಗ್ರಂಥದಲ್ಲಿ 'ಶಿಶುಪಾಲವಧ' (ಸ. ೯. ಶ್ಲೋ ೬.) ದಿಂದ ಉದಾಹರಣೆಯನ್ನು ಕೊಟ್ಟಿದ್ದಾನೆ. ಆದ್ದರಿಂದ ಮಾಘನು ಭೋಜರಾಜನ ಸಮಕಾಲೀನನಾಗಲಾರನು. ಏಕೆಂದರೆ ಅಲಂಕಾರಿಕರು ಸಾಮಾನ್ಯವಾಗಿ ತಮಗಿಂತ ಹಿಂದೆ ಇದ್ದ ಕವಿಕಾವ್ಯಗಳಿಂದ ಉದಾಹರಣೆಗಳನ್ನು ಕೊಡುವರೇ ಹೊರತು ಸಮಕಾಲೀನ ಕವಿಗಳ ಗ್ರಂಥಗಳಿಂದ ಉದಾಹರಿಸಲಾರರು. ಕ್ರಿ. ಶ. ೧೦ನೆಯ ಶತಮಾನದಲ್ಲಿದ್ದ ಸೋಮದೇವನು ತನ್ನ 'ಯಶಸ್ತಿಲಕ ಚಂಪೂ' ಗ್ರಂಥದಲ್ಲಿ ಮಾಘನನ್ನು ಉಲ್ಲೇಖಿಸಿದ್ದಾನೆ. ಮತ್ತು ತನ್ನ ಗ್ರಂಥವನ್ನು ಕ್ರಿ. ಶ. ೯೮೯ ರಲ್ಲಿ ಮುಗಿಸಿದಂತೆ ಹೇಳಿಕೊಂಡಿದ್ದಾನೆ. ಇದಲ್ಲದೆ "ಕವಿರಾಜಮಾರ್ಗ" ಎಂಬ ಕನ್ನಡ ಅಲಂಕಾರಿಕ ಗ್ರಂಥಕರ್ತೃವಾದ ರಾಷ್ಟ್ರಕೂಟದ ರಾಜ ನೃಪತುಂಗ ಅಥವಾ ಅಮೋಘವರ್ಷ (೮೧೫–೭೭) ನು ತನ್ನ ಗ್ರಂಥದಲ್ಲಿ ಮಾಘನನ್ನು ಕಾಳಿದಾಸನ ಜೊತೆಗೆ ಸ್ತುತಿಸಿದ್ದಾನೆ.[2] ಒಟ್ಟಿನಲ್ಲಿ ಒಬ್ಬ ಕವಿಯ ಕಾವ್ಯದಿಂದ ಉದಾಹರಣೆಗಳನ್ನು ಉದ್ಧರಿಸುವುದಕ್ಕೆ ಮತ್ತು ಅವನು ಪ್ರಸಿದ್ಧನಾಗುವುದಕ್ಕೆ ಕನಿಷ್ಟಪಕ್ಷ ಐವತ್ತು ವರ್ಷಗಳ ಅಂತರವಾದರೂ ಆವಶ್ಯಕ. ಈ ದೃಷ್ಟಿಯಿಂದ ಮಾಘನು ಎಂಟನೆಯ ಶತಮಾನದ ಉತ್ತರಾರ್ಧದಲ್ಲಿದ್ದನೆಂದು ನಿರ್ಧರಿಸುವುದು ಸೂಕ್ತ.

ಇನ್ನು 'ಶಿಶುಪಾಲವಧ' ಕಾವ್ಯದ ಎರಡನೆಯ ಸರ್ಗದ ೧೧೨ನೆಯ ಶ್ಲೋಕದಲ್ಲಿ 'ವೃತ್ತಿ' ಮತ್ತು 'ನ್ಯಾಸ' ಎಂಬ ವ್ಯಾಕರಣ ಗ್ರಂಥಗಳನ್ನು ಉಲ್ಲೇಖಿಸಲಾಗಿದೆ.[3] ಇಲ್ಲಿ 'ಜಯಾದಿತ್ಯ' ಮತ್ತು 'ವಾಮನರ' ಕಾಶಿಕಾ ವೃತ್ತಿ ಮತ್ತು ಅದಕ್ಕೆ ವ್ಯಾಖ್ಯಾನರೂಪವಾಗಿರುವ ಜಿನೇಂದ್ರಬುದ್ಧಿಯ

---

1 ಡಾ|| ಪೀಟರ್‌ಸನ್ ಅವರ ೧೮೮೩–೮೪ ರ ವರದಿ ಪು. ೪೫.

2 ಕೆ. ಬಿ. ಪಾಠಕ್ ಅವರ "ಕವಿರಾಜಮಾರ್ಗದ ಮುನ್ನುಡಿ" ಮತ್ತು "ನೃಪತುಂಗ ಮತ್ತು ಕವಿರಾಜಮಾರ್ಗ" ಎಂಬ ವಿಷಯದ ಮೇಲೆ ಬರೆದಿರುವ ಲೇಖನ. B. B. R. A. S. Vol. XXII.

3 ಮ್ಯಾಕ್ಡೋನಾಲ್ಡ್ ರವರ "ಸಂಸ್ಕೃತ ಸಾಹಿತ್ಯಚರಿತ್ರೆ" ಯಲ್ಲಿ "ಕಾಶಿಕಾವೃತ್ತಿಯು ಕ್ರಿ. ಶ. ೬೫೦ ಕ್ಕಿಂತ ಈಚಿನದಲ್ಲವೆಂದು ಹೇಳಿದೆ.

"ನ್ಯಾಸ" ಎಂಬ ವ್ಯಾಖ್ಯಾನಗಳು ಉಕ್ತವಾಗಿವೆ. ಇದಲ್ಲದೆ ಮಾಘನು ಅನೇಕಕಡೆ ಮೇಲೆಕಂಡ ನ್ಯಾಸಕಾರನ ಅಭಿಪ್ರಾಯಗಳನ್ನು ಅನುಮೋದಿಸಿದ್ದಾನೆ. ಪ್ರಸಿದ್ಧ ಚೀನಾದೇಶದ ಪ್ರವಾಸಿ ಇತ್‌ಸಿಂಗ (I-tsing) ನು ಜಯಾದಿತ್ಯನು ಬೌದ್ಧಮತಾನುಯಾಯಿಯೆಂದೂ, ಆತನು ಕ್ರಿ.ಶ. ೬೫೧–೬೨ ರಲ್ಲಿ ಮೃತನಾದನೆಂದೂ ಹೇಳುತ್ತಾನೆ. ಆದರೆ ನ್ಯಾಸಕರ್ತೃವಾದ ಜಿನೇಂದ್ರಬುದ್ಧಿಯಂತಹ ಪ್ರಸಿದ್ಧ ಬೌದ್ಧ ವಿದ್ವಾಂಸನನ್ನು ಆತ ಪ್ರಸ್ತಾಪಿಸಿಲ್ಲ. ಆದ್ದರಿಂದ ಜಿನೇಂದ್ರಬುದ್ಧಿಯು ಇತ್‌ಸಿಂಗನು ಭಾರತವನ್ನು ಬಿಟ್ಟುಹೋದ ಮೇಲೆ ಎಂದರೆ ಕ್ರಿ. ಶ. ೬೯೫ರ ತರುವಾಯವೇ ಪ್ರಸಿದ್ಧಿಗೆ ಬಂದಿರಬೇಕೆಂದು ತಿಳಿದುಬರುತ್ತದೆ. ಪ್ರಸಿದ್ಧ ಆಲಂಕಾರಿಕನಾದ ಭಾಮಹನು ಜಿನೇಂದ್ರಬುದ್ಧಿಯ[1] ಅಭಿಪ್ರಾಯಗಳನ್ನು ಟೀಕಿಸಿದ್ದಾನೆ. ಇದರಿಂದ ಭಾಮಹನು ಜಿನೇಂದ್ರಬುದ್ಧಿಗಿಂತ್ತಲೂ ಈಚಿನವನೆಂಬುದು ಸ್ಪಷ್ಟವಾಗುತ್ತದೆ. ಭಟ್ಟೋದ್ಭಟನ "ಭಾಮಹವಿವರಣದಲ್ಲಿ ಭಾಮಹನ ಕಾವ್ಯಾಲಂಕಾರವು ವಿವರಿಸಲ್ಪಟ್ಟಿದೆ. ಉದ್ಭಟನು ಕ್ರಿ, ಶ, ೭೭೯–೮೧೩ ರವರೆಗೆ ಆಳುತ್ತಿದ್ದ ಕಾಶ್ಮೀರದ ರಾಜನಾದ ಜಯಾಪೀಡನ ಸಮಕಾಲೀನನೆಂದು ಹೇಳಲಾಗಿದೆ. ಇದರಿಂದ ಭಾಮಹನು ಎಂಟನೆಯ ಶತಮಾನದ ಮಧ್ಯಭಾಗದಲ್ಲಿದ್ದನೆಂದೂ, ಅವನಿಗಿಂತ ಜಿನೇಂದ್ರಬದ್ಧಿಯು ಹಿಂದಿನವನೆಂಬುದೂ ಸಿದ್ಧವಾಗುತ್ತದೆ. ಈ ಕಾರಣಗಳಿಂದ ನ್ಯಾಸಕರ್ತೃವು ಎಂಟನೆಯ ಶತಮಾನದ ಆದಿಭಾಗದಲ್ಲಿದ್ದನೆಂದು ಹೇಳಬಹುದಾಗಿದೆ. ಈ ನ್ಯಾಸವನ್ನು ಸೂಚಿಸಿರುವ ಮಾಘನು ನ್ಯಾಸಕರ್ತೃವಿಗಿಂತಲೂ ಈಚಿನವನಾಗಬೇಕಾಗಿರುವುದರಿಂದ ಈತನು ನಾವು ಹಿಂದೆಯೇ ಸೂಚಿಸಿರುವಂತೆ ಎಂಟನೆಯ ಶತಮಾನದ ಉತ್ತರಾರ್ಧದಲ್ಲಿ ಎಂದರೆ ಕಡೆಯ ಭಾಗದಲ್ಲಿದ್ದನೆಂದು ದೃಢಪಡುತ್ತದೆ.[2]

ಮಾಘಕವಿಯ ಜೀವನದ ಬಗ್ಗೆ ಉಲ್ಲೇಖಿಸಿರುವ ಹಿಂದೆ ಹೇಳಿದ ಮೂವರು ಕವಿಗಳ ಕಥೆಗಳಲ್ಲಿ ವ್ಯತ್ಯಾಸಗಳಿವೆ. ಕಾಲವಿಚಾರವಾಗಿ ಅವು

---

1 ಕೆ. ಬಿ. ಪಾಠಕ್ ಅವರ "ಜಿನೇಂದ್ರಬುದ್ಧಿಯು ಮೇಲೆ ಭಾಮಹನ ಟೀಕೆಗಳ" ಎಂಬ ಲೇಖನ. B·B·R·A·S· vol·XX II ಪು ೧೮-೩೧

2 ಶ್ರೀ ಎಂ. ಎಸ್. ಭಂಡಾರ್‌ಕರ್ ಅವರ ಮಾಘಕಾವ್ಯದ ಉಪೋದ್ಘಾತ ಪು. ೧೧

ಪ್ರಾಮಾಣಿಕವಲ್ಲವೆಂಬುದು ಈವರೆಗಿನ ವಿಚಾರ ವಿಮರ್ಶೆಯಿಂದ ಸ್ಪಷ್ಟವಾಗಿದೆ. ಆದರೆ ಅವುಗಳಲ್ಲಿ ಕವಿಯ ವೈಯಕ್ತಿಕ ಗುಣಾತಿಶಯದ ಬಗ್ಗೆ ಪರಂಪರಾಗತವಾಗಿ ಬಂದಿದ್ದ ಕಥಾನಕವನ್ನೇ ಇವರು ಆಯಾ ಸನ್ನಿವೇಶಕ್ಕೆ ಅಳವಡಿಸಿಕೊಂಡು ಬೆಳೆಸಿಕೊಂಡಂತೆ ತೋರುತ್ತದೆ. ಅದನ್ನಿಲ್ಲಿ ಸಂಗ್ರಹಿಸಲಾಗಿದೆ.

*ಒಂದುದಿನ ಭೋಜರಾಜನು ಸಿಂಹಾಸನಾಸೀನನಾಗಿದ್ದನು. ಆಗ ದ್ವಾರಪಾಲಕನು ಬಂದು ಬಡತನದಿಂದ ಬಳಲಿದ ಮಾಘ ಕವಿಯು ಗುರ್ಜರ ದೇಶದಿಂದ ಬಂದು ನಗರದ ಹೊರಭಾಗದಲ್ಲಿರುವುದಾಗಿಯೂ, ಆತನಪತ್ನಿಯು ಪ್ರಭುದರ್ಶನಕ್ಕಾಗಿ ಆಗಮಿಸಿರುವುದಾಗಿಯೂ ರಾಜನಿಗೆ ಬಿನ್ನೈಸಿದನು. ರಾಜನು ಆಕೆಯನ್ನು ಗೌರವದಿಂದ ಆಸ್ಥಾನಕ್ಕೆ ಬರಮಾಡಿಕೊಂಡನು. ಆಕೆ ತನ್ನ ಪತಿಯು ಕೊಟ್ಟಿದ್ದ ಪತ್ರವನ್ನು ಒಪ್ಪಿಸಿದಳು. ಅದರಲ್ಲಿ 'ಶಿಶುಪಾಲವಧ ಕಾವ್ಯದ 'ಕುಮುದವನಮಪಶ್ರೀ' (೧೧–೬೪) ಎಂಬ ಪದ್ಯವು ಬರೆಯಲ್ಪಟ್ಟಿತ್ತು. ರಾಜನು ಆ ಪದ್ಯದಲ್ಲಿ ವರ್ಣಿತವಾಗಿದ್ದ ಅದ್ಭುತವಾದ ಪ್ರಭಾತ ವರ್ಣನಕ್ಕೆ ಮುಗ್ಧನಾಗಿ ಆಕೆಗೆ ಮೂರು ಲಕ್ಷ ಹೊನ್ನನ್ನು ಕೊಟ್ಟು "ತಾಯಿ' ಇದು ನಿಮ್ಮ ಭೋಜನಕ್ಕಾಗಿ ಕೊಟ್ಟದ್ದು. ನಾಳೆ ಪ್ರಾತಃಕಾಲ ಕವಿಯ ಸಂದರ್ಶನಕ್ಕೆ ಬರುವೆನು" ಎಂದು ಹೇಳಿದನು. ಆಕೆಯು ಅಲ್ಲಿಂದ ಹಿಂತಿರುಗಿ ಬರುತ್ತಿರುವಾಗ ಮಾರ್ಗ ಮಧ್ಯದಲ್ಲಿ ಯಾಚಕರು ತನ್ನ ಪತಿಯ ಗುಣಾತಿಶಯಗಳನ್ನು ವರ್ಣನ ಮಾಡುತ್ತಿದ್ದರು. ಅದನ್ನು ಕೇಳಿ ಆಕೆ ಅವರಿಗೆ ನಿಖಿಲ ಧನವನ್ನೂ ಕೊಟ್ಟು ರಿಕ್ತಹಸ್ತಳಾಗಿ ಬಂದಳು. ಪತ್ನಿಯುಮೂಲಕ ನಡೆದ ಸುದ್ದಿಯನ್ನು ಕೇಳಿ ಮಾಘನು "ದೇವಿ, ನೀನು ಒಳ್ಳೆಯದನ್ನೇ ಮಾಡಿದೆ. ಆದರೆ ಬೇರೆ ಯಾಚಕರು ಬಂದರೆ ಅವರಿಗೇನು ಕೊಡಲಿ !" ಎನ್ನುತ್ತಿರುವಾಗ ಒಬ್ಬ ಯಾಚಕನು ಬಂದು ವಸ್ತ್ರಮಾತ್ರಉಳಿದಿದ್ದ ಮಾಘನನ್ನು ಕುರಿತು—

ಆಶ್ವಾಸ್ಯ ಪರ್ವತಕುಲಂ ತಪನೋಷ್ಮತಪ್ತ
ಮುದ್ದಾಮದೂರವಿಧುರಾಣಿ ಚ ಕಾನನಾನಿ ||
ನಾನಾ ನದೀನದಶತಾನಿ ಚ ಪೂರಯಿತ್ವಾ
ರಿಕ್ತೋsಸಿ ಯಜ್ಜಲದ ಸೈವ ತವೋತ್ತಮಾಶ್ರೀಃ ||

*ಬಲ್ಲಾಳಕೃತ ಭೋಜಪ್ರಬಂಧದಲ್ಲಿ ಉಕ್ತವಾಗಿರುವ ಕಥಾಸಂಗ್ರಹ.

ಎಲೈ ಮೇಘವೇ, ಬಿಸಿಲಿನ ಬೇಗೆಯಿಂದ ಬಳಲಿದ ಪರ್ವತ ಮತ್ತು ಅರಣ್ಯಗಳನ್ನು ಶಾಂತಗೊಳಿಸಿ, ಹಲವು ನದೀನದಗಳನ್ನು ತುಂಬಿಸಿ ಈಗ ರಿಕ್ತನಾಗಿರುವೆ! ಇದೇ ನಿನಗೆ ಉತ್ತಮವಾದ ಸಂಪತ್ತು ಎಂದನು. ಈ ಮಾತನ್ನು ಕೇಳಿ ಮಾಘನು ತನ್ನ ಸತಿಯನ್ನು ಕುರಿತು—

ಅರ್ಥಾ ನ ಸಂತಿ ನ ಚ ಮುಂಚತಿ ಮಾಂ ದುರಾಶಾ
ತ್ಯಾಗಾನ್ನ ಸಂಕುಚತಿ ದುರ್ಲಲಿತಂ ಮನೋ ಮೇ ||
ಯಾಚ್ಞಾ ಚ ಲಾಘವಕರೀ ಸ್ವವಧೇ ಚ ಪಾಪಂ
ಪ್ರಾಣಾಃ ಸ್ವಯಂ ವ್ರಜತ ಕಿಂ ನು ವಿಲಂಬಿತೇನ ||

" ನನ್ನಲ್ಲಿ ಹಣವಿಲ್ಲ. ಆಶೆಯಿನ್ನೂ ನನ್ನನ್ನು ಬಿಟ್ಟಿಲ್ಲ. ದುರ್ಲಲಿತವಾದ ನನ್ನ ಮನಸ್ಸು ಔದಾರ್ಯವನ್ನು ಬಿಡಲೊಲ್ಲದು. ಯಾಚನೆಯು ಲಾಘವ ಆತ್ಮಹತ್ಯೆಯಿಂದ ಪಾಪಸಂಘಟನ. ಈ ಕಾರಣದಿಂದ ಎಲೈ ಪ್ರಾಣಗಳೇ, ನೀವೇ ನನ್ನನ್ನು ಬಿಟ್ಟು ಹೋಗಬಾರದೇಕೆ ? ಏಕೆ ವಿಳಂಬಮಾಡುತ್ತಿರುವಿರಿ ? "

ದಾರಿದ್ರ್ಯಾನಲಸಂತಾಪಃ ಶಾಂತಃ ಸಂತೋಷವಾರಿಣಾ
ಯಾಚಕಾಶಾವಿಘಾತಾಂತರ್ದಾಹಃ ಕೇನೋಪಶಾಮ್ಯತಿ ||

" ಸಂತೋಷವೆಂಬ ನೀರಿನಿಂದ ದಾರಿದ್ರ್ಯವೆಂಬ ಬೆಂಕಿಯಿಂದುಂಟಾದ ತಾಪವು ಶಾಂತವಾಗುತ್ತದೆ. ಆದರೆ ಯಾಚಕರ ಆಶೆಯನ್ನು ವಿಘಾತಮಾಡಿದ ಈ ಅಂತರ್ದಾಹವು ಯಾವುದರಿಂದ ನಂದೀತು ! " ಎಂದು ಹೇಳಿ, ಎಲೌ ದೇವಿ, ಮನಸ್ಸಿನಲ್ಲಿ ನನಗೆ ಮತ್ತಾವ ಬಾಧೆಯೂ ಇಲ್ಲ. ಆದರೂ

ನ ಭಿಕ್ಷಾ ದುರ್ಭಿಕ್ಷೇ ಪತತಿ ದುರವಸ್ಥಾಃ ಕಥಮೃಣಂ
ಲಭಂತೇ ಕರ್ಮಾಣಿ ದ್ವಿಜಪರಿವೃಢಾ ಕಾರಯತಿ ಕಃ ||
ಅದತ್ವೈವ ಗ್ರಾಸಂ ಗ್ರಹಪತಿರಸಾವಸ್ತಮಯತೇ
ಕ್ವ ಯಾಮಃ ಕಿಂ ಕುರ್ಮೋ ಗೃಹಿಣಿ ಗಹನೋ ಜೀವನವಿಧಿಃ ||

" ಈ ಬರಗಾಲದಲ್ಲಿ ಭಿಕ್ಷೆ ದೊರೆಯುವುದೂ ಕಷ್ಟ. ದುರವಸ್ಥೆಯಲ್ಲಿರುವವರಿಗೆ ಋಣವಾದರೂ ದೊರೆಯುವುದೆಂತು ? ದ್ವಿಜಸಹಜವಾದ ಈಗಿನಕಾಲದಲ್ಲಿ ಕರ್ಮಗಳನ್ನು ವಿಧ್ಯುಕ್ತವಾಗಿ ಮಾಡಿಸುವರಾರು ?

ಗ್ರಾಸವನ್ನು ನೀಡದೆಯೇ ಗ್ರಹಪತಿಯು ಅಸ್ತವಾಗುತ್ತಿದ್ದಾನೆ. ಎಲ್ಲಿಗೆ ಹೋಗೋಣ! ಏನು ಮಾಡೋಣ! ಎಲೌ ಗೃಹಿಣಿ, ಜೀವನ ಸಮಸ್ಯೆಯು ಬಹು ಕಠಿನವಾದುದು ಎಂದು ಹೇಳುತ್ತಿರಲು ಯಾಚಕರು ಬಂದ ದಾರಿ ಹಿಡಿದರು. ಅದನ್ನು ಕಂಡು ಮಾಘನು—

ವ್ರಜತ ವ್ರಜತ ಪ್ರಾಣಾ ಅರ್ಥಿನಿ ವ್ಯರ್ಥತಾಂ ಗತೇ
ಪಶ್ಚಾದಪಿ ಹಿ ಗಂತವ್ಯಂ ಕ್ವ ಸಾರ್ಥಃ ಪುನರೀದೃಶಃ ||

ಎಲೈ ಪ್ರಾಣಗಳೇ, ಅರ್ಥಿಗಳು ನಿರಾಶರಾಗಿ ಹಿಂದಿರುಗಿದಮೇಲಾದರೂ ನೀವು ಹೋಗಬಾರದೆ ಎಂದು ಹೇಳುತ್ತ ಪರಲೋಕವನ್ನೈದಿದನು. ಆಗ ಮಾಘ ಪತ್ನಿಯು—

"ಸೇವಂತೇ ಸ್ಮ ಗೃಹಂ ಯಸ್ಯ ದಾಸವದ್ಭೂಭುಜಃ ಪುರಾ
ಹಾದ್ಯ ! ಭಾರ್ಯಾಸಹಾಯೋಽಯಂ ಮ್ರಿಯತೇ ಮಾಘಪಂಡಿತಃ"

ಮೊದಲು ರಾಜನು ಭೃತ್ಯನಂತೆ ಯಾವನ ಗೃಹವನ್ನು ಸೇವಿಸುತ್ತಿದ್ದನೋ ಅಂಥ ಮಾಘಪಂಡಿತನು ಇಂದು ಮೃತನಾದನು. ಅಯ್ಯೋ! ಅಂಥವನ ಪತ್ನಿಗೆ ಇಂದು ಇಂಥ ದುರ್ದೆಶೆಯೆ!" ಎಂದಳು.

ಈ ಸಮಾಚಾರವನ್ನು ತಿಳಿದು ರಾಜನು ಮೌನ ಧರಿಸಿ ಕಾಲ್ನಡಿಗೆಯಿಂದ ಅಲ್ಲಿಗೆ ಬಂದನು. ನೂರಾರು ಮಂದಿ ಬ್ರಾಹ್ಮಣರ ಸಮೇತನಾಗಿ ಮಾಘನ ಕಳೇವರವನ್ನು ನರ್ಮದಾತೀರಕ್ಕೊಯ್ದು ವಿಧ್ಯುಕ್ತವಾಗಿ ಸಂಸ್ಕಾರವೆಸಗಿದನು. ಮಾಘಪತ್ನಿಯು ಅಗ್ನಿಪ್ರವೇಶಮಾಡಿದಳು. ರಾಜನು ಮಾಘನಿಗೆ ಮಗನಂತೆ ಉತ್ತರಕ್ರಿಯೆಗಳನ್ನು ಮಾಡಿದನು.

ಜೈನ ಮೇರುತುಂಗಾಚಾರ್ಯನ 'ಪ್ರಬಂಧ ಚಿಂತಾಮಣಿ' ಯಲ್ಲಿ (೧೩೬೧) ಭೋಜರಾಜನು ಮಾಘನ ವಿದ್ವತ್ತೆಯನ್ನು ಕೇಳಿ ಅವನ ದರ್ಶನಾಭಿಲಾಷೆಯಿಂದ ಅವನನ್ನು ಗೌರವದಿಂದ ಬರಮಾಡಿಕೊಂಡನೆಂದು ಉಕ್ತವಾಗಿದೆ.

ಪ್ರಭಾಚಂದ್ರನು (೧೩೩೪) ವಿಕ್ರಮ ಸಂವತ್ಸರದಲ್ಲಿ ರಚಿಸಿದ ಪ್ರಭಾವಕಚರಿತೆ' ಯಲ್ಲಿ ಮಾಘನು ಭೋಜರಾಜನ ಬಾಲಮಿತ್ರನೆಂದು ಹೇಳಿದೆ.

(ii) ಮಾಘಕವಿಯ ಇತರ ಕೃತಿಗಳು.

‘ ಶಿಶುಪಾಲ ವಧ ’ ದ ಹೊರತು ಮಾಘಕವಿಯ ಬೇರೆ ಗ್ರಂಥಗಳು ನಮಗೆ ಉಪಲಬ್ಧವಾಗಿಲ್ಲ. ಭಾರವಿಯ ಹಾಗೆ ಇದೊಂದೇ ಗ್ರಂಥದಿಂದ ಮಾಘನ ಕೀರ್ತಿ ಪ್ರಸಿದ್ಧವಾಗಿದೆ. ಆದರೆ ವಲ್ಲಭದೇವನ ‘ ಸುಭಾಷಿತಾವಳಿ ’ ಮತ್ತು ಕ್ಷೇಮೇಂದ್ರನ ‘ ಔಚಿತ್ಯವಿಚಾರ ಚರ್ಚಾ ’ ಎಂಬ ಗ್ರಂಥಗಳಲ್ಲಿ ಮಾಘನವೆಂದು ಉದಾಹೃತವಾಗಿರುವ ಈ ಕೆಳಗೆ ಕಂಡ ಶ್ಲೋಕಗಳು ಶಿಶುಪಾಲವಧದಲ್ಲಿ ಕಾಣದಿರುವುದರಿಂದ ಆತನು ಬೇರೆ ಗ್ರಂಥಗಳನ್ನೂ ಬರೆದಿದ್ದಿರಬಹುದೆಂದು ಊಹಿಸಲು ಅವಕಾಶವಿದೆ.

ಶೀಲಂ ಶೈಲ ತಟಾತ್ ಪತತ್ವಭಿಜನಃ ಸಂದಹ್ಯತಾಂ ವಹ್ನಿನಾ
ಮಾಶ್ರ್ರೌಷಂ ಜಗತಿ ಶ್ರುತಸ್ಯ ವಿಫಲಕ್ಲೇಶಸ್ಯ ನಾಮಾಪ್ಯಹಂ ।
ಶೌರ್ಯೇ ವೈರಿಣಿ ವಜ್ರಮಾಶು ನಿಪತತ್ವರ್ಥೋಽಸ್ತು ಮೇ ಸರ್ವದಾ
ಯೇನೈಕೇನ ವಿನಾ ಗುಣಾಸ್ತೃಣಬುಸಪ್ರಾಯಾಃ ಸಮಸ್ತಾ ಅಮೀ ॥
ನಾರೀನಿತಂಬಫಲಕೇ ಪ್ರತಿಬದ್ಧ್ಯಮಾನಾ
ಹಂಸೀವ ಹೇಮರಶನಾ ಮಧುರಂ ರರಾಸ ।
ತನ್ಮೋಚನಾರ್ಥಮಿವ ನೂಪುರರಾಜಹಂಸಾಃ
ಚಕ್ರಂದುರಾರ್ತಮುಖರಂ ಚರಣಾವಲಗ್ನಾಃ ॥

(ಸುಭಾಷಿತಾವಳಿ)

ಬುಭುಕ್ಷಿತೈರ್ವ್ಯಾಕರಣಂ ನ ಭುಜ್ಯತೇ
ಪಿಪಾಸಿತೈಃ ಕಾವ್ಯರಸೋ ನ ಪೀಯತೇ ।
ನ ವಿದ್ಯಯಾ ಕೇನಚಿದುದ್ಧೃತಂ ಕುಲಂ
ಹಿರಣ್ಯಮೇವಾರ್ಜಯ ನಿಷ್ಫಲಾಃ ಕಲಾಃ ॥

(ಔಚಿತ್ಯವಿಚಾರ ಚರ್ಚಾ)

(iii) ಶಿಶುಪಾಲವಧ ಟೀಕೆಗಳು

ಮಹಾಕವಿ ಮಾಘನ ಶಿಶುಪಾಲವಧಕ್ಕೆ ಇದುವರೆಗೆ ಎಂಟುಮಂದಿ ಟೀಕೆ (ವ್ಯಾಖ್ಯಾನ) ಗಳನ್ನು ಬರೆದಂತೆ ತಿಳಿದುಬರುತ್ತದೆ. ಅವು ಕ್ರಮವಾಗಿ

ಹೀಗಿವೆ. (೧) ವಲ್ಲಭದೇವನ 'ಸಂದೇಹವಿಷೌಷಧ, (೨) ರಂಗರಾಜಕೃತ ಟೀಕೆ, (೩) ಏಕನಾಥಕೃತಟೀಕೆ, (೪) ಚರಿತ್ರವರ್ಧನಕೃತಟೀಕೆ, (೫) ಭರತಮಲ್ಲಿಕಕೃತ 'ಸುಬೋಧ' (೬) ದಿನಕರಮಿಶ್ರಕೃತ 'ಸುಬೋಧಿನೀ', (೭) ಮಲ್ಲಿನಾಥಕೃತ 'ಸರ್ವಂಕಷಾ'. ಇವುಗಳಲ್ಲಿ ಮಲ್ಲಿನಾಥಕೃತ ಟೀಕೆಯೇ ಎಲ್ಲ ವಿಧದಿಂದಲೂ ಪರಿಪೂರ್ಣವಾದುದೆಂದು ವಿದ್ವಾಂಸರ ಅಭಿಪ್ರಾಯ. ಇದು ಕಾಶ್ಮೀರದೇಶವೊಂದನ್ನು ಬಿಟ್ಟು ಉಳಿದ ಎಲ್ಲಕಡೆಯೂ ಪ್ರಚಾರದಲ್ಲಿದೆ ಎಂದು ತಿಳಿದುಬಂದಿದೆ. ಮಹಾವಿದ್ವಾಂಸನಾದ ಮಲ್ಲಿನಾಥನು ಕ್ರಿ. ಶ. ೧೪ನೆಯ ಶತಮಾನದಲ್ಲಿದ್ದನೆಂದೂ ಆತ ಆಂಧ್ರದೇಶೀಯನೆಂದೂ ಹೇಳಲಾಗುತ್ತಿದೆ. "ಮಾಘೇ ಮೇಘೇ ಗತಂ ವಯಃ" ಎಂಬ ಮಲ್ಲಿನಾಥನ ಉಕ್ತಿಯು ಮಾಘಕೃತಿಯ ವ್ಯಾಖ್ಯಾನದ ಬಗ್ಗೆ ಆತನಿಗಿದ್ದ ಪ್ರೇಮವನ್ನು ವ್ಯಕ್ತಪಡಿಸುವುದಾಗಿದೆ.

ಯೇ ಶಬ್ದಾರ್ಥಪರೀಕ್ಷಣಪ್ರಣಯಿನೋ ಯೇ ವಾ ಗುಣಾಲಂಕ್ರಿಯಾ
ಶಿಕ್ಷಾಕೌತುಕಿನೋ ವಿಹರ್ತುಮನಸೋ ಯೇ ಚ ಧ್ವನೇರಧ್ವನಿ ।
ಕ್ಷುಭ್ಯದ್ಭಾವ ತರಂಗಿತೇ ರಸಸುಧಾಪೂರೇ ಮಿಮಂಕ್ಷಂತಿ ಯೇ
ತೇಷಾಮೇವ ಕೃತೇ ಕರೋಮಿ ವಿವೃತಿಂ ಮಾಘಸ್ಯ ಸರ್ವಂಕಷಾಂ ॥

ಎಂದರೆ "ಯಾರು ಶಬ್ದಾರ್ಥಗಳ ಔಚಿತ್ಯಾದಿಗಳನ್ನು ಪರೀಕ್ಷಿಸಲು ಬಯಸುವರೊ, ಯಾರು ಗುಣಾಲಂಕಾರಗಳಲ್ಲಿ ಶಿಕ್ಷಣ ಪಡೆಯಲಿಚ್ಛಿಸುವರೊ, ಯಾರು ಕೇವಲ ಧ್ವನಿ (ವ್ಯಂಗ್ಯಾರ್ಥ) ಮಾರ್ಗದಲ್ಲಿ ಮಾತ್ರ ವಿಹರಿಸಲು ಬಯಸುವರೊ, ಭಾವತರಂಗಗಳಿಂದ ಕ್ಷೋಭೆಗೊಂಡ ರಸ ಸುಧಾಪೂರದಲ್ಲಿ ಮುಳುಗಲಪೇಕ್ಷಿಸುವವರಿಗಾಗಿಯೇ ನಾನು ಈ ಮಾಘಕಾವ್ಯಕ್ಕೆ ಸರ್ವಂಕಷಾ ಎಂಬ ವ್ಯಾಖ್ಯಾನವನ್ನು ಬರೆಯಲು ಉದ್ಯುಕ್ತನಾಗಿದ್ದೇನೆ" ಎಂಬ ಮಲ್ಲಿನಾಥನ ಉಕ್ತಿ ಮಾಘಕಾವ್ಯದ ಉತ್ಕರ್ಷದ ಬಗ್ಗೆ ಒಂದು ಪ್ರಶಸ್ತಿಯನ್ನೇ ಬರೆದುಕೊಟ್ಟಂತಿದೆ.

ಇಹಾನ್ವಯಮುಖೇನೈವ ಸರ್ವಂ ವ್ಯಾಖ್ಯಾಯತೇ ಮಯಾ ।
ನಾಮೂಲಂ ಲಿಖ್ಯತೇ ಕಿಂಚಿನ್ನಾನಪೇಕ್ಷಿತಮುಚ್ಯತೇ ॥

ಎಂಬ ಆತನ ಪ್ರತಿಜ್ಞೆ ಸಾರ್ಥಕವಾದದು.

(iv) ಕಥಾವಸ್ತು

ಇಂದ್ರ ಸಂದೇಶವನ್ನು ತಿಳಿಸಲು ಬಂದ ನಾರದನು ಶ್ರೀಕೃಷ್ಣನಿಂದ ಸತ್ಕೃತನಾಗಿ ಅವನಿಗೆ ಶಿಶುಪಾಲನ ಪೂರ್ವಜನ್ಮಗಳ ವೃತ್ತಾಂತವನ್ನು ಸಂಕ್ಷೇಪವಾಗಿ ತಿಳಿಸುತ್ತಾನೆ. "ಹಿಂದೆ ವೈಕುಂಠದ ದ್ವಾರಪಾಲಕರಾಗಿದ್ದ ಜಯ ವಿಜಯರು ಮುನಿಶಾಪವಶರಾಗಿ ವಿಷ್ಣುವಿಗೆ ಶತ್ರುಗಳಾಗಿ ಮೂರು ಜನ್ಮಗಳನ್ನು ತಳೆಯಬೇಕೆಂದು ಮಹಾವಿಷ್ಣುವಿನಿಂದ ಅನುಗ್ರಹಿಸಲ್ಪಟ್ಟರು. ಅವರ ಮೊದಲನೆಯ ಜನ್ಮ ಹಿರಣ್ಯಾಕ್ಷ ಹಿರಣ್ಯಕಶಿಪುರದು. ಇವರ ದೌರ್ಜನ್ಯವನ್ನು ಸಹಿಸಲಾರದೆ ನೀನು ಹಿರಣ್ಯಾಕ್ಷನನ್ನು ವರಾಹ ರೂಪದಿಂದಲೂ, ಹಿರಣ್ಯಕಶಿಪುವನ್ನು ನರಸಿಂಹರೂಪದಿಂದಲೂ ಸಂಹರಿಸಿದೆ. ಎರಡನೆಯ ಜನ್ಮ ರಾವಣ ಕುಂಭಕರ್ಣರದು. ರಾಮಾವತಾರದಲ್ಲಿ ಅವರು ನಿನ್ನಿಂದ ವಧಿಸಲ್ಪಟ್ಟರು. ಮತ್ತೆ ಅವರೇ ಭೂಮಿಕೆಗಳನ್ನು ಬದಲಿಸುವ ನಟರಂತೆ ಈಗ ಶಿಶುಪಾಲ ದಂತವಕ್ತ್ರರಾಗಿ ಜನ್ಮಧಾರಣ ಮಾಡಿದ್ದಾರೆ. ಶಿಶುಪಾಲನ ಕಿರುಕುಳದಿಂದ ಲೋಕಗಳು ತಲ್ಲಣಿಸುತ್ತಿವೆ. ಅವನ ಮೇಲೆ ದಂಡೆತ್ತಿಹೋಗಿ ಬೇಗ ವಧಿಸು." ಎಂಬ ಇಂದ್ರಸಂದೇಶವನ್ನು ನಾರದನು ಶ್ರೀಕೃಷ್ಣನಿಗೆ ನಿವೇದಿಸಿ ಹೊರಟುಹೋಗುವನು. (೧) ಇಷ್ಟರಲ್ಲಿ ಇಂದ್ರಪ್ರಸ್ಥನಗರದಲ್ಲಿ ರಾಜಸೂಯ ಯಾಗೋದ್ಯುಕ್ತನಾದ ಯುಧಿಷ್ಠಿರನು ಶ್ರೀಕೃಷ್ಣನಿಗೆ ಆಹ್ವಾನವಿತ್ತು, ಅಧ್ಯಕ್ಷತೆ ವಹಿಸಿ ಯಾಗವನ್ನು ಸಾಂಗವಾಗಿ ನೆರವೇರಿಸಿಕೊಟ್ಟು ತನ್ನನ್ನು ಅನುಗ್ರಹಿಸಬೇಕೆಂದು ಕರೆ ಕಳುಹಿಸಿದ್ದನು. ಪ್ರಕೃತ ಇಂದ್ರಸಂದೇಶದಂತೆ ಶಿಶುಪಾಲನಮೇಲೆ ದಂಡೆತ್ತಿಹೋಗುವುದೇ? ಅಥವಾ ತನ್ನನ್ನೇ ನಂಬಿ ಯಾಗವನ್ನು ಆರಂಭಿಸಿರುವ ಧರ್ಮಜನ ಪ್ರಾರ್ಥನೆಯಂತೆ ಇಂದ್ರಪ್ರಸ್ಥಕ್ಕೆ ತೆರಳುವುದೇ? ಎಂಬ ವಿಷಯದಲ್ಲಿ ಶ್ರೀಕೃಷ್ಣನು ಯೋಚಿಸತೊಡಗಿದನು.

ಈ ಸಮಸ್ಯೆಯನ್ನು ಬಗೆಹರಿಸಲು ಕೃಷ್ಣನು ಅಣ್ಣ ಬಲರಾಮನನ್ನು ಮತ್ತು ಜ್ಞಾನವೃದ್ಧ ಉದ್ಧವನನ್ನು ಬರಮಾಡಿಕೊಂಡು ಈ ವಿಷಯವನ್ನು ಚರ್ಚಿಸಿ ಕರ್ತವ್ಯವನ್ನು ನಿರ್ಧರಿಸಬೇಕೆಂದು ಮನಸ್ಸು ಮಾಡಿದನು. ಈ ಇಬ್ಬರಲ್ಲಿ ಬಲರಾಮನು ಬಿಸಿರಕ್ತದ ವೀರ. ಆತ 'ರಿಪುವೆಸಗಿದ ದುಷ್ಕೃತಿ' ಗಳನ್ನು

ನೆನೆದು 'ರಮಣಿ ಬಿಂಬಾಧರವ ಚುಂಬಿಸಲು ಪಟುವೆನಿಪ ತುಟಿಯುಲುಗೆ' ನುಡಿಯತೊಡಗಿದನು. ಉದ್ಧತನಾದ ಶಿಶುಪಾಲನಮೇಲೆ ದಂಡೆತ್ತಿ ಹೋಗುವುದೇ ಉಚಿತವೆಂದು ಹೇಳಿ, ಅನೇಕ ನಿದರ್ಶನಗಳಿಂದ ತನ್ನ ಪಕ್ಷವನ್ನು ಸಮರ್ಥಿಸುವನು. ಬಳಿಕ ಉದ್ಧವನು ಬಲರಾಮನ ಪೂರ್ವಪಕ್ಷಕ್ಕೆ ಸದುತ್ತರಗಳನ್ನಿತ್ತು, ಶಿಶುಪಾಲನನ್ನು ವಧಿಸುವುದಕ್ಕೆ ಇದು ಸಕಾಲವಲ್ಲವೆಂದೂ, ಅವನೇ ನಿಷ್ಕಾರಣವಾಗಿ ಎದುರುಬೀಳುವ ಸಂದರ್ಭವನ್ನು ಕಲ್ಪಿಸಿಕೊಂಡು ಅನಾಯಾಸವಾಗಿ ಅವನನ್ನು ಕೊಲ್ಲುವುದು ಪ್ರಶಸ್ತವೆಂದೂ ಸಲಹೆ ನೀಡುವನು. ಮೇಲಾಗಿ ಶಿಶುಪಾಲನು ಹುಟ್ಟಿದಾಗ್ಗೆ ಕೃಷ್ಣನ ಸೋದರತ್ತೆ (ಶಿಶುಪಾಲನ ತಾಯಿ) ಸಾತ್ವತಿಗೆ ಕೊಟ್ಟಿದ್ದ ಭಾಷೆಯಂತೆ ಶಿಶುಪಾಲನ ಒಂದು ನೂರು ತಪ್ಪುಗಳನ್ನು ಕ್ಷಮಿಸುವುದು ಯುಕ್ತವೆಂದು ಉದ್ಧವನು ನೆನಪಿಸಿದನು. ಇದರಿಂದ ಇಂದ್ರಪ್ರಸ್ಥಕ್ಕೆ ತೆರಳುವುದೇ ಉಚಿತವೆಂದು ನಿರ್ಣಯವಾಯಿತು. (೨).

ಪ್ರಯಾಣ ಸಿದ್ಧತೆಗಳಾಗುತ್ತಿದ್ದವು. ಉತ್ಸವಕಾಲವಾದ್ದರಿಂದ ಯಾದವರು ಕುಟುಂಬ ಪರಿವಾರ ಸಮೇತವಾಗಿ ಹೊರಟಿದ್ದಾರೆ. ದೇವಿಯರ ಸಡಗರ. ಶ್ರೀಕೃಷ್ಣನು ದಿವ್ಯಾಸ್ತ್ರಗಳನ್ನು ಧರಿಸಿ ಸಿದ್ಧನಾದನು. ಚತುರಂಗ ಬಲಸಮೇತವಾಗಿ ಉತ್ಸವವು ದ್ವಾರಕೆಯ ರಾಜಬೀದಿಗಳಲ್ಲಿ ನಿಧಾನವಾಗಿ ಸಾಗುತ್ತಿತ್ತು. ಹೃದಯಂಗಮವಾದ ಪುರವೀಥಿಗಳ ಮತ್ತು ಸಮುದ್ರ ವರ್ಣನೆಗಳು. (೩). ಸೈನ್ಯಸಮೇತನಾಗಿ ಶ್ರೀಕೃಷ್ಣನು ಸಮುದ್ರವನ್ನು ಹಾಯ್ದು ರೈವತಕ ಪರ್ವತದ ತಪ್ಪಲನ್ನು ಸೇರಿದನು. (೪). ಪರ್ವತದ ಮನೋಹರವಾದ ಸಾನುಪ್ರದೇಶಗಳಲ್ಲಿ ವಿಹರಿಸುವುದಕ್ಕಾಗಿ ಅಲ್ಲಿಯೇ ಬಿಡಾರ ಮಾಡಲಾಯಿತು. (೫). ಅತಿಥಿಯಾಗಿ ಬಂದಿರುವ ಶ್ರೀಕೃಷ್ಣನನ್ನು ಸೇವಿಸಲು ಆರು ಋತುಗಳೂ ಒಮ್ಮೆಯೇ ಅಡಿಯಿಟ್ಟವು. (೬). ಪುಷ್ಪಾಪಚಯ (೭). ಜಲಕೇಳಿ (೮). ಸಂಧ್ಯಾಚಂದ್ರೋದಯ ವರ್ಣನೆಗಳು (೯). ರಾತ್ರಿವಿಲಾಸ (೧೦), ಪ್ರಭಾತವರ್ಣನ, (೧೧). ಸೈನ್ಯವು ಮುನ್ನಡೆದು ಯಮುನೆಯನ್ನು ದಾಟುವುದು, (೧೨). ಉತ್ಸವಕ್ಕಾಗಿ ಆಗಮಿಸಿರುನ ಶ್ರೀಕೃಷ್ಣನನ್ನು ಯುಧಿಷ್ಠಿರನು ತಮ್ಮಂದಿರೊಡನೆ ಭಕ್ತಿಯಿಂದ ಎದು

ರುಗೊಂಡು ವೈಭವದಿಂಡ ಬರಮಾಡಿಕೊಳ್ಳುವುದು. ಉತ್ಸವದಿಂದ ಬರುತ್ತಿರುವ ಶ್ರೀಕೃಷ್ಣನನ್ನು ಕಂಡು ನಲಿವ ನಗರಸ್ತ್ರೀಯರ ಸಡಗರ, ಸಭಾಭವನದ ರಮ್ಯ ವರ್ಣನೆಗಳು (೧೩).

ರಾಜಸೂಯ ಯಾಗಾರಂಭ. ಅಗ್ರಪೂಜೆಗೆ ಶ್ರೀಕೃಷ್ಣನೇ ಅರ್ಹನೆಂದು ಸಭೆಯಲ್ಲಿ ಭೀಷ್ಮನು ಘೋಷಿಸುವುದು (೧೪). ಇದರಿಂದ ಶಿಶುಪಾಲ ಮತ್ತು ಆತನ ಪಕ್ಷದವರು ಸಿಡಿಮಿಡಿಗೊಳ್ಳುವುದು. ಶಿಶುಪಾಲನು ಯಾಗಶಾಲೆಯಿಂದ ಹೊರಬಿದ್ದು ಸೈನ್ಯವನ್ನು ಸಿದ್ಧಪಡಿಸುವುದು. (೧೫). ಶಿಶುಪಾಲನ ದೂತನಿಗೂ ಪಾಂಡವರಿಗೂ ನಡೆದ ಸಂಧಾನಗಳು ವಿಫಲವಾಗುವುದು (೧೬) ಶ್ರೀಕೃಷ್ಣನು ಶಿಶುಪಾಲನ ದೌಷ್ಟ್ಯವು ಮಿತಿಮಿೀರಿತೆಂದು ಬಗೆದು ಸೈನ್ಯ ಸಮೇತನಾಗಿ ಯುದ್ಧಕ್ಕೆ ಸಿದ್ಧನಾಗುವುದು. (೧೭) ಎರಡುಸೈನ್ಯಗಳ ತುಮುಲಯುದ್ಧ (೧೮). ಚಿತ್ರಯುದ್ಧ (೧೯). ಶ್ರೀಕೃಷ್ಣ ಶಿಶುಪಾಲರ ದ್ವಂದ್ವಯುದ್ಧ. ಶ್ರೀಕೃಷ್ಣನ ಚಕ್ರದಿಂದ ಶಿಶುಪಾಲನ ವಧೆ. (೨೦)

v ಕಾವ್ಯ ಸಮೀಕ್ಷೆ

ಇದರಮೂಲ ಮಹಾಭಾರತ ಮತ್ತು ಶ್ರೀಮದ್ಭಾಗವತ ದಶಮಸ್ಕಂಧ ೭೪ನೆಯಅಧ್ಯಾಯ)ಗಳಲ್ಲಿ ಉಕ್ತವಾಗಿದೆ. ಮೂಲಕಥೆಗೂ ಶಿಶುಪಾಲವಧಕ್ಕೂ ಕಥಾವಿಸ್ತಾರದಲ್ಲಿ ಅಂತರವಿದೆ. ಕಾವ್ಯಾರಂಭದಲ್ಲಿ ಬರುವ ನಾರದ ಸಂಭಾಷಣೆ ಮತ್ತು ಎರಡನೆಯ ಸರ್ಗದಲ್ಲಿ ಬರುವ ಮಂತ್ರಾಲೋಚನೆಗಳು ಸಂಪೂರ್ಣ ಕವಿಕಲ್ಪಿತಗಳೇ ಆಗಿವೆ. ಭಾಗವತಕಥೆಯ ಪ್ರಕಾರ ರಾಜಸೂಯ ಯಾಗಕ್ಕೆ ಬಂದಿದ್ದ ಶ್ರೀಕೃಷ್ಣ, ಶಿಶುಪಾಲ ಮೊದಲಾದವರು ಯಜ್ಞಸಭೆಯಲ್ಲಿ ಸೇರಿದ್ದಾಗ ಅಗ್ರಪೂಜಾಯೋಗ್ಯನು ಶ್ರೀಕೃಷ್ಣನೆಂದು ಹೊಗಳುತ್ತಿರುವ ಸಹದೇವನ ಮಾತನ್ನು ಕೇಳಿ ಕ್ರುದ್ಧನಾದ ಶಿಶುಪಾಲನು ತುಂಬಿದ ಸಭೆಯಲ್ಲಿ ಶ್ರೀಕೃಷ್ಣನನ್ನು ಜರೆಯುವನು. ಆಗ ಕೃಷ್ಣನು ಚಕ್ರಾಯುಧದಿಂದ ಶಿಶುಪಾಲನನ್ನು ವಧಿಸುವನು: ಮಹಾಭಾರತದಲ್ಲಿ "ಅಗ್ರಪೂಜೆಗೆ" ಶ್ರೀಕೃಷ್ಣನೇ

ಅರ್ಹನೆಂದು ಘೋಷಿಸಿದಮೇಲೆ ಶಿಶುಪಾಲನು ಪ್ರತಿಭಟಿಸಿ ಕೃಷ್ಣನನ್ನು ನಿಂದಿಸತೊಡಗುವನು. ಆಗ ಅರ್ಘ್ಯವನ್ನು ಕೊಟ್ಟ ಹರಿವಾಣವನ್ನೇ ಚಕ್ರವಾಗಿ ಪ್ರಯೋಗಿಸಿ ಶ್ರೀಕೃಷ್ಣನು ಶಿಶುಪಾಲನನ್ನು ಕೊಲ್ಲುವನು. ಈ ಭಾಗವನ್ನು ಕವಿಯು ಯಥೋಚಿತವಾಗಿ ಬದಲಾಯಿಸಿಕೊಂಡು ಇಪ್ಪತ್ತು ಸರ್ಗಗಳಲ್ಲಿ (ಪದ್ಯ ೧೬೪೫) ಕಥೆಯನ್ನು ಬೆಳೆಸಿಕೊಂಡಿದ್ದಾನೆ. ಮುಖ್ಯವಾಗಿ ಇಲ್ಲಿ ಶಿಶುಪಾಲನು ಯಜ್ಞಶಾಲೆಯಿಂದ ನಿರ್ಗಮಿಸಿದಮೇಲೆ ಎರಡುಕಡೆಯೂ ಸೈನ್ಯಗಳು ಯುದ್ಧಕ್ಕೆ ಸಿದ್ಧವಾಗುವುದು, ಮಧ್ಯಸ್ಥಿಕೆ ನಡೆಯುವುದು, ಶಿಶುಪಾಲನು ಎಲ್ಲವಿಧವಾದ ಒಪ್ಪಂದವನ್ನು ನಿರಾಕರಿಸಿದ್ದರಿಂದ ಯತ್ನವಿಲ್ಲದೆ ಕೃಷ್ಣನು ಯುದ್ಧಮಾಡಬೇಕಾಗಿಬಂದು ಶಿಶುಪಾಲನ ವಧೆ ನಡೆದುಹೋಗುವುದು. ಈ ಭಾಗವು ಕವಿಯ ಕಲ್ಪನಾಶಕ್ತಿ ಮತ್ತು ಔಚಿತ್ಯಪರಿಜ್ಞಾನಗಳನ್ನು ಚೆನ್ನಾಗಿ ವ್ಯಕ್ತಗೊಳಿಸುತ್ತದೆ.

ಮಾಘಕವಿಯ ಕಾವ್ಯಸಮೀಕ್ಷೆಯನ್ನು ಮಾಡುವ ಮೊದಲು ಆತನ ಕಾಲದ ಜನಾಭಿರುಚಿಯನ್ನು ಪರಿಶೀಲಿಸುವುದು ಅತ್ಯಾವಶ್ಯಕ. ಕಾವ್ಯನವೋದಯ ಮತ್ತು ಅದರ ವಿಕಾಸಗಳ ಕಾಲವನ್ನು ವಿದ್ವಾಂಸರು ಮೂರು ಘಟ್ಟಗಳಾಗಿ ವಿಭಾಗಿಸುತ್ತಾರೆ.

ಇವುಗಳಲ್ಲಿ ಮೊದಲನೆಯದು ವಾಲ್ಮೀಕಿ ವ್ಯಾಸರ **ಕಾವ್ಯೋನ್ಮೇಷಕಾಲ.** ಋಷಿಕವಿಗಳೆನಿಸಿದ ಇವರು ರಚಿಸಿದ ಶ್ರೀಮದ್ರಾಮಾಯಣ ಮತ್ತು ಮಹಾಭಾರತಗಳಲ್ಲಿ ಕಾವ್ಯರಸಗಂಗೆ ಮುಮ್ಮೊದಲು ಚಿಮ್ಮಿತು. ವಾಲ್ಮೀಕಿಯ ದಿವ್ಯಕೃತಿಯಲ್ಲಿ ಆದರ್ಶಮಾನವ ಜೀವನ ವಿಕಾಸದ ಸರ್ವತೋಮುಖವಾದ ವೈವಿಧ್ಯವು ಹೃದಯಂಗಮವಾಗಿ ನಿರೂಪಿತವಾಗಿದೆ. ಅಲ್ಲಿ ಜೀವನಾನುಭವದ ಎಲ್ಲವಿಧವಾದ ಅಳುಕು ಬೆಳಕುಗಳು, ರಸ ವಿರಸಗಳು, ಮತ್ತು ಪ್ರಶಾಂತ ವಿಕ್ಷುಬ್ಧತೆಗಳು ಚಿತ್ತಚುಂಬಕವಾಗಿ ವರ್ಣಿತವಾಗಿವೆ. ವ್ಯಾಸರ ಭವ್ಯಕೃತಿಯಲ್ಲಾದರೋ ಮಾನವರ ಲೋಕಜೀವನದ ನಿತ್ಯಾನಿತ್ಯತೆಗಳು, ಬಾಂಧವ್ಯದ ಮಧುರ ವಿರಸಗಳು, ಸ್ಥಿತಿ ಗತಿಗಳು, ನೆಲೆ ಬೆಲೆಗಳು, ಕರ್ತವ್ಯ ತ್ಯಕ್ತವ್ಯಗಳು, ಮತ್ತು ಜೀವನದ ಪರಮಾರ್ಥವೇ ಮೊದಲಾದ ವೈವಿಧ್ಯಗಳು ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ಇವೇ ಮೊದಲಾದ ಅನೇಕ ಪುರಾಣೇತಿಹಾಸಾದಿಗಳ

ವಿಮಲಗಂಗಾಪ್ರವಾಹಗಳ ಸಂಗಮಸ್ಥಾನವೇ ಕಾಳಿದಾಸನ ಕಾವ್ಯಪ್ರಬೋಧಕ ಪ್ರಯಾಗವೆಂದು ಧಾರಾಳವಾಗಿ ಹೇಳಬಹುದು.

ಇದನ್ನೇ ಕಾಳಿದಾಸನ **ಸಹಜಕಾವ್ಯನವೋದಯ** ಕಾಲವೆನ್ನುವುದು. ರಸಋಷಿ ಕಾಳಿದಾಸನಲ್ಲಿ ವಾಲ್ಮೀಕಿಯ ಸರಳತೆಯ ಜೊತೆಗೆ ವ್ಯಾಸರ ಜೀವನ ವೈವಿಧ್ಯವೂ ಹದವರಿತು ಹರಿದಿದೆ. ಸಹಜ ಕಾವ್ಯಯುಗದ ಆಚಾರ್ಯಪಟ್ಟವನ್ನು ಗಳಿಸಿದಭಾಗ್ಯ ಕಾಳಿದಾಸನಿಗೆ ಬಂದುದು ಸಹಜವಾಗಿಯೇ ಇದೆ. ವಾಲ್ಮೀಕಿ ವ್ಯಾಸರ ನಿಸರ್ಗಸುಂದರ ಪೌರಾಣಿಕ ಶೈಲಿ ಕಾಳಿದಾಸನಲ್ಲಿ ಮೃದು ಮಧುರ ಪದಗುಂಫದಿಂದ ರಸಭರಿತ ದೇವವಾಹಿನಿಯಾಗಿ ಮಾರ್ಪಟ್ಟಿತು. ವಾಸ್ತವವಾಗಿ ಹೇಳಬೇಕಾದರೆ ಕಾವ್ಯಧರ್ಮದ ಆರಂಭ ಕಾಳಿದಾಸನಿಂದಲೇ ಆಯಿತೆಂದು ಹೇಳಬಹುದು. ಅಪೂರ್ವ ಸಂಸ್ಕಾರ ಜನ್ಯವಾದ ಆತನ ಪ್ರತಿಭಾ ತೂಲಿಕೆಯಿಂದ ಕಡೆಯಲ್ಪಟ್ಟ ಭವ್ಯ ಕಾವ್ಯಚಿತ್ರಗಳು ಆತನ ಅಮರ ಕಾವ್ಯಗಳಲ್ಲಿ ಚಿರವಿನೂತನತೆಯಿಂದ ಪ್ರಜ್ವಲಿಸುತ್ತಿವೆ.

ಮೂರನೆಯದೇ **ಕೃತಕಕಾವ್ಯಯುಗ.** ವಸ್ತುವಿಗಿಂತ ಹೆಚ್ಚಾಗಿ ಕಾವ್ಯದ ರೂಪ ರಚನೆಗಳಿಗೆ ಪ್ರಾಧಾನ್ಯವನ್ನಿತ್ತುದೇ ಕೃತಕ ಕಾವ್ಯಯುಗದ ಹಿನ್ನೆಲೆ. ವಾಸ್ತವಿಕತೆಯನ್ನು ಬದಿಗಿಕ್ಕಿ ಈ ಕೃತಕಶೈಲಿಯು ನಾನಾವಿಧವಾದ ಆಲಂಕಾರಿಕ ಲಕ್ಷಣಗಳೆಂಬ ಬಿರುಗಾಳಿಗೆ ಸಿಕ್ಕಿ ತನ್ನ ರಚನಾ ವೈಖರಿಯಿಂದಲೂ ಹೃದಯಕ್ಕೆ ಬದಲಾಗಿ ಓದುಗರ ಬುದ್ಧಿಯನ್ನು ಹೆಚ್ಚಾಗಿ ಮುಗ್ಧಗೊಳಿಸುವುದರಲ್ಲಿ ಮಗ್ನವಾದುದರ ಪರಿಣಾಮವೇ ಪಂಡಿತ ಕವಿಗಳ ಮೂರನೆಯ ಕಾವ್ಯಯುಗದ ಬುನಾದಿ. ಬೌದ್ಧಿಕ ಚಮತ್ಕಾರಗಳಿಗೆ ಪ್ರಾಶಸ್ತ್ಯವೀಯುವುದರಲ್ಲಿ ಕೃತಾರ್ಥವಾಗುತ್ತಿದ್ದ ಅಂದಿನ ಜನಾಭಿರುಚಿಯನ್ನು ಮನಗಂಡ ಪಂಡಿತವರ್ಗ ಕಾವ್ಯಲಕ್ಷಣಗಳನ್ನು ನಿರ್ಧರಿಸಲು ಪ್ರಯತ್ನಿಸಿದಂತೆ ಕಾಣುತ್ತದೆ. ಈ ದೃಷ್ಟಿಯಲ್ಲಿ ಕೃತಕ ಕಾವ್ಯಯುಗದ ಪ್ರಧಾನಪಟ್ಟ ಭಾರವಿಗೆ ಸಲ್ಲತಕ್ಕುದಾಗಿದೆ. ಆತನ ಕಾವ್ಯದಲ್ಲಿ ನಿರೂಪಿಸಿರುವ ವರ್ಣನೆಗಳನ್ನು ಮನಗಂಡ ತರುವಾಯವೇ ಭಾಮಹ ದಂಡಿ ಮೊದಲಾದ ಆಲಂಕಾರಿಕರು ಮಹಾ

ಕಾವ್ಯಲಕ್ಷಣ* ಗಳನ್ನು ತಮ್ಮ ಕೃತಿಗಳಲ್ಲಿ ನಿಯೋಜಿಸಿದಂತೆ ತೋರುತ್ತದೆ.

(vi) ಭಾರವಿ—ಮಾಘ

ಭಾರವಿಯ ಕಾಲದಿಂದೀಚೆಗೆ ಕವಿಪ್ರತಿಭೆ ಮೇಲೆ ಕಂಡ ಆಲಂಕಾರಿಕರ ಮಹಾಕಾವ್ಯಲಕ್ಷಣಕ್ಕೆ ತಲೆಬಾಗಿ ತನ್ನ ನಿರಂಕುಶತೆಯನ್ನು ಕಳೆದುಕೊಂಡು ತಡವರಿಸುತ್ತಾ ಮುಂದುವರಿದಂತೆ ಕಾಣುತ್ತದೆ. ಭಾರವಿಯಿಂದ ಆರಂಭವಾದ ಕೃತಕ ಕಾವ್ಯಶೈಲಿಯಲ್ಲಿ ಅಗ್ರಪೂಜೆ ಸಂದುದು ಮಾಘನೊಬ್ಬನಿಗೇ. ಮಾಘನು ಭಾರವಿಯ ಹಾದಿಯಲ್ಲಿ ನಡೆದನಾದರೂ ಇವನಿಂದ ಭಾರವಿಯ ಕೀರ್ತಿ ಕುಂಠಿತವೂ ಆಯಿತು. ಆದ್ದರಿಂದಲೇ–

---

* ನಗರಾರ್ಣವ ಶೈಲರ್ತು ಚಂದ್ರಾರ್ಕೋದಯ ವರ್ಣನೈಃ
ಉದ್ಯಾನಸಲಿಲಕ್ರೀಡಾ ಮಧುಪಾನರತೋತ್ಸವೈಃ ।
ವಿಪ್ರಲಂಭೈರ್ವಿವಾಹೈಶ್ಚ ಕುಮಾರೋದಯ ವರ್ಣನೈಃ ।
ಮಂತ್ರದ್ಯೂತಪ್ರಯಾಣಾಜಿ ನಾಯಕಾಭ್ಯುದಯೈರಪಿ ॥
ಅಲಂಕೃತಮಸಂಕ್ಷಿಪ್ತಂ ರಸಭಾವನಿರಂತರಂ ॥ (ಕಾವ್ಯಾದರ್ಶ ೧. ೧೬-೧೮)

ಸಂಧ್ಯಾಸೂರ್ಯೇಂದು ರಜನೀ ಪ್ರದೋಷಧ್ವಾಂತವಾಸರಾಃ
ಪ್ರಾತರ್ಮಧ್ಯಾಹ್ನ ಮೃಗಯಾ ಶೈಲರ್ತುವನಸಾಗರಾಃ ।
ಸಂಭೋಗ ವಿಪ್ರಲಂಭೌ ಚ ಮುನಿಸ್ವರ್ಗಪುರಾಧ್ವರಾಃ
ರಣಪ್ರಯಾಣೋಪಯಮಮಂತ್ರಪುತ್ರೋದಯಾದಯಃ
ವರ್ಣನೀಯಾ ಯಥಾಯೋಗಂ ಸಾಂಗೋಪಾಂಗಾ ಅಮೀ ಇಹ ॥
(ಸಾಹಿತ್ಯದರ್ಪಣ vi ೩೨೨-೨೪)

ವಾರಿಧಿಪರ್ವತಂ ಪುರಮಧೀಶ್ವರನುದ್ವಹಂ ಕುಮಾರನಂ
ಭೋರುಹ ವೈರಿಮಿತ್ರರುದಯಂ ಋತುನಂದನಮಂಬುಸೀಧುಕಾಂ ।
ತಾರತಿಚಿಂತೆಮಂತ್ರ ಚರಯಾನ ವಿರೋಧಿಜಯಂಗಳೆಂಬಿವಂ
ಸೂರಿಗಳಂಗಮೆಂದು ಕೃತಿಯೊಳ್ ಪದಿನೆಂಟುಮನೆಯ್ದೆ ಬಣ್ಣಿಪರ್ ॥
(ಮಲ್ಲಿಕಾರ್ಜುನನ ಸೂಕ್ತಿ ಸುಧಾರ್ಣವ)

ತಾವದ್ಭಾರವೇರ್ಭಾತಿ ಯಾವನ್ಮಾಘಸ್ಯ ನೋದಯಃ ।
ಉದಿತೇ ತು ಪುನರ್ಮಾಘೇ ಭಾರವೇರ್ಭಾರವೇರಿವ ॥

ಎಂಬ ಉಕ್ತಿ ಹುಟ್ಟಿದಂತೆ ತೋರುತ್ತದೆ. 'ಭಾರವಿ' ಎಂದರೆ ಸುಡುವ ಸೂರ್ಯ. 'ಮಾಘ' ಎಂದರೆ ಚಳಿಗಾಲ. ಕೇವಲ ಮಾಘೋದಯವಾಗುವ ವರೆಗೆ ಭಾರವಿಯ ತೇಜಸ್ಸು ಬೆಳಗುತ್ತದೆ. ಮಾಘೋ (ಮಾಘಕವಿ) ದಯ ವಾದ ತರುವಾಯ ಭಾರವಿಯ ತೇಜಸ್ಸು ರವಿಯ ತೇಜಸ್ಸಿನಂತೆ ಕುಂದುತ್ತದೆ. ಎಂಬ ಮಾತು ಮಾಘ ಮತ್ತು ಭಾರವಿಗಳ ಬಗ್ಗೆ ನಡೆದ ಸ್ಪರ್ಧೆಯನ್ನು ಸೂಚಿಸುತ್ತದೆ. ಮತ್ತು ಮಾಘನ ಉದ್ದಾಮ ಶೈಲಿಯನ್ನು ಮನಗಂಡ ಇತರ ಕವಿಗಳು

ಮಾಘೇನ ವಿಘ್ನಿತೋತ್ಸಾಹಾಃ ನೋತ್ಸಹಂತೇ ಪದಕ್ರಮಂ ।
ಸ್ಮರಂತೋ ಭಾರವೇರೇವ ಕವಯಃ ಕಪಯೋ ಯಥಾ ॥

ಎಂಬಂತೆ ಕಾವ್ಯಮಾರ್ಗದಲ್ಲಿ ಪದವಿಡಲು ಹಿಂಜರಿಯುತ್ತಿದ್ದಂತೆ ತೋರುತ್ತದೆ. ಅವರು ಚಳಿಗಾಲ (ಮಾಘ) ದಲ್ಲಿ ಹೆಜ್ಜೆಯಿಡಲು ಹಿಂದೆಗೆವ ಕಪಿಗಳಂತೆ ಭಾರವಿ (ಸುಡುವಸೂರ್ಯ) ಯನ್ನು ನೆನೆಯುವರು. ಹೀಗೆ ಭಾರವಿಯನ್ನು ಅಲ್ಲಗಳೆದು ಮಾಘನನ್ನು ಎತ್ತಿಗಟ್ಟುವುದಕ್ಕೆ ಕಾರಣಗಳು ಇಲ್ಲದಿಲ್ಲ. ಕನ್ನಡದಲ್ಲಿ ಪಂಪ ರನ್ನರಿಗಿರುವ ಗುರುಶಿಷ್ಯ ಭಾವವನ್ನು ಸಂಸ್ಕೃತದಲ್ಲಿ ಭಾರವಿ ಮತ್ತು ಮಾಘರಿಗೆ ಹೋಲಿಸಬಹುದು. ಏಕೆಂದರೆ ಮಾಘನು ಭಾರವಿಯ ಕಾವ್ಯಮಾರ್ಗವನ್ನು ಅನುಸರಿಸಿರುವನಾದರೂ ಮಾಘನಲ್ಲಿನ ಅಪೂರ್ವವಾದ ಗುಣಸಂಪತ್ತು ಆತನ ಸ್ಥಾನವನ್ನು ಸಾಹಿತ್ಯಸಾಮ್ರಾಜ್ಯದಲ್ಲಿ ಮೇಲ್ಮಟ್ಟಕ್ಕೊಯ್ದಿದೆ. ಈ ಕೆಳಗಿನ ಉದಾಹರಣೆಗಳಿಂದ ಇವರಿಬ್ಬರಲ್ಲಿನ ಹೋಲಿಕೆಗಳನ್ನು ಕಾಣಬಹುದು.

ಸರ್ಗ	ಕಿರಾತಾರ್ಜುನೀಯ
೧	ಯುಧಿಷ್ಠಿರನ ಪ್ರೇರಣೆಯಂತೆ ವನೇಚರನು ಕೌರವನ ರಾಜ್ಯಭಾರ ಕ್ರಮವನ್ನರಿತು ಬಂದು ಧರ್ಮರಾಜನಿಗೆ ನಿವೇದಿಸುವುದು.

(೧-೩) ಯುಧಿಷ್ಠಿರ-ದ್ರೌಪದಿ-ಭೀಮಸೇನರು ಕೌರವನ ಮೇಲೆ ಯುದ್ಧಹೂಡುವುದೇ ಅಥವಾ ಅಜ್ಞಾತವಾಸ ಕಳೆಯುವವರೆಗೂ ತಡೆಯುವುದೇ ಎಂದು ಸಮಾಲೋಚನೆ ಮಾಡುವುದು.

೫ ಹಿಮಾದ್ರಿ ವರ್ಣನೆ.

೪, ೧೦ ಶರದ್ವರ್ಣನೆ, ಷಡೃತು ವರ್ಣನೆ.

೮ ಪುಷ್ಪಾಪಚಯ ಮತ್ತು ಜಲಕೇಳಿ.

೯ ಸಂಧ್ಯಾ, ಚಂದ್ರೋದಯ, ಸುರತ, ಪಾನಗೋಷ್ಠಿ ಮತ್ತು ಪ್ರಭಾತ ವರ್ಣನೆಗಳು.

೧೦ ಅರ್ಜುನನ ಬಳಿಗೆ ಬಂದ ಅಪ್ಸರೆಯರು ಚೇಷ್ಟಾದಿಗಳನ್ನು ಮಾಡುವಿಕೆ

೧೫ ಚಿತ್ರಕಾವ್ಯ (ಶಬ್ದಾಲಂಕಾರ) ನಿರೂಪಣ

ಶಿಶುಪಾಲವಧ

೧ ಶಿಶುಪಾಲನನ್ನು ವಧಿಸಬೇಕೆಂಬ ಇಂದ್ರಸಂದೇಶವನ್ನು ನಾರದನು ಕೃಷ್ಣನಿಗೆ ತಿಳಿಸುವುದು.

೨ ರಾಜಸೂಯಯಾಗಕ್ಕೆ ಹೋಗುವುದೇ ಅಥವಾ ಶಿಶುಪಾಲನ ಮೇಲೆ ಯುದ್ಧಹೂಡುವುದೇ ಎಂಬ ವಿಷಯದಲ್ಲಿ ಕೃಷ್ಣ-ಬಲರಾಮ-ಉದ್ಧವರ ಮಂತ್ರಾಲೋಚನೆ.

೪ ರೈವತಕ ಪರ್ವತ ವರ್ಣನೆ.

೬ ಷಡೃತುವರ್ಣನೆ.

೭-೮ ಪುಷ್ಪಾಪಚಯ ಮತ್ತು ಜಲಕ್ರೀಡೆ.

೯-೧೧ ಸಂಧ್ಯಾ, ಚಂದ್ರೋದಯ, ಪ್ರಸಾಧನ, ರಾತ್ರಿವಿಹಾರ ಮತ್ತು ಪ್ರಭಾತವರ್ಣನೆಗಳು

೧೩ ನಗರಪ್ರವೇಶಮಾಡುತ್ತಿದ್ದ ಶ್ರೀ ಕೃಷ್ಣನನ್ನು ನೋಡಿ ಪೌರನಾರಿಯರ ಚೇಷ್ಟಾವರ್ಣನೆ.

೧೯ ಚಿತ್ರಯುದ್ಧವರ್ಣನ (ಶಬ್ದಾಲಂಕಾರ)

ಇವೇ ಮೊದಲಾದ ಕಡೆಗಳಲ್ಲಿ ಮಾಘನು ಭಾರವಿಯ ಕಾವ್ಯಮಾರ್ಗವನ್ನು ಅನುಸರಿಸಿದ್ದಾನೆ. ಇದರಂತೆ ಕಾವ್ಯದ ಪ್ರಾರಂಭದಲ್ಲಿ ಮತ್ತು ಪ್ರತಿಸರ್ಗದ ಅಂತ್ಯಶ್ಲೋಕದಲ್ಲಿ ಲಕ್ಷ್ಮೀವಾಚಕವಾದ ಶ್ರೀ ಪದವನ್ನು ಭಾರವಿಯಂತೆ ಮಾಘನೂ ಉಪಯೋಗಿಸಿದ್ದಾನೆ. ಆದರೂ ಮಾಘನಿಗೆ ಬಂದಿರತಕ್ಕ ಆಗ್ಗಳಿಕೆ ಅವನ ಔಚಿತ್ಯಜ್ಞಾನಕ್ಕೆ ಸಂಬಂಧಿಸಿದುದು. ಭಾರವಿ ತನ್ನ ಕಾವ್ಯಾರಂಭದ ಸರ್ಗಗಳಲ್ಲಿ ಆರಂಭಿಸಿರುವ ಮಂತ್ರಾಲೋಚನೆಯನ್ನು ಮಾಘನು ಅನುಕರಿಸಿರುವನಾದರೂ ಅಲ್ಲಿಯೂ ತನ್ನ ಸರ್ವತೋಮುಖವಾದ ಪಾಂಡಿತ್ಯವನ್ನು ಪ್ರದರ್ಶಿಸಿದ್ದಾನೆ. ಎರಡನೆಯ ಸರ್ಗದಲ್ಲಿ ಬರುವ ಬಲರಾಮ ಉದ್ಧವರ ಮಾತುಗಳಲ್ಲಿ ಬೌದ್ಧ, ಸಾಂಖ್ಯ,ಅರ್ಥಶಾಸ್ತ್ರ ಮತ್ತು ವ್ಯಾಕರಣಾದಿ ಶಾಸ್ತ್ರಗಳ ಪರಿಣತಿಯನ್ನು ಕವಿ ಪ್ರದರ್ಶಿಸಿದ್ದಾನೆ. ಇನ್ನು ಭಾರವಿಯ ಸರ್ಗ ೬ ರಿಂದ ೧೦ ರವರೆಗೆ ಅರ್ಜುನನ ತಪಸ್ಸನ್ನು ಭಂಗಪಡಿಸಲು ಅಪ್ಸರೆಯರನ್ನು ದೇವಲೋಕದಿಂದ ಭೂಮಿಗೆ ಕರೆಸುವನು. ಇಂದ್ರನ ಅನುಜ್ಞೆಯಂತೆ ಅಪ್ಸರೆಯರ ಜೊತೆಗೆ ಗಂಧರ್ವರು ಚತುರಂಗಬಲ ಸಮೇತರಾಗಿ ಮೇಘಮಾರ್ಗದಿಂದ ಭೂಮಿಗವತರಿಸುವರು. ಇಂದ್ರಕೀಲ ಪರ್ವತದಲ್ಲಿ ಅವರು ಬಿಡಾರಮಾಡುವಿಕೆ, ಅವರ ವಿಲಾಸಗಳು ಹೇರಳವಾಗಿ ವರ್ಣಿತವಾಗಿವೆ. ಅಲ್ಲಿ ಅರ್ಜುನನ ತಪೋಭಂಗಪಡಿಸುವ ಉದ್ದೇಶಕ್ಕಾಗಿ ಅಪ್ಸರೆಯರು ಬರುವುದು ಸಹಜ. ಆದರೆ ಅವರ ಜೊತೆಗೆ ಗಂಧರ್ವರನ್ನು ಕಳುಹಿಸಿ, ಗಂಧರ್ವರ ಹಾಗೂ ಅಪ್ಸರೆಯರ ವಿಲಾಸವರ್ಣನಕ್ಕೆ ಅವಕಾಶ ಕಲ್ಪಿಸಿಕೊಂಡಿರುವುದು ತೀರಾ ಕೃತ್ರಿಮವೆನಿಸುತ್ತದೆ. ಮಹಾಕಾವ್ಯ ಲಕ್ಷಣಗಳೆನಿಸಿರುವ ಪುಷ್ಪಾಪಚಯ ಜಲಕ್ರೀಡಾದಿಗಳನ್ನು ನಿರೂಪಿಸುವುದಕ್ಕಾಗಿಯೇ ಕವಿ ಸಂದರ್ಭವಿಲ್ಲದಿದ್ದರೂ ಈ ಪ್ರಸ್ಥಾನವನ್ನು ಕಲ್ಪಿಸಿಕೊಂಡಿರುವನೆಂಬುದು ವ್ಯಕ್ತವಾಗುತ್ತದೆ. ಮೇಲಾಗಿ ದೇವಲೋಕದಲ್ಲಿ ಆನೆ, ಕುದುರೆ, ರಥ, ಕಾಲಾಳು ಸೈನ್ಯಗಳ ಸೇರ್ಪಡೆ, ಅವು ಮೇಘಮಾರ್ಗವಾಗಿ ಕೆಳಗಿಳಿವುವೆಂಬ ವಿಪುಲ ವರ್ಣನೆಗಳು ಎಷ್ಟೋ ಅಸಹಜವಾಗಿ ಕಾಣುತ್ತವೆ. ಆದರೆ ಇಲ್ಲಿಯ ಕೃತ್ರಿಮತೆಯನ್ನು ಮನಗಂಡೇ ಪ್ರಾಯಃ ಮಾಘನು ಆ ಭಾಗಕ್ಕೆ ಸಹಜತೆಯನ್ನು ಕಲ್ಪಿಸುವುದಕ್ಕಾಗಿ ಉದ್ಯುಕ್ತನಾದಂತೆ ತೋರುತ್ತದೆ. ಮನಂಬುಗುವ ಸನ್ನಿವೇಶಗಳಿಂದ ಮಾಘನ ವರ್ಣನೆಗಳು

ಜೀವಕಳೆಯಿಂದ ವಿರಾಜಿಸುತ್ತಿವೆ. ಶೃಂಗಾರ ರಸನಿರೂಪಣವು ಭಾರವಿಯ ಅನುಕರಣವೆಂದು ಕಂಡರೂ ಇಲ್ಲಿ ಅಪೂರ್ವತೆ ವಿಜೃಂಭಿಸದೆ ಇಲ್ಲ. "ಮಾಘ ಓದಿ ಮಗ ಕೆಟ್ಟ, ಮೇಘ ಓದಿ ಅಳಿಯ ಕೆಟ್ಟ." ಎಂಬ ಕನ್ನಡಗಾದೆ ಮಾಘ ಕಾವ್ಯದ ಶೃಂಗಾರದ ಉದ್ರೇಕವನ್ನು ಸೂಚಿಸುತ್ತದೆ.

ರಾಜಸೂಯ ಯಾಗೋತ್ಸವಕ್ಕಾಗಿ ಹೊರಟಿರುವ ಯಾದವರು ಕುಟುಂಬ ಸಮೇತರಾಗಿ ಪ್ರಯಾಣ ಬೆಳೆಸಿದುದು ಸಹಜವೂ ಸಮುಚಿತವೂ ಆಗಿವೆ. ಅವರೊಂದಿಗೆಹೊರಟ ಚತುರಂಗಬಲವು ಮುಂದೆ ನಡೆಯಲಿರುವ ಮಹಾಯುದ್ಧದ ಉದ್ದೇಶವುಳ್ಳ ಕೃಷ್ಣನ ದೂರದೃಷ್ಟಿಗೆ ಕುರುಹು. ಮಾರ್ಗಮಧ್ಯದಲ್ಲಿ ಸಿಕ್ಕಿದ ರೈವತಕಾದ್ರಿಯಲ್ಲಿ ಅವರು ಬಿಡಾರಮಾಡಿದಾಗ ಯಾದವರೆಸಗಿದ ಪುಷ್ಪಾಪಚಯಾದಿ ವಿಲಾಸಗಳು ನಿಸರ್ಗರಮಣೀಯತೆಯಿಂದ ರಾರಾಜಿಸುತ್ತಿವೆ. ಪ್ರಕೃತಿ ವಿರುದ್ಧವಾಗಿ ಷಡೃತುಗಳು ಒಮ್ಮೆಯೇ ಆವಿರ್ಭವಿಸಿದುದಕ್ಕೆ ಕವಿ ಅತಿಥಿಯಾಗಿ ಬಂದಿರುವ ಶ್ರೀ ಕೃಷ್ಣನನ್ನು ಸಂತೃಪ್ತಿಪಡಿಸುವ ಉದ್ದೇಶವನ್ನು ಸೂಚಿಸಿದ್ದಾನೆ. ಮುಂದೆ ಭಾಗವತ ಮತ್ತು ಮಹಾಭಾರತಗಳ ರಾಜಸೂಯಯಾಗದ ಕಥಾಪ್ರಸ್ಥಾನವನ್ನು ಬದಲಿಸಿ ಶ್ರೀ ಕೃಷ್ಣ ಶಿಶುಪಾಲರಿಗೆ ದ್ವಂದ್ವಯುದ್ಧವನ್ನು ಕಲ್ಪಿಸುವುದರಲ್ಲಿಯೂ ಮಾಘಕವಿ ಔಚಿತ್ಯವನ್ನು ಪ್ರದರ್ಶಿಸಿದ್ದಾನೆ. ಇಲ್ಲಿಯ ಶ್ರೀಕೃಷ್ಣ ಕೇವಲ ಭಗವಂತ ಪಾತ್ರವಲ್ಲ. ಆತ ಪುರುಷಸಿಂಹ. ಕೇವಲ ವಿಲಾಸಿಯಲ್ಲ ಪರಾಕ್ರಮಶಾಲಿ. ಕಪಟ, ಛಲ ಮೊದಲಾದ ಕೂಟನೀತಿಶಾಸ್ತ್ರವೇತೃಮಾತ್ರವಲ್ಲ, ಮಹಾ ರಾಜಕಾರಣಿ. ಮೂಲದಲ್ಲಿ ಭೀಷ್ಮಾದಿಳು ಶ್ರೀಕೃಷ್ಣನನ್ನು ಅಗ್ರಪೂಜೆಗೆ ಸೂಚಿಸಿದಾಗ ಶಿಶುಪಾಲನು ಅಸಹನೆಯಿಂದ ದೂಷಿಸುವುದು, ಆಗ ಕೃಷ್ಣನು ಅರ್ಘ್ಯಕ್ಕಾಗಿ ತಂದ ಹರಿವಾಣವನ್ನೇ ತನ್ನ ಮಹಿಮೆಯಿಂದ ಚಕ್ರವನ್ನಾಗಿ ಪರಿವರ್ತಿಸಿ ಉಪಯೋಗಿಸಿದುದು ಮಾಘನಿಗೆ ಉಚಿತವೆನಿಸಲಿಲ್ಲ. ಆ ಭಾಗವನ್ನು ಕವಿ ಸಂಪೂರ್ಣ ಬದಲಾಯಿಸಿದ್ದಾನೆ. ಶ್ರೀಕೃಷ್ಣನನ್ನು ಅಗ್ರಪೂಜೆಗೆ ಸೂಚಿಸಿದಕೂಡಲೇ ಶಿಶುಪಾಲನು ತನ್ನಪಕ್ಷದೊಂದಿಗೆ ಸಭಾಭವನದಿಂದ ಹೊರಗೆ (Walk out) ಹೋಗುತ್ತಾನೆ. ಹೋದವನೇ ಸೈನ್ಯ ಸನ್ನಾಹದಿಂದ ಶ್ರೀಕೃಷ್ಣನನ್ನು ಮುತ್ತಲು ಸಿದ್ಧತೆ ಮಾಡತೊಡಗುವನು. ತಾನು ಯುದ್ಧಕ್ಕೆ ಬರುವುದನ್ನು ಮಹಾವೀರನಾದ

ಶಿಶುಪಾಲನು ದೂತನ ಮೂಲಕ ಹೇಳಿಕಳಿಸುತ್ತಾನೆ. ಎರಡು ಪಕ್ಷಗಳಿಗೂ ಸಂಧಾನಗಳು ನಡೆದು ಶಿಶುಪಾಲನು ಯಾವ ಷರತ್ತಿಗೂ ಒಪ್ಪದಿರಲು ಯುದ್ಧವು ಅನಿವಾರ್ಯವಾಗುತ್ತದೆ. ಎರಡು ಪಡೆಗಳಿಗೂ ಘೋರಯುದ್ಧವಾಗುತ್ತದೆ. ಮಾತ್ರವಲ್ಲದೆ ಶ್ರೀಕೃಷ್ಣ ಶಿಶುಪಾಲರಿಗೆ ನಡೆದ ಸಮರವು ಪುರುಷೋತ್ತಮನ ಅನನ್ಯಸಾಧಾರಣವಾದ ಪರಾಕ್ರಮವನ್ನು ಸೂಚಿಸುತ್ತದೆ. ಹೀಗೆ ಕಾವ್ಯಾದ್ಯಂತವೂ ಮಹಾಕವಿ ಮಾಘನ ಪ್ರತಿಭೆ, ಸರ್ವತೋಮುಖವಾದ ಪಾಂಡಿತ್ಯ ಹಾಗೂ ಔಚಿತ್ಯಜ್ಞಾನಗಳು ಸಹೃದಯರನ್ನು ಮುಗ್ಧಗೊಳಿಸಿ ಅವನ ಬಗ್ಗೆ ಪಕ್ಷಪಾತವನ್ನು ತೋರಿಸುವಂತೆ ಮಾಡುವುವು.

vii ಪಾಂಡಿತ್ಯ

ಮಾಘನು ಕೃತಕಕಾವ್ಯಯುಗದ ಕವಿಯೆನಿಸಿದ್ದರೂ ಅವನು ನಿಜವಾಗಿಯೂ ಸರ್ವೋತ್ಕೃಷ್ಟ ಕವಿಯೆಂಬ ಬಗ್ಗೆ ವಿವಾದವಿಲ್ಲ. ಪ್ರತಿಭೆಯ ಜೊತೆಗೆ ಉತ್ತಮ ಕಲಾಭಿಜ್ಞತೆ ಅವನದು. ಅಮೋಘವಾದ ಅವನ ಸಂಸ್ಕೃತ ಭಾಷಾ ಸ್ವಾಮ್ಯವು ಎಂತಹವರನ್ನೂ ತಲೆದೂಗಿಸುವಂತಹುದು. ವ್ಯುತ್ಪಾದಕ ದೃಷ್ಟಿಯಿಂದ ಶಿಶುಪಾಲವಧ ಪಂಡಿತಪ್ರಿಯವೆನಿಸಿರುವುದಕ್ಕೆ ಕಾರಣವಿದೆ. "ನವ ಸರ್ಗೇ ಗತೇ ಮಾಘೇ ನವ ಶಬ್ದೋ ನ ವಿದ್ಯತೇ" ಎಂಬ ಮಾತು ಇದಕ್ಕೆ ನಿದರ್ಶನ. ಮಾಘಕಾವ್ಯದ ಒಂಭತ್ತು ಸರ್ಗಗಳನ್ನು ಓದಿದರೂ ಸಾಕು. ಅವನಿಗೆ ಸಂಸ್ಕೃತಸಾಹಿತ್ಯದ ಅಪೂರ್ವ ಪದಸಂಪತ್ತೇ ವಶವಾಗುವುದು. ಪದಪ್ರಯೋಗ ವೈಖರಿಗೆ ಅವನ ಉಕ್ತಿಗಳು ಸೀಮೆಯೆನಿಸಿವೆ. ಪದಲಾಲಿತ್ಯ ಮತ್ತು ಅರ್ಥಗಾಂಭೀರ್ಯಗಳು ಹದವರಿತು ಪ್ರಯುಕ್ತವಾಗಿ ಅವು ಕಾವ್ಯ ಪ್ರವಾಹದ ಇರ್ಕಡೆಯ ದಡಗಳಂತೆ ಕಾವ್ಯ ಸೌಂದರ್ಯವನ್ನು ಹೆಚ್ಚಿಸಿವೆ. ಅವನ ಉಪಮೆಗಳು ಕಾಳಿದಾಸನನ್ನು ಸ್ಮರಿಸುವಂತಹವು. ಅನೇಕ ಸಲ ಅವನ ವರ್ಣನೆಗಳು ಕೇವಲ ಕಲ್ಪನಾತ್ಮಕವಾಗಿ ಕೃತಕವೆನಿಸಿದರೂ ಅವುಗಳನ್ನು ಮತ್ತೆಮತ್ತೆ ಅನುಸಂಧಾನ ಮಾಡುವುದರಿಂದ ಹೃದ್ಯವೆನಿಸುತ್ತವೆ. ಭಾರವಿಯ ಕಾವ್ಯ ನಾರಿಕೇಳಪಾಕವೆಂಬುದು ಸರ್ವಶ್ರುತವಾದ ವಿಚಾರ. ಆದರೆ ಮಾಘನಲ್ಲಿ ಅರ್ಥಗಾಂಭೀರ್ಯದ ಜೊತೆಗೆ ಲಾಲಿತ್ಯವೂ ಇರುವುದರಿಂದ

ಇದು 'ಕದಳೀಪಾಕ'. ನಾರಿಕೇಳದಂತೆ ನಾರುಕಿತ್ತು, ಕರಟಹೊಡೆದು. ಕಷ್ಟಪಡಬೇಕಾಗಿಲ್ಲ. ಕೊಂಚ ಸಿಪ್ಪೆ ಸುಲಿದರಾಯಿತು. "ತೆಳುಸಿಪ್ಪೆಯೊಳು ಹುದುಗಿಪ್ಪೊಳೆವಮೃತ ಘಟ್ಟಿಯೆನೆ" ಕಾಣುವ ರಸಬಾಳೆ ಹಣ್ಣಿನಂತೆ ಸಹೃದಯರ ಬಾಯಲ್ಲಿ ನೀರೂಸರಿಸುವುದು ಮಾಘನ ಭವ್ಯಕೃತಿ.

ಕ್ಲಿಷ್ಟಸಮಾಸ ಭೂಯಿಷ್ಟತೆ, ಶ್ಲೇಷ ಯಮಕಾದಿ ಅಲಂಕಾರಗಳು ಹೇರಳವಾಗಿ ನಿಬದ್ಧವಾಗಿರುವುದರಿಂದ ಒಮ್ಮೊಮ್ಮೆ ಅರ್ಥಸ್ಫೂರ್ತಿ ವಿಳಂಬವಾಗುವುದುಂಟು. ಪ್ರಕೃತಿ ವರ್ಣನೆಗಳು ಅನೇಕಕಡೆ ಪೂರ್ವಪದ್ಧತಿಯನ್ನು ಅನುಸರಿಸಿದ್ದರೂ ಹೃದ್ಯವಾಗಿವೆ. ಕಾವ್ಯದಲ್ಲಿ ಗೌಡರೀತಿಯೆ ಬಹುತೇಕ ನಿಯೋಜಿತವಾಗಿದ್ದರೂ ನವ್ಯತೆಯಿಲ್ಲದಿಲ್ಲ. ಕಾಳಿದಾಸ ಭವಭೂತಿ ಮತ್ತು ಬಾಣರ ಪ್ರಕೃತಿ ವೈಭವದ ಮಟ್ಟಕ್ಕೆ ಮಾಘನ ವರ್ಣನೆಗಳು ಮುಟ್ಟಲಾರವೆಂಬುದು ಒಪ್ಪತಕ್ಕ ಮಾತು. ಆದರೂ ರಸನಿರೂಪಣಚಾತುರ್ಯ ಮತ್ತು ವಿಶಿಷ್ಟಪದಗುಂಫಗಳಿಂದ ಮಾಘಕಾವ್ಯ ಅಸದೃಶವೂ ಆಕರ್ಷಕವೂ ಹೃದಯಂಗಮವೂ ಆದ ಗಾನಮಾಧುರ್ಯವನ್ನು ಅಭಿವ್ಯಂಜಿಸಿದೆ. ಆತನೇ ಹೇಳುವಂತೆ

"ನೈಕಮೋಜಃ ಪ್ರಸಾದೋ ವಾ ರಸಭಾವವಿದಃ ಕವೇಃ" (೨-೮೩)

"ರಸಭಾವವಿತ್ಕವಿಗೆ ಪ್ರೌಢಪ್ರಸಾದಗಳು
ಬಂಧದೊಳು ನಿಯಮವಿರದಿರ್ಪ ತೆರದೆ"

ಪ್ರೌಢ ಮತ್ತು ಪ್ರಸಾದ ಶೈಲಿಗಳನ್ನು ಮಹಾಕವಿಯಾದವನು ಆಯಾ ಸಂದರ್ಭಾನುಗುಣವಾಗಿ ಬಂಧದಲ್ಲಿ ಸಮಾವೇಶಮಾಡಿಕೊಳ್ಳಬಲ್ಲನೆಂಬುದು ಸ್ವಶಕ್ತಿ ವೈಶಿಷ್ಟ್ಯವನ್ನೇ ನಿರ್ದೇಶಿಸುವಂತಿದೆ. ಹೇಳಬೇಕಾದ ವಿಷಯವನ್ನು ಚಿಕ್ಕಚಿಕ್ಕ ಮಾತುಗಳಲ್ಲಿ ಆತ ಹೇಗೆ ನಿರೂಪಿಸುವನೆಂಬುದನ್ನು ನೋಡಿ

೧ ಸ್ಪೃಶಂತಿ ಶರವತ್ತೀಕ್ಷ್ಣಾಃ ಸ್ತೋಕಮಂತರ್ವಿಶಂತಿ ಚ ।
ಬಹುಸ್ಪೃಶಾಪಿ ಸ್ಥೂಲೇನ ಸ್ಥೀಯತೇ ಬಹಿರಶ್ಮವತ್ ॥ ೨-೭೮

ಸೂಕ್ಷ್ಮಮತಿ ಶರದಂತೆ ತುಸುಮುಟ್ಟಿಯೊಳಪೊಕ್ಕು
ಸುಲಭದಿಂ ಗುರುಕಾರ್ಯ ಸಾಧಿಸುವನು;

ಬಹುಬಾರಿ ಮುಟ್ಟಿದರು ಮಂದಮತಿ ಕಲ್ಲಿನೊಲು
ಹೊರಗಿರ್ದು ಕಾರ್ಯಮಂ ಗೆಲ್ಲನೆಂದುಂ.

೨ "ಪ್ರಕ್ಷಿಪ್ಯೋದರ್ಚಿಷಂ ಕಕ್ಷೇ ಶೇರತೇ ತೇಽಭಿಮಾರುತಂ" (೨-೪೨)

ಪ್ರಜ್ವಲಿಪ ಬೆಂಕಿಯಂ ಪುಲ್ಮೆದೆಯ ಮೇಲೆರಚಿ
ಎಲರೆದುರು ನಿದ್ರಿಸುವನಂತಿರ್ಪನು;"

ಮುಂತಾದ ಉದಾಹರಣೆಗಳು ಕಾವ್ಯಾದ್ಯಂತವೂ ಪ್ರಯುಕ್ತವಾಗಿವೆ. ಒಂದೊಂದು ವಿಷಯವನ್ನೂ ಚಿತ್ತಚುಂಬಕ ರೀತಿಯಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸುವುದರಲ್ಲಿ ಮಾಘನು ಎತ್ತಿದಕೈ. ಟಿಪ್ಪಣಿಗಳಲ್ಲಿ ಆಯಾ ಪದ್ಯದ ಶ್ಲೇಷಾದ್ಯಲಂಕಾರಗಳು, ವಿಶೇಷಾರ್ಥಗಳು, ಪೂರ್ವಕತೆಗಳೊಂದಿಗೆ ವಿಸ್ತರಿಸಿರುವುದರಿಂದ ಸಹೃದಯರು ಆ ಭಾಗವನ್ನು ಸಾವಧಾನವಾಗಿ ಅವಲೋಕಿಸುವುದರಿಂದ ಕಾವ್ಯದ ಹೃದಯವನ್ನು ಸುಲಭವಾಗಿ ಆಸ್ವಾದಿಸಬಹುದೆಂದು ಬಿನ್ನೈಸುತ್ತೇನೆ.

viii ಸಿರಿಗನ್ನಡ ಶಿಶುಪಾಲಥ

ಸಂಸ್ಕೃತ ಸಾಹಿತ್ಯದ ಶ್ರೇಷ್ಠಕೃತಿಗಳನ್ನು ಕನ್ನಡಿಸುವ ಕೆಲಸ ಬಹುಕಾಲದಿಂದ ನಡೆದುಬಂದಿದೆ. ಈ ಮಾತು ಸಂಸ್ಕೃತ ಕಾವ್ಯಗಳಿಗಿಂತ ನಾಟಕಗಳಿಗೆ ಹೆಚ್ಚು ಅನ್ವಯಿಸುತ್ತದೆ. ಸಂಸ್ಕೃತ ಕಾವ್ಯಗಳನ್ನು ಪದ್ಯಮಯವಾಗಿ ಅನುವಾದಿಸಲಾರಂಭಿಸಿದವರು ಆಧುನಿಕ ಕನ್ನಡಕವಿಗಳೆಂದು ಧಾರಾಳವಾಗಿ ಹೇಳಬಹುದು. ಇದರ ಮೊಟ್ಟಮೊದಲನೆಯ ಸ್ಥಾನ ಬಳ್ಳಾರಿಯ ಕಳಾಪ್ರಪೂರ್ಣ ಆಸ್ಥಾನವಿದ್ವಾನ್ ಶ್ರೀ ವೈ. ನಾಗೇಶಶಾಸ್ತ್ರಿಗಳಿಗೆ ಮುಡಿಪಾಗಿದೆ. ಶ್ರೀಯುತರು ಕಾಳಿದಾಸನ ಶ್ರೇಷ್ಠಕಾವ್ಯಗಳೆನಿಸಿರುವ ರಘುವಂಶ ಮತ್ತು ಕುಮಾರಸಂಭವಗಳನ್ನು ಕನ್ನಡಿಸಿ ಪ್ರಕಟಿಸಿದರು. ಇವುಗಳಲ್ಲಿ ಮೊದಲನೆಯದು ೧೯೩೨ ರಲ್ಲಿ ವಾರ್ಧಿಕಷಟ್ಪದಿಯಲ್ಲಿಯೂ, ಎರಡನೆಯದು ೧೯೩೮ ರಲ್ಲಿ ಚಂಪೂಶೈಲಿಯಲ್ಲಿಯೂ ಪ್ರಕಾಶಿತವಾಯಿತು. ಇತ್ತೀಚೆಗೆ ಆಧುನಿಕ ಕನ್ನಡ ಛಂದಸ್ಸಿನಲ್ಲಿ ಕಾಳಿದಾಸನ ಮೇಘದೂತ, ಋತುಸಂಹಾರ ಮತ್ತು ಕುಮಾರ

ಸಂಭವಗಳನ್ನು ಮಾನ್ಯ ಮಿತ್ರರಾದ ಶ್ರೀ ಎಸ್. ವಿ. ಪರಮೇಶ್ವರಭಟ್ಟರು ಕನ್ನಡಿಸಿರುವರು.

ಸಂಸ್ಕೃತದಲ್ಲಿ ಇಂಗ್ಲಿಷಿನಲ್ಲಿ ಅಥವಾ ಹಿಂದಿಯಲ್ಲಿ ಓದಿದ ಭಾಗಗಳಲ್ಲಿ ಮನಸ್ಸಿಗೆ ಮೆಚ್ಚುಗೆಯಾದ ಕತೆ, ಕವಿತೆ, ಅಥವಾ ಲೇಖನಗಳನ್ನು ಕನ್ನಡ ನುಡಿಗಟ್ಟಿಲ್ಲಿಟ್ಟು ಆನಂದಪಡುವ ಹುಚ್ಚು ನನಗೆ ಮೊದಲಿನಿಂದಲೂ ಇದೆ ಎಂಬುದಕ್ಕೆ ನನ್ನ ಕವಿತಾಸಂಗ್ರಹ (ವಿಜಯನಾದ, ಮುಕ್ತಕಮೌಕ್ತಿಕ ಮಾಲೆ) ಲೇಖನಸಂಗ್ರಹ ಮತ್ತು "ವೈದಿಕ ಸಾಹಿತ್ಯಚರಿತ್ರೆ" ಗಳನ್ನು ಅವಲೋಕಿಸಿದವರಿಗೆ ವೇದ್ಯವಾಗುತ್ತದೆ. ನನ್ನ 'ಶಿವನಸೋಲು' (೧೯೪೩–ಸರಳರಗಳೆಯ ನಾಟಕ) ಕಾಳಿದಾಸನ ಕುಮಾರಸಂಭವದಿಂದ ರೂಪುಗೊಂಡುದು. 'ಪಕ್ಷ್ಮಲಾಕ್ಷಿ' (೧೯೫೧,) ಕಾವ್ಯವು ರಘುವಂಶದ ಆಧಾರದಮೇಲೆ ಚಿತ್ರಿತವಾದುದು. ಆದರೆ ಇದಿಷ್ಟರಿಂದ ತೃಪ್ತಿಹೊಂದದ ಮನಸ್ಸು ಸಂಸ್ಕೃತ ಮಹಾಕಾವ್ಯಗಳಿಗೂ ಕೈಹಚ್ಚಿತು. ಇದರಫಲವಾಗಿ "ರಘುವಂಶ ಮುಕ್ತಾಂಶು" (ರಘು ಸಂಪುಟ, ಎಂಟುಸರ್ಗಗಳು) ಮತ್ತು "ಕಿರಾತಾರ್ಜುನೀಯ"ಗಳನ್ನು ಸಂಪೂರ್ಣವಾಗಿ ಕನ್ನಡಿಸಲಾಯಿತು. ಇದೇ ಸಮಯಕ್ಕೆ ಎಂದರೆ ತಾ ೩೦–೬–೫೫ ರಲ್ಲಿ ಮಾನ್ಯಮಿತ್ರರಾದ ಶ್ರೀಮಾನ್ ಎಸ್. ವಿ. ಪರಮೇಶ್ವರಭಟ್ಟರ 'ಕನ್ನಡ ರಘುವಂಶ' ಮತ್ತು ತಾ ೧೫–೮–೫೫ ಕ್ಕೆ ಶ್ರೀ ಡಾ|| ಕೆ. ಕೃಷ್ಣಮೂರ್ತಿಯವರ "ಕನ್ನಡ ಕಿರಾತಾರ್ಜುನೀಯ" (೬ ಸರ್ಗ) ಗಳು ಪ್ರಕಟವಾದವು. ಮೇಲೆ ಕಂಡ ಗ್ರಂಥಗಳ ಮುದ್ರಣವು ಮುಗಿದ ಸುದ್ದಿ ನನಗೆ ತಿಳಿದಾಗ ಕಿರಾತಾರ್ಜುನೀಯದ ಅನೇಕ ಸರ್ಗಗಳು ಮುಗಿದಿದ್ದವು. ಆದರೆ "ಆರಬ್ಧಸ್ಯಾಂತಗಮನಂ ದ್ವಿತೀಯಂ ಬುದ್ಧಿಲಕ್ಷಣಂ" ಎಂಬ ಉಕ್ತಿಯಂತೆ ಆ ಕಾರ್ಯವನ್ನು ಪೂರ್ಣ ಮಾಡಬೇಕಾಯಿತು. ಇನ್ನು ಇದೇ ಸಮಯಕ್ಕೆ ಮುಗಿದಿದ್ದ ರಘುವಂಶವನ್ನು ಅಲ್ಲಿಗೇ ನಿಲ್ಲಿಸಿ ಮಾಘಕವಿಯ "ಶಿಶುಪಾಲವಧ"ವನ್ನು ಆರಂಭಿಸಿದೆನು. ಒಟ್ಟಿನಲ್ಲಿ ಮಹಾಕವಿ ಕೃತಿಗಳನ್ನು ಎಷ್ಟುಜನ ಭಾಷಾಂತರಿಸಿ, ಟೀಕೆ ಟಿಪ್ಪಣಿಗಳನ್ನು ಬರೆದು ಪ್ರಕಟಿಸಿದರೂ ಮುಗಿಯದಷ್ಟು ಜ್ಞಾನಸಂಪತ್ತು ಅಲ್ಲಿ ತುಂಬಿದೆಯೆಂಬುದು ಸಹೃದಯರಿಗೆ ವೇದ್ಯವಿದೆ. ಇದೇ ಮಾಘಕೃತಿಗೆ ಸಂಸ್ಕೃತದಲ್ಲಿ ಎಂಟುಮಂದಿ ವ್ಯಾಖ್ಯಾನ ಮಾಡಿರುವರೆಂಬುದೇ ಇದಕ್ಕೆ ನಿದರ್ಶನ. ಹೀಗೆ

ಬೇರೆಬೇರೆಯವರು ಇದೇ ಕೃತಿಗಳನ್ನು ಕನ್ನಡಿಸಿರುವಾಗ ನನ್ನ ಶ್ರಮ ವ್ಯರ್ಥವಲ್ಲವೆ ಎಂಬ ಕೊರಗು ಮಾತ್ರ ಬಾಧಿಸುತ್ತಲೇ ಇತ್ತು. ಆದರೆ ಮೇಲೆಕಂಡ ಗ್ರಂಥಗಳನ್ನು ಅವಲೋಕಿಸಿದಮೇಲೆ ಮನಸ್ಸಿಗೆ ಸಮಾಧಾನವೂ ಆಯಿತು. ಏಕೆಂದರೆ ಈ ಭಾಷಾಂತರಗಳಲ್ಲಿ ನನ್ನ ಕೃತಿಗಳಿಗೂ ಸಹೃದಯ ಹೃದಯಾರಾಮದಲ್ಲಿ ವಿಶಿಷ್ಟಸ್ಥಾನ ದೊರೆಯುವುದೆಂಬ ಭರವಸೆಯೂ ಆಯಿತು.* ಎಲ್ಲಕ್ಕಿಂತ ಮಿಗಿಲಾಗಿ ಮಹಾಕವಿ ಷಡಕ್ಷರಿ ಹೇಳಿರುವ

ಮೊದಲ ಕವೀಂದ್ರರೊಲ್ದೊರೆದ ಸತ್ಕೃತಿ ಸಂಚಯಮಿಾಧರಿತ್ರಿಯೊಳ್
ಪುದಿದಿರೆ ನೋಡಿ ತುಷ್ಟಿ ಪಡಲೊಲ್ಲದೆ ಕಬ್ಬಿಗರೇಕೆ ಕಬ್ಬಮಂ।
ಗದಿಪರೊ ಬೇರೆನುತ್ತೆ ನುಡಿವಳ್ಕಜಕಾರನವಂಗೆ ಪುತ್ರಸಂ
ಪದದೊದವೇಕೆ ಬೇರೆ ಪರಪುತ್ರರನೀಕ್ಷಿಪ ತುಷ್ಟಿಸಾಲದೇ!

(ರಾಜ. ಅ. ೧. ಪ. ೩೫)

ಎಂಬ ಸಮಾಧಾನವಂತೂ ಇದ್ದೇ ಇದೆ.

ಪ್ರಕೃತ ನನ್ನ "ಸಿರಿಗನ್ನಡ ಶಿಶುಪಾಲವಧ" ಕಾವ್ಯವು ಆಧುನಿಕ ಛಂದಸ್ಸಿನಲ್ಲಿ ರಚಿತವಾಗಿದೆ. ಇಲ್ಲಿ ಬಳಸಿರುವ ಛಂದಸ್ಸು ನನ್ನ "ಪಕ್ಷ್ಮಲಾಕ್ಷಿ" ಕಾವ್ಯದಲ್ಲಿ ಪ್ರಯುಕ್ತವಾಗಿದೆ. ಅದನ್ನು ಓದಿದ ಮಿತ್ರರನೇಕರು ಮೆಚ್ಚುಗೆಯನ್ನು ವ್ಯಕ್ತಪಡಿಸಿದುದೇ ಈ ಉದ್ಯಮಕ್ಕೆ ಹಿನ್ನೆಲೆ. ಇದರಲ್ಲಿ ಅನುಪ್ರಸಾದಿಗಳು ಕವಿ ಸ್ವಾತಂತ್ರ್ಯಕ್ಕೆ ಅಡ್ಡಿಯಾಗದೆ ಆತನ ಶಬ್ದಸಂಪತ್ತಿಯನ್ನು ಪ್ರದರ್ಶಿಸುವುವಾಗಿವೆ. ಸಂಸ್ಕೃತದಲ್ಲಿ ಬರುವ ಶಬ್ದಸೌಷ್ಟವಾದಿ ಸೌಂದರ್ಯವನ್ನು ಇಲ್ಲಿ ಉಳಿಸಿಕೊಳ್ಳುವುದು ಸಾಧ್ಯವಿಲ್ಲವಾದರೂ ಮೂಲದ ರಸ ಭಾವ ಮತ್ತು ಅಲಂಕಾರಗಳನ್ನೂ ಅರ್ಥಸಂಪತ್ತಿಯನ್ನೂ ನನಗೆ ತಿಳಿದಿರುವ ಮಟ್ಟಿಗೆ ಲೋಪವಾಡಿಲ್ಲವೆಂದು ಭಾವಿಸಲಾಗಿದೆ. ಶ್ಲೇಷಾದಿ ಅಲಂಕಾರಗಳು ಬರುವಕಡೆ ಮೂಲದ ಪದಗಳನ್ನೇ ಉಳಿಸಿಕೊಂಡು ಪದ್ಯದ ಬೆಡಗು ಕೆಡದಂತೆ ನೋಡಿಕೊಳ್ಳಲಾಗಿದೆ. ಆಯಾ ರಸರೀತಿಗಳಿಗೆ ತಕ್ಕಂತೆ ಛಂದಸ್ಸನ್ನು ಬದಲಾಯಿಸುವ ಸಂಸ್ಕೃತ ಚಂಪೂಕಾವ್ಯ ಪದ್ಧತಿಯು ಕನ್ನಡಿಗರಿಂದ

---

* ಈ ಕಾವ್ಯಗಳನ್ನು ಯಥಾವಕಾಶ ಮುದ್ರಿಸಿ ಕನ್ನಡಿಗರ ಕರಕಮಲದಲ್ಲಿ ಅರ್ಪಿಸುವ ಮನೀಷೆಯಿದೆ. (ಲೇ.)

ಮನ್ನಿಸಲ್ಪಟ್ಟಿದೆಯಾದರೂ ಷಟ್ಪದಿ ಕಾವ್ಯಗಳನ್ನು ಬರೆದ ಮಹಾಕವಿ ರಾಘವಾಂಕ, ಕುಮಾರವ್ಯಾಸ ಮುಂತಾದವರು ಒಂದೇ ಛಂದಸಿನಲ್ಲಿ ಮಹಾ ಕಾವ್ಯಗಳನ್ನು ಮನೋಜ್ಞವಾಗಿ ರಚಿಸಿರುವ ಅಂಶ ಸರ್ವವಿದಿತ. ಆಧುನಿಕ ಮಹಾ ಛಂದಸ್ಸಿನಲ್ಲಿ "ರಾಮಾಯಣದರ್ಶನ" ವೆಂಬ ಉದ್ದಾಮ ಕಾವ್ಯವನ್ನು ಬರೆದಿರುವ ರಾಷ್ಟ್ರಕವಿ ಮಾನ್ಯ ಕುವೆಂಪು ಅವರೇ ಇದಕ್ಕೆ ಶ್ರೇಷ್ಠ ಮಾರ್ಗ ದರ್ಶಕರಾಗಿದ್ದಾರೆ. ಅದೇ ದೃಷ್ಟಿಯಿಂದ ನಾನೀ ನೂತನ ಛಂದಸ್ಸನ್ನು ಬಳಸಿ ಕೊಂಡಿದ್ದೇನೆ. ಇದರ ಛಾಯೆ ಹಿಂದಿನ ತ್ರಿಪದಿಪ್ರಭೇದಗಳಲ್ಲಿ ಕಾಣುತ್ತದೆ. ಆದರೆ ಹಿಂದಿನ ರಗಳೆಗೂ ಆಧುನಿಕ ಸರಳ ರಗಳೆಗೂ ಅಂತರವಿರುವಂತೆ ಇಲ್ಲಿ ಯೂ ತ್ರಿಪದಿಯ ರೂಪುರೇಖೆಗಳಿಗೂ ಈ ಛಂದಸ್ಸಿಗೂ ವ್ಯತ್ಯಾಸವಿದೆ. ಆದ್ದ ರಿಂದಲೇ ಈ ಛಂದಸ್ಸಿಗೆ "ಮಧುರ" ಎಂಬ ವಿಶೇಷಣ ಕೊಡಲಾಗಿದೆ. ಛಂದೋನುಗುಣವಾಗಿ ಅನಿವಾರ್ಯವಾದಕಡೆ 'ಽ' ಎಂಬ ಚಿಹ್ನೆ ಮತ್ತು ಆಧು ನಿಕ ಕಾವ್ಯ ಸಹಜವಾದ ಪ್ರಕೃತಿ ಪ್ರಯೋಗಗಳು ಅಲ್ಲಲ್ಲಿ ಅಡಿಯಿಟ್ಟಿವೆ.

ಎರಡನೆಯದಾಗಿ ಕಾವ್ಯಾನುವಾದದಲ್ಲಿ ಪದ್ಯಕ್ಕೆ ಪದ್ಯವನ್ನು ಭಾಷಾಂತರಿಸ ಲಾಗಿದೆ. ಆದರೆ ಶೃಂಗಾರಾದಿ ಕೇವಲ ವರ್ಣನೆಗಳಿಂದ ಕೂಡಿರುವ ಸರ್ಗ ೪ ರಿಂದ ೧೨ ರವರೆಗೆ ಕೆಲವು ಪದ್ಯಗಳನ್ನು ಮಾತ್ರ ಆರಿಸಿಕೊಂಡು ಅದನ್ನು ಸಂಕೀರ್ಣಸರ್ಗವೆಂದು ಕರೆಯಲಾಗಿದೆ. ಇದಕ್ಕೆ ಕಾರಣ ಇಲ್ಲಿ ಬರುವ ಶೃಂಗಾರರಸದ * ಬಿಚ್ಚುಮಾತುಗಳು ಇಂದಿನ ಸಹೃದಯರಿಗೆ ವಿಶೇ ಷತಃ ವಿದ್ಯಾರ್ಥಿಗಳ ದೃಷ್ಟಿಯಿಂದ ಉದ್ವೇಜಕವಾಗಬಾರದೆಂಬುದೇ ಆಗಿದೆ. ಮೇಲಾಗಿ ಅದು ಕಥೆಯ ಓಟಕ್ಕೆ ತಡೆಯೂ ಆಗುತ್ತದೆ. ಒಟ್ಟಿನಲ್ಲಿ ಈ ಕನ್ನಡ ಶಿಶುಪಾಲವಧಕಾವ್ಯದಲ್ಲಿ ಸರ್ಗ ೧ರಿಂದ ೧೩ ಸರ್ಗಗಳ ಸಂಪೂರ್ಣ ಕಥೆ ಸಂಗ್ರ ಹೀತವಾಗಿದೆ. ಶ್ರೀಕೃಷ್ಣನು ಧರ್ಮರಾಜನ ಪ್ರಾರ್ಥನೆಯಂತೆ ಇಂದ್ರಪ್ರಸ್ಥಕ್ಕೆ ಆಗಮಿಸಿದ ಈ ಭಾಗವನ್ನು "**ಅಭಿಗಮನ ಸಂಪುಟ**" ಎಂದು ಹೆಸರಿಸಲಾಗಿದೆ. ಮುಂದಿನ ಭಾಗವನ್ನು "**ವಧಸಂಪುಟ**" ಎಂಬ ಹೆಸರಿನಿಂದ ಪ್ರಕಟಿಸುವ ಮನೀಷೆಯಿದೆ.

* ನನ್ನಿಂದ ರಚಿತವಾದ "ಶೃಂಗಾರ ರಸಸಂಹಿತೆ" ಯಲ್ಲಿ ಈ ಭಾಗವನ್ನು ಸಂಪೂರ್ಣ ಗದ್ಯಾನುವಾದದಲ್ಲಿ ಕೊಡಲಾಗಿದೆ.

ಮಧುರ ಛಂದಸಿನ

ಸಿರಿಗನ್ನಡ

ಶಿಶುಪಾಲವಧಂ

(ಮಾಘಕವಿಯ ಮಹಾಕಾವ್ಯದ ಪದ್ಯಾನುವಾದ)

ಪರಿಮಿತಾಕ್ಷರಗಳಲಿ ಸಪ್ತಸ್ವರಗಳಿಂದೆ
ಗುಂಫಿಸಿದ ವಿಸ್ತಾರವಾಗ್ಜಾಲದ;
ಮಧುರಗಾನದ ತೆರದೆ ರಚನೆವೈವಿಧ್ಯದಿಂ
ದಪರಿಮಿತವಾಗಿಹುದು ಚಿತ್ರಮಲ್ತೆ । [ii.– ೭೨]

ಮೃದೀಯಸೀಮಪಿ ಘನಾಮನಲ್ಪಗುಣಕಲ್ಪಿತಾಂ ।
ಪ್ರಸಾರಯಂತಿ ಕುಶಲಾಶ್ಚಿತ್ರಾಂ ವಾಚಂ ಪಟೀಮಿವ ॥[ii–೭೪]

ಪರಿವಿಡಿ

ಸೂಚನೆ:— ಪದ್ಯಗಳಲ್ಲಿ ಬರುವ ಅಕ್ಷರಸ್ಖಾಲಿತ್ಯಗಳನ್ನು ಟಿಪ್ಪಣಿಯಲ್ಲಿ ಸರಿಪಡಿಸಲಾಗಿದೆ.

ಕವಿಪ್ರಶಸ್ತಿ

೧

ಸರಸಗುಣ ಕಲ್ಯಾಣಿ ಶರ್ವಾಣಿ ಗಭಿನಮಿಸಿ
ಕವಿಕುಲಕೆ ತಲೆವಾಗಿ ಸರಸಮೆನಿಪ ;
ಮಾಘಕಾವ್ಯಾಮೃತವ ಕನ್ನಡಿಸಿ ಬೆಳಗಿಸಿದ
ಕನ್ನಡಾಂಬೆಯ ಭಕುತನಮರವಾಣಿ

೨

ಮಾಘಕವಿ ರುಚಿರಾರ್ಥಮಾಧುರ್ಯಮಂ ತೆಗೆದು
ಸರಲತೆಯ ಮೆರುಗಿಟ್ಟು ರುಚಿಗೆಡಿಸದೆ ;
ಕನ್ನಡದ ಸವಿನುಡಿಯ ಪೊಂಬಟ್ಟಲೊಳು ತುಂಬಿ
ತಣಿಸ ಬಯಸಿಹ ಬಡಿಸಿ ರಸಿಕರ್ಕಳಂ

೩

ಕಾಳಿದಾಸನೊಳುಪಮೆ ಭಾರವಿಯ ಗಾಂಭೀರ್ಯ
ದಂಡಿಯೊಳು ಲಾಲಿತ್ಯ ಸುಭಗಮೆನಿಕುಂ ;
ಮಾಘನೊಳಗೀಮೂರು ಸಮರಸಂ ತಾನೆನಲ್
ಮಾಘ ವಾಕ್ಸುಧೆರ್ಝುರಿಗೆ ಸಮಮಿರ್ಪುದೇಂ ?

೪

ನೇತೃ ಯದುನಂದನಂ ವೀರಮೋ ಮುಖ್ಯರಸ
ಶೃಂಗಾರ ಮೊದಲಾದ ರಸದೊರತೆಯುಂ ;
ಇಂದ್ರಪ್ರಸ್ಥಾಗಮನ ಚೈದ್ಯವಧ ಫಲಮೆನಲ್
ಮಾಘಕಾವ್ಯಾಸ್ವಾದ ಧನ್ಯಮತ್ತೆ !

ಮಧುರಛಂದಸಿನ

ಸಿರಿಗನ್ನಡ ಶಿಶುಪಾಲವಧಂ

ಶ್ರೀ ಕೃಷ್ಣ ನಾರದ ಸಂಭಾಷಣಂ :—

೧

ಸಿರಿಪತಿಯು ವಿಶ್ವಗಳಿಗಾಧಾರ ಶ್ರೀನಿಲಯ
ವಸುದೇವ ಸದನದಲಿ ಜಗವ ಪೊರೆಯೆ ;
ವಾಸಿಸುತೆ ಗಗನದಿಂದಿಳಿವಂಬುಜನ ತನಯ
ಮುನಿ ನಾರದನ ಕಂಡ ಕೃಷ್ಣನಿದಿರೊಳ್

೨

ಅರುಣ ಸಾರಥಿ ಕಿರಣ ಮಡ್ಡಡ್ಡಮಾಗಿಹುದು
ಸುಪ್ರಸಿದ್ಧಮುಮಗ್ನಿಗೂರ್ಧ್ವಜ್ವಲನಂ ;
ಪಸರಿಸುತಮೆಲ್ಲೆಡೆಗೆ ಕೆಳಬೀಳ್ವ ತೇಜಮಿದು
ಏನೆಂದು ವಿಸ್ಮಯಡೆ ಜನ ನೋಡಿದರ್

೩

ಮೊದಲು ತೇಜಃಪುಂಜಮೆಂದು ನಿರ್ಧರಗೈದು
ಬಳಿಕಮಾಕೃತಿಯಿಂದೆ ದೇಹಿಯೆಂದುಂ ;
ಬಿಡಿಬಿಡಿಸಿದವಯವದೆ ನಿರ್ಧರಿಸಿ ನರನೆಂದು
ಕ್ರಮದೆ ನಾರದನೆಂದು ವಿಭುವರಿದನು

ನಾರದಮುನಿವರ್ಣನಂ :—

೪

ಪೊಸತು ಪೆರ್ಮೋಡಗಳ ಕೆಳಗಿರ್ಪ ಕರ್ಪೂರ
ಧೂಲಿಪುಂಜದ ತೆರದೆ ಶುಭ್ರಮಾದ ;
ಚಣಮಾನೆ ತೊವಲೆತ್ತಿ ತಾಂಡವದೆ ನಿಂದಿರ್ಪ
ಭಸ್ಮಸಿತ ಶಂಭುವಂ ಪೋಲುತಿರ್ಪ

೫

ಹಿಮಬುವಿಯ ಮೇಲೆಳ್ದು ಹೊಂಬಣ್ಣದಿಂದೆಸೆವ
ಬಳ್ಳಿ ಪೊದೆಯಿಂ ಮುಂಜುವೆಟ್ಟದಂತೆ ;
ಕಮಲಕೇಸರ ಕಾಂತಿಯಂತೆ ಕೆಂಜೆಡೆ ಧರಿಸಿ
ಶರದ ಚಂದ್ರನ ಕಿರಣದಂತೆ ಪೊಳೆವ

೬

ಕನಕಮೇಖಲೆ ಧರಿಸಿ ನೀಲಾಂಬರವನುಟ್ಟ
ಬಲರಾಮನನುಕರಣ ಮಾಡುತಿರ್ಪ ;
ಪೊನ್ನೊಸೆಯ ಮೌಂಜಿಯುತ ಪರಿಶುಭ್ರಕಾಂತಿಯಿಂ
ಕರ್ಪಿಡಿದ ಮೃಗಚರ್ಮ ಪೊದೆದೆಸೆಯುವ

೭

ವೈನತೇಯನ ಮೈಯ ಕೂದಲೊಲು ದೀರ್ಘತಮು
ಪೊನ್ನಪೊಲದೊಳು ಬೆಳೆದ ಬಳ್ಳಿಯೆಳೆಯ ;
ಯಜ್ಞಸೂತ್ರವ ಧರಿಸಿ ಹಿಮಶುಭ್ರ ಶರದಮುತು
ಮಿಂಚುಗಣದಿಂ ಪೊಳೆವ ಮೇಘದಂತೆ

೮

ನಿಜಭಾವದಿಂ ಚಿತ್ರತರ ಸೂಕ್ಷ್ಮಲೋಮದಿಂ
ತೊಳಪ ಬಿಸಖಂಡಸಿತ ತನುಪ್ರೊರ್ದಿದ ;
ಮನಸೆಳವ ನಲ್ಬಿಗುರಿ ಚರ್ಮದಿಂ, ಸಬರದಿಂ
ದಿಂದ್ರವಾಹನ ಗಜದ ತೆರದೆಸೆಯುವ

೯

ಆವಗುಂ ಮಿಾಂಟುತಿಹ ತಂತ್ರಿ ತಾಡನದಿಂದೆ
ತೊಳಗುವಂಗುಷ್ಠನಖ ಕಿರಣ ಬೆರೆದು ;
ಮುಂಭಾಗ ಪವಳದಿಂ ಪೋಣಿಸಿಹುದೆನಲೆಸೆವ
ಸ್ಫಟಿಕಾಕ್ಷಮಾಲೆಯಿಂ ಬೆಳಗುತಿರ್ಪ

೧೦

ಅನಿಲ ಚಾಲನದಿಂದೆ ಬಿಡಿಯಾಗಿ ನುಡಿಯುತಿಹ
ನಿಯತ ಶ್ರುತಿಮಂಡಲ ಸ್ವರಗಳಿಂದೆ;
ಸ್ಫುಟವಾಂತ ನಲ್ಗ್ರಾಮ ಸುವಿಶೇಷ ಮೂರ್ಛನೆಯ
ಮಹತಿಯಂ ಮತ್ತೆ ಮತ್ತೀಕ್ಷಿಸುತಲಿ

೧೧

ವಂದಿಸುತಲನುಸರಿಪ ದಿವಿಜರಂ ಪಿಂದಿರುಪಿ
ಸರ್ವಾರ್ಥದರ್ಶಿಯೆನಿಪಾ ಮುನಿಪನು ;
ಇಂದ್ರಭವನದ ತೆರದೆ ರಂಜಿಸುವ ದೈತ್ಯಾರಿ
ಶ್ರೀಕೃಷ್ಣ ಭವನಮಂ ಪೊಕ್ಕನೊಡನೆ

೧೨

ಕೆಳಬೀಳ್ವ ರವಿಯಂತೆ ರಾಜಿಸುವ ಮುನಿವರಂ
ಎದುರಿನಲಿ ಬುವಿಗಿಳಿವ ಮೊದಲೆ ಜವದಿ ;
ಭಕ್ತಿಯಿಂದಚ್ಯುತಂ ಗಿರಿಯಿಂದೆ ಮೇಘದೊಲು
ಉನ್ನತಾಸನದಿಂದೆ ಮೇಲೇಳ್ದನು

ಸತ್ಕಾರವರ್ಣನಂ :—

೧೩

ಬಳಿಕ ಬಹು ಯತ್ನದಿಂದೆತ್ತಿರ್ದ ಹೆಡೆಗಳಂ
ಕಷ್ಟದಿಂ ತಗ್ಗಿಸಿರೆ ಫಣಿಗಣಗಳು ;
ದೇವಕೀಸುತನಿದಿರು ಧಾತೃಸುತ ನಾರದಂ
ಪದಯುಗವ ನೆಲದಮೇಲಿಟ್ಟನೊಲವಿಂ

೧೪

ಅರ್ಘ್ಯಾದಿ ಪೂಜೆಯಿಂ ಚೆನ್ನಾಗಿ ನಾರದನ
ಪೂಜಿಸಿದನೊಲವಿಂದಮಾದಿಪುರುಷಂ ;
ಪುಣ್ಯಕೃತಿಯಲ್ಲದರ ಮನೆಗೆ ಸತ್ಪುರುಷರುರು
ಪ್ರೀತಿಯಿಂದೈದುವರೆ ಜಗದೊಳೆಂದುಂ ?

೧೫

ನಿಂದವರ ಜನ ನೋಡಿ ಹಿಮ–ನೀಲಗಿರಿಗಳೆಂ
ದೂಹಿಸುವ ವೊದಲೆ ಪುರಾಣಪುರುಷಂ ;
ನಿಜಕರದೆ ನೀಡಿರ್ಪ ಪೀಠದಲಿ ಮುನಿವರನ
ಅಭಿಮುಖದೆ ಕೂಡಿಸಿದನೊಲವಿನಿಂದೆ

೧೬

ಮಹಿತ ನೀಲಾಚಲವ ಪೋಲ್ವ ಕಂಸಾಂತಕನ
ಮುಂದೆತ್ತರದ ಪೀಠದೊಳಗೆ ಕುಳಿತ ;
ಮುನಿವರಂ ಸಂಜೆಯೊಳಗುದಯಾದ್ರಿಮುಡಿಗೇರ್ದ
ಚಂದ್ರಾಭಿರಾಮತೆಯನಪಹರಿಸಿದಂ

೧೭

ಯಾಜಕಪ್ರಿಯ ಕೃಷ್ಣ ಹೃಷ್ಟ ಮುನಿಪೂಜೆಯಂ
ವಿಧಿಯಿಂದೆ ಮಾಡಿ ಬಹು ತುಷ್ಟನಾದಂ ;
ಪರಿಚರ್ಯೆಯಿಂ ಹಿರಿಯರಾರ್ಯರಂ ವಶಪಡಿಸೆ
ಒಲಿಸಲೆತ್ನಿಪರಲ್ತೆ ಮತ್ತೆ ಮತ್ತೆ

೧೮

ಸರ್ವತೀರ್ಥದಿ ತಂದ ಸಿರಿಕಮಂಡಲದಿಂದೆ
ತೆಗೆದು ಮುನಿ ಹಸ್ತದಿಂ ಚಿಂಪಡಿಸಿದ ;
ಪಾಪರಾಶಿಯ ನಾಶಮಾಡೆ ಯೋಗ್ಯಮೆನಿಪ
ಜಲವ ಹರಿ ಶಿರಸಿನಿಂ ಸ್ವೀಕರಿಸಿದಂ

೧೯

ಪ್ರೊಸ ವೋಡದಂತೆಸೆವ ಹರಿ ಮುನಿಪನಾಜ್ಞೆಯಿಂ
ಸ್ವರ್ಣಪೀಠದ ಮೇಲೆ ಕುಳಿತುಕೊಳಲು ;
ಜಂಬುನೇರಳೆಫಲದೆ ರಾಜಿಸುವ ಮೇರುಗಿರಿ
ಶಿಖರ ಕಾಂತಿಯ ಗೆಲ್ದುದಾ ಪೀಠವು

೨೦

ಪುಟವಿಟ್ಟ ಮಿಸುನಿಯೊಲು ರಂಜಿಪುಡಿಗೆಯನುಟ್ಟು
ಪೂರ್ಣೇಂದು ಲಾಂಛನದ ಕಾಂತಿ ಪೊಳೆಯೆ;
ಬಡಬಾಗ್ನಿ ಶಿಖೆಗಳಿಂದಾವರಿಸಿದಂಬುಧಿಯ
ತೇಜದೊಲು ರಂಜಿಸಿದ ಕೃಷ್ಣನಾಗ

೨೧

ಚಕ್ರಪಾಣಿಯ ಕಾಂತಿ ಪುಂಜದಲಿ ಬೆರೆದಿರ್ಪ
ಮುನಿವರನ ಕಾಂತಿಗಳು ರಾತ್ರಿಯಲ್ಲಿ;
ಚಲಿಪ ತರು ಪರ್ಣಗಳ ನಡುವೆ ಸಂದುಗಳಲ್ಲಿ
ಕಾಣ್ಬ ಶಶಿಕಿರಣದೊಲು ರಾಜಿಸಿದವು

೨೨

ಅರಳಿರ್ಪ ಪೊಂಗೆಮರ ಕುಸುಮದೊಲು ರಂಜಿಸುತೆ
ಏಳೆಲೆಯ ಬಾಳೆಪೂ ಧೂಲಿಯಂತೆ;
ಶುಭ್ರಕಿರಣಗಳಿಂದಮನ್ಯೋನ್ಯ ಬೆರೆದಿರ್ಪ
ಹರಿ ನಾರದರುಮೊಂದೆ ತೆರದೆ ಕಂಡರ್

೨೩

ಪ್ರಳಯದೊಳು ತನ್ನೊಳುಪ ಸಂಹೃತಿಯ ನೆಸಗಿದೊಡೆ
ವಿಶ್ವವಿಸ್ತಾರದಿಂದಡಗುತಿರ್ಪ;
ಕೈಟಭಾರಿಯ ದೇಹದೊಳು ತಾಪಸಾಗಮದಿ
ನುಂಟಾದ ಸಂತಸಂ ಹಿಡಿಸದಾಯ್ತು

೨೪

ಬೇಸಗೆಯು ರವಿಯಂತೆ ಅಧಿಕ ತೇಜಸ್ವಿಯಹ
ಮುನಿಯಿಂದೆ ಸಂತಸದೊಳರಳಿ ಪೊಳೆವ;
ಸಿರಿವೆತ್ತ ಕಂಗಳಂ ಧರಿಸಿರ್ಪ ಕಂಸಾರಿ
ಕಮಲಾಕ್ಷನೆಂಬುದುಂ ಸ್ಪಷ್ಟಮಾಯ್ತು

೨೫

ಬಳಿಕಚ್ಯುತಂ ದಂತಪಂಕ್ತಿಕಾಂತಿಯ ನೆಪದೆ
ಶಶಿಕಿರಣಶುಭ್ರಮುನಿ ತನುಸೌಧಮಂ :
ಅತ್ಯಧಿಕ ಬಿಳುಪಿಂದೆ ಧಾವಳ್ಯಮೆಸಗುವೊಲು
ಬೆಳ್ನಗೆಯ ಬೀರುತಲಿ ನುಡಿದ ನಿಂತು

ಶ್ರೀಕೃಷ್ಣವಚನಂ :—

೨೬

ನಿನ್ನ ಸಂದರ್ಶನಂ ದೇಹಿಗಳಿಗತ್ಯಧಿಕ
ಯೋಗ್ಯತೆಯನೀಯುವುದು ಮುಕ್ಕಾಲದೊಳ್ ;
ಸಾಂಪ್ರತಂ ಪಾಪಹರ ಭಾವಿ ಶುಭಕಾರಣಂ
ಎಸಗಿರ್ದ ಶುಭಕರ್ಮ ಫಲಿಪುದಿಂದು

೨೭

ವಿಶ್ವಮಂ ವ್ಯಾಪಿಸದ ಸಾಹಸ್ರಕಿರಣಗಳ
ರವಿಯುಮಾವುದ ನಾಶಗೊಳಿಸದಿಹನೊ !
ಅಮಿತ ತೇಜೋರಾಶಿ ನಿನ್ನಿಂದ ಮಾಮೋಹ
ತಮವು ನಿರ್ಬಂಧದಿಂದಳಿವುದಲ್ತೆ !

೨೮

ಪ್ರಜೆಯ ಹಿತ ಬಯಸಿ ಸತ್ಪಾತ್ರದಲಿ ನಿಕ್ಷೇಪ
ವೆಸಗಿ ನಿರ್ವ್ಯಾಕುಲತೆಯಾಂತ ಪಿತನಿಂ ;
ಏಗಳುಂ ಬಳಸಿದರು ತವಿಸದಿಹಧನದಂತೆ
ಶ್ರುತಿಯನಿಕ್ಷೇಪ ನೀನಾದೆ ಗುರುವು !

೨೯

ಪಾಪಹಾರಕಮೆನಿಪ ನಿನ್ನೀ ವಿಲೋಕನದೆ
ಕೃತಕೃತ್ಯನಾಗಿಹೆಂ ಮುನಿಮಾನ್ಯನೆ !
ಆದರುಂ ಮಹಿತಾರ್ಥ ವಾಕ್ಕೇಳಲೆಳಸಿಹೆಂ
ಶ್ರೇಯದೊಳಗಾರಿಗುಂ ತೃಪ್ತಿಯುಂಟೆ ?

೩೦

ಸ್ಪೃಹೆಯಿಲ್ಲದಿರ್ಪ ನಿನ್ನಾಗಮದ ಫಲ ಕೇಳ್ವು
ದೆಂಬುದಾವುದರಿಂದ ಮುಂಟಾದುದೊ ?
ನಮಗಾತ್ಮಗೌರವವನೀವ ನಿನ್ನಾಗಮವೆ
ನಮ್ಮ ಧಾರ್ಷ್ಟ್ಯವ ಮತ್ತೆ ಪೆರ್ಚಿಸುವುದು

ನಾರದಸಂದೇಶಂ :—

೩೧

ಹರಿಯಿಂತು ನುಡಿಯುತಿರೆ ಮುನಿಪೇಳತೊಡಗಿದಂ
ನೀನಿಂತು ಪೇಳುವುದೆ ಪುರುಷೋತ್ತಮ !
ಯೋಗಿಗಳಿಗಾದೊಡಂ ನೀನೆ ಗಮ್ಯನುಯೆನಲು
ನಮಗೆ ಗುರುಕಾರ್ಯಮಿನ್ನಾವುದುಂಟೈ !

೩೨

ಉದ್ರಿಕ್ತವಿಷಯಾಭಿಲಾಷೆಯಂ ತಡೆದಿರ್ಪ
ಅಭ್ಯಾಸಮಿಲ್ಲದೆಯೆ ದುರ್ಗಮ್ಯದ ;
ಮೋಕ್ಷಪಥ ಪೊಂದಿರ್ಪ ಧೀರನಿಗೆ ನಿರಪಾಯ
ಮುಗ್ರಬುವಿ ನೀನಲ್ತೆ ಮಹಿತಾತ್ಮನೆ !

ನಿರ್ಗುಣಸ್ವರೂಪವರ್ಣನಂ :—

೩೩

ಅಧ್ಯಾತ್ಮದೃಷ್ಟಿಯಿಂ ಯೋಗಿಗಳು ಕಷ್ಟದಿಂ
ನಿನ್ನ ಸಾಕ್ಷಾತ್ಕಾರ ಪಡೆವರಜನೆ !
ವಿಕೃತಿ ಬಾಹ್ಯನು ಪ್ರಕೃತಿಭಿನ್ನನೌದಾಶೀನ್ಯ
ನಜನೆಂದು ಭಾವಿಪರ್ ಪೂರ್ವಜ್ಞರು

ಸಗುಣಸ್ವರೂಪವರ್ಣನಂ :—

೩೪

ಮೂಲೋಕಕೋರ್ವನೇ ಶಿಲ್ಪಿ ನೀನೆನಿಸಿರ್ದು
ಲೀಲೆಯಿಂ ಮೇಲೆತ್ತಿದವನಿತಲಮಂ ;
ನಾಗರಾಜಸ್ತಂಭ ಶಿರಗಳಲಿ ಫಣಿಗೃಹದ
ಮೇಲುಛಾವಣಿಯಂತೆ ಸ್ಥಾಪಿಸಿರ್ಪೆ

೩೫

ಅನುಪಮಿತಮೆನಿಸಿದೀ ದಿವ್ಯಮೂರ್ತಿಯ ಮಹಿಮೆ
ಯಾರಿಗಾದರು ಪೂರ್ಣ ತಿಳಿಯಲಳವೆ ?
ಮನುಜನಾದರು ಭವವ ಭಂಗಿಸುವ ಗುಣಗಳಿಂ
ದೇವದಾನವತತಿಯ ಮೀರಿಸಿರ್ಪೆ

೩೬

ಅತಿಭಾರದಿಂ ಕುಸಿದ ಧರಣಿಯಂ ಹಗುರಿಸಲ್
ಬುವಿಗೆ ದಿವದಿಂ ನೀನುಮಿಳಿದೆಯಲ್ತೆ !
ಮೂಲೋಕಮುದರದೊಳು ಧರಿಸಿರ್ಪ ನಿನ್ನಿಂದೆ
ಗೌರವವ ಬುವಿ ತಳೆಯುವಂತೆ ಮಾಡ್ದೈ !

೩೭

ನಿಜತೇಜದಿಂ ಲೋಕಕಂಟಕರ ಹಿಂಸಿಸಲು
ನೀನಿಳಿಯದಿರೆ ಬುವಿಗೆ ಮಹನೀಯನೆ !
ಯೋಗಿಗಳಿಗಾದರುಂ ದುರ್ನಿರೀಕ್ಷ್ಯನುಮೆನಿಪ
ನೀನೆಮ್ಮ ದೃಕ್ಪಥಕೆ ದೊರೆವೆಯೆಂತು ?

೩೮

ಮದಮತ್ತರಿಂ ನೊಂದ ವಿಶ್ವಮಂ ರಕ್ಷಿಸಲು
ವಿಶ್ವರಕ್ಷಕ ನೀನೆ ಶಕ್ತನಲ್ತೆ !
ಇರುಳು ಕತ್ತಲೆ ಕವಿದ ಮಲಿನ ನಭಮಂ ತೊಳೆಯೆ
ರವಿಯ ಹೊರತಿನ್ನಾವ ಶಕ್ತನೆನಿಪಂ

೩೯

ಮೃಗಗಳೊಲು ಕಂಸಾದಿ ನೃಪತಿಗಳ ಕೊಂದುದಕೆ
ಜನ ಮುದದೆ ನುತಿಸುವುದು ಹರಿಯೆ ನಿನ್ನಂ ;
ರಿಪು ಹಿರಣ್ಯಾಕ್ಷಾದಿ ದಾನವರ ಮರ್ದಿಸಿದ
ನಿನಗೆ ಪರ್ಯಾಯದಿಂ ನಿಂದೆಯೆಲ್ತೆ !

ಆಗಮನಪ್ರಯೋಜನ ಕಥನಂ

೪೦

ಶ್ರಮವಿನಿತ ಗಣಿಸದೆಯೆ ವಿಶ್ವಕಂಟಕ ನೃಪರ
ಕ್ರಮವಾಗಿ ಮರ್ದಿಸಲು ತೊಡಗಿರ್ದಪೆ ;
ಆದರೇಂಕಾಂತದಲಿ ನಿನ್ನೊಡನೆ ನುಡಿಯೆ ಮನ
ಮಾತನಾಡಿಸಲೆನ್ನ ನೂಂಕುತಿಹುದು

೪೧

ಅದರಿಂದಮಿಂದ್ರಾನುಜನೆ ಲೋಕಹಿತಕಾಗಿ
ಇಂದ್ರಸಂದೇಶಮಂ ಪೇಳ್ವೆ ಬೇಗ
ಸಕಲ ಕಾರ್ಯಾಗ್ರಣಿಯೆ, ವೃತ್ರಾರಿ ಹಿತವಚನ-
ಮಂ ಸಾವಧಾನದಿಂ ಕೇಳ್ವುದಿಂದು

ಹಿರಣ್ಯಕಶಿಪುವಿನ ದೌರ್ಜನ್ಯಂ

೪೨

ಶತ್ರುಪಕ್ಷದೆ ಭಯವನೆಂದಿಗುಂ ಕಂಡರಿಯ
ರವಿತೇಜಮಾಂತೆಸೆವ ದಿತಿನಂದನಂ ;
ಇಂದ್ರಶಬ್ದಾರ್ಥಮಂ ಪರಿಹರಿಸಿದಾತನಂ
ಹಿರಣ್ಯಕಶಿಪೆಂದು ಕರೆವರಿಳೆಯೊಳ್

೪೩

ಅಸುರಾಭಿಧಾನಕ್ಕೆ ಮೊದಲಿಗಂ ತಾನೆನಿಸಿ
ಪಲದಿನಕಮನ್ವರ್ಥನಾಮ ತಳೆದು ;
ಮತ್ಸರಿಪ ಬಲಶಾಲಿಯಿವನಿಂದೆ ದಿವಿಜತತಿ
ಮಾನಸದೆ ಮೊದಲು ಭಯವವತರಿಸಿತ್ತೈ !

೪೪

ನಾಲ್ಕುದಿಕ್ಪಾಲರಂ ಕಡೆಗಣಿಸಿ ಸಿರಿದೇವಿ
ರಾಗಹೃತೆಯಾಗಿವನ ಸೇವಿಪುದರಿಂ ;
ಸಿರಿಗೆ ಚಪಲೆಯುಮೆಂಬುವಪವಾದ ದುಷ್ಕೀರ್ತಿ
ಸಂಧಿಸಿದುದಂದಿನಿಂ ಸನ್ಮಾನ್ಯನೆ !

೪೫

ಅದುವೊದಲು ಸುರರಿವನ ಆಕ್ರಮಣಮಂ ನೆನೆದು
ನಿಜರೂಪ ಕೋಭ್ಯೈಕಫಲವೆಸಗಿದರ್ ;
ಪುರವ ದುರ್ಗಂಗಳಂ ಮಸೆದಾಯುಧಂಗಳಂ
ಶೂರರಿಂ ಸೈನ್ಯಮಂ ಕವಚ ಘನಮಂ

೪೬

ಸಿರಿಗಾಶ್ರಯನುಮೆನಿಸಿ ಭುವನಾಂತರಂಗಳಲಿ
ಸ್ವೈರದಿಂ ಸಂಚರಿಸಲಾವದಿಶೆಯಂ ;
ಪುಗುವನಾದಿಶೆಯೆಡೆಗೆ ಮಕುಟರತ್ನಗಳೊಳಗೆ
ಕರವಿಟ್ಟು ವಂದಿಪರು ದಿವಿಜರಿರದೆ

೪೭

ಸುವಿಶಾಲಕೇಸರದೆ ಮೇಘತತಿ ಚದುರುತಿರೆ
ನರಸಿಂಹ, ಸಿಂಹತನು ತಳೆದು ನೀನು ;
ನವತರುಣಿ ಕುಚಸಂಗದಿಂ ಭಂಗುರತೆಯಾಂತ
ನಖಗಳಿಂದವನುದರ ಸೀಳ್ದಿಯಲ್ತೆ !

ರಾವಣದುರಾಕ್ರಮಣಂ

೪೮

ಬಳಿಕವಂ ಸುರರೊಡನೆ ರಣದರ್ಪಸಂಜನಿತ
ತೋಳ್ತೀಂಟೆಯಂ ಕಳೆಯಲೆಳಸಿ ಮತ್ತೆ ;
ಕ್ಷತರಕ್ಷಣ ಸ್ವರ್ಗಭೀಷಣಂ ತಾನೆನಿಸಿ
ರಾವಣಾಭಿಧೆ ತಳೆದು ದೈತ್ಯನಾದಂ

೪೯

ಮೂಲೋಕದೊಡೆತನವ ಬಯಸುತತಿರಾಗದಿಂ
ಪತ್ತನೆಯ ತಲೆಕಡಿಯಲೆಳಸಿದಾಗ ;
ಇಷ್ಟಸಾಹಸನೀತನಿಚ್ಛೆಗನುಗುಣವೆನಿಪ
ಶಿವನನುಗ್ರಹ ವಿಘ್ನವೆಂದು ಬಗೆದಂ

೫೦

ಕೈಲಾಸಗಿರಿಯೆತ್ತಲೆಳಸಿ ಯಾವನು ತನಗೆ
ವರವಿತ್ತ ಪರಶಿವಗೆ ಭಕ್ತಿಯಿಂದೆ;
ಭಯಚಕಿತ ಗಿರಿಜೆ ಬಹು ಸಂಭ್ರಮದೆ ತಾನಾಗಿ
ಬಿಗಿಯಪ್ಪಿದುಪಕಾರವೆಸಗಿ ಮೆರೆದಂ.

೫೧

ಮುತ್ತಿದಂ ಸುರಪುರವ ಭೇದಿಸಿದ ನಂದನವ
ಸುರವಧುಗಳಪಹಿರಿಸಿ ರತ್ನಕದಿದು;
ಇಂತು ಬಲಯುತನಾಗಿ ಸುರಪನಂ ದ್ವೇಷಿಸುತೆ
ಪಗಲಿರುಳ್ ದಿವಕುಪದ್ರನವೆಸಗಿದಂ.

೫೨

ಯುದ್ಧದೊಳಗಿನಟ್ಟಿಕೊಂಡೋಡಿ ಬರುತಿರಲ್
ಸ್ವರ್ಗಗಜ ಗಮನಮಂ ಸುರಪಾಶ್ವದ;
ಪದಗತಿಯ ಭಂಗಿಯಭಿನಂದಿಸದೆ ಬಲರಿಪುವು
ಕೇವಲಂ ಶೀಘ್ರಗತಿ ಪೊಗಳುತಿರ್ದಂ.

೫೩

ಅಸ್ಥಿರದೃಶನೆನಿಪ ಕೌಶಿಕಂ ರವಿರಶ್ಮಿ
ತೆರದಿವನ ತೇಜಮಂ ತಡೆಯುಮೊಡನೆ;
ಹೇಮಾದ್ರಿಗುಹೆ ಗೃಹಗಳಂ ಪೊಕ್ಕು ದುಗುಡದಿಂ
ದಿನಗಳಂ ಕಳೆದನತಿ ಭೀತಿಯಿಂದೆ.

೫೪

ಪೆರ್ಬಂಡೆಯೊಲು ಕಠಿನ ಕಂಠದಲಿ ಘರ್ಷಿಸಲು
ಸಿಡಿವಗ್ನಿ ಕಣಗಳಿಂ ದುಸ್ಸಹ್ಯದ;
ವಿಷ್ಣುಚಕ್ರವು ಲೋಕಪ್ರಭು ರಾವಣನ ಶಿರವ
ಕತ್ತರಿಸಲಸಮರ್ಥಮೆನಿಸಿತಂದು.

೫೫

ರಾವಣಂ ದರ್ಪದಿಂ ಮದದಿಂದೆ ದಂತಿಯೊಲು
ಶಂಖಭೇದಿಸಿ, ಧನದಮಾನಸದಲಿ;
ಗಾಭೀರ್ಯಮಂ ತಳೆದು ಪುಷ್ಪಕವ ಕಿತ್ತೆಸೆದು
ಕಂಪಗೊಳಿಸಿದನಲ್ತೆ ಮತ್ತೆ ಮತ್ತೆ!

೫೬

ರಣಗಳಲಿ ವರುಣ ಪ್ರಯೋಗಿಸಿದ ಸರ್ಪಾಸ್ತ್ರ
ಪಾಶಗಳು ರಾವಣನ ರೋಷಜನಿತ;
ಹುಂಕಾರದಿಂ ಬೆದರಿ ಬೇಗದಿಂ ಹಿಂದಿರುಗಿ
ಬಿಟ್ಟವನ ಕುತ್ತಿಗೆಯ ಸುತ್ತಿರ್ದವು.

೫೭

ಶಾರ್ಙ್ಗಧನು ನಿರ್ಮಿಸಲ್ಪ್ರೇತಪತಿ ಕೋಣನಾ
ಕೋಡುಗಳ ರಾವಣಂ ಕೀಳಲಾಗ;
ಭಾರಮಳಿದಿರ್ದರುಂ ನಾಚಿಕೆಯ ಭರದಿಂದೆ
ತಲೆತಗ್ಗಿಸಿರ್ದುದತಿ ದುಗುಡದಿಂದೆ.

೫೮

ರವಿ, ಗ್ರೀಷ್ಮಮಾದರುಂ ಸಂಕುಚಿತ ವೃತ್ತಿಯಿಹ
ಕರಗಳಿಂ ಸ್ಪರ್ಶಿಸಲು ಸಂದೇಹಿಸಿ;
ತಣ್ಣನೆಯ ಬೆವರು ಹನಿ ಮುತ್ತುಗಳ ವೊತ್ತದಿಂ
ದಿವನ ವಧುಗಳನಿರದೆ ಭೂಷಿಸಿದನು.

೫೯

ಸಂಪೂರ್ಣಕಲೆಗಳಿಂ ಗೃಹಗಳಂ ಬಿಡದಿರ್ಪ
ಮಾನಿನಿಯರುತ್ಸಹಿಪ ಪಟು ಚಂದಿರಂ;
ಸುವಿಲಾಸಿ ರಾವಣನ ರಾಗಮಂ ಪೆರ್ಚಿಸುತೆ
ನರ್ಮ ಸಚಿವನುಮೆನಿಸಿ ಸೇವಿಸಿದನು.

೬೦

ಚದುರೆಯರ ವಿಭ್ರಮದ ದಂತಪತ್ರಾಳಿಗಳ
ವಿರಚಿಸಲು ನಿಜವಾಗಿ ಮೌನಿಯೆನಿಪ;
ದೈತ್ಯನಿವನಿಂ ಮುರಿದ ಗಣಪತಿಯ ಕೊಂಬೊಂದು
ಮೀವರೆಗೆ ಮತ್ತೆ ತುಸು ಮೊಳೆಯಲಿಲ್ಲಂ.

೬೧

ಅಂತವುರ ನಾರಿಯರ ಸೀರೆಯಲುಗಿಸಿ ಸ್ಪಷ್ಟ
ತಪ್ಪೆಸಗಿದರು ತೊಡೆಯ ನೋಡಲಿರ್ಪ;
ಲೋಲಾಕ್ಷ ರಾವಣಂ ಪ್ರಿಯವೆಸಗಿದ ಸಿಲನಿಂ
ನಿರ್ದೋಷಿ ಸುರರ ಬಹು ಕರುಣಿಸಿದನು.

೬೨

ಜನರ ಪರಿಭವಮೆಸಪ ರಾವಣನ ತೇಜಸಿನ
ಮಹಿಮೆಯಿಂ ಬಹುಕೃಶತೆಯಾಂತನಲನು;
ದುಗುಡದಿಂ ಸುರಿವಶ್ರುಧಾರೆಯಿಂದಿಮ್ಮಡಿಪ
ಕರ್ಬೊಗೆಯ ಭಾರಮಂ ಧರಿಸಿರ್ದನು.

೬೩

ಕ್ರೂರಿಯಂ ಸೇವಿಸಲು ಪರಮರ್ಮವೇಧಿಸುವ
ತನ್ನೆರಡು ನಾಲಗೆಯ ದೋಷತ್ಯಜಿಪ;
ಕುಟಿಲಗತಿ ತೊರೆದಿರ್ಪ ಸ್ವಕರ್ಣಕಗಳೆನಿಪ
ಫಣಿಕುಲದೆ ಭುಜಗತ್ವ ಪೊಂದಲಿಲ್ಲಂ.

೬೪

ಅವನ ಗಜವೃಂದದಿಂ ಹೋರಾಡಿ ಕೆನ್ನೆಯಿಂ
ಸೋರಿರ್ದ ಮದಜಲಂ ದಿಶೆಗಳೆಡೆಗೆ;
ಧಾವಿಸಿದ ಗಜಗಳುಂ ಪಿಂದಿರುಗದಿರೆ ಚಿರಂ
ಅನ್ವರ್ಥ ದಿಗ್ಗಜತೆ ಸಿದ್ಧಮಾಯ್ತು.

೬೫

ಸ್ಮರತಪ್ತ ರಾವಣನ ತನುವಧಿಕ ಸುಡುತಿರ್ಪ
ಸುರಬಂದಿ ನಿಶ್ವಾಸ ಪವನನಿಂದೆ:
ಶಂಪಾಂತವೊಲು ಗಂಧಜಲಸೇಕದಿಂ ನಾಂದ
ಬೀಸಣಿಗೆ ಗಾಳಿಯಿಂ ಸುಖಿಸಲಿಲ್ಲಂ.

೬೬

ಆವಗುಂ ಕುಸುಮಿಸಿದ ಋತುಗಳಲಿ ವರ್ಷರ್ತು
ಗ್ರೀಷ್ಮದಿಂ, ಹೇಮಂತ ಶರದಿಯೊಡನೆ;
ಶಿಶಿರ ಮಧುಮಾಸದೊಡಗೂಡಿ ರಾವಣ ಪುರದೆ
ವಾಸ್ತವದೆ ಸಕುಟುಂಬಿ ಯೆನಿಸಿರ್ದವು.

೬೭

ಅಜನಮಾನವನೆನಿಸಿ ಮನುಕುಲದೆ ಜನಿಸಿರ್ಪ
ಮಹಿತನಿವ ತನ್ನಂತ್ಯ ಗೊಳಿಪನೆಂದು;
ಬಗೆದಿರ್ದರುಂ ದೈತ್ಯ ಜಾನಕಿಯಂ ಬಿಡಲಿಲ್ಲ
ಮಾನಿಗಭಿಮಾನಮೇ ದ್ರವ್ಯಮಲ್ತೆ !

೬೮

ದಾಶರಥಿಯಾಗಿರ್ದ ನೀನಂದು ವನದಿಂದೆ
ವನಿತಾಪಹಾರಮಂ ಮಾಡಿದಿವನಂ;
ಸೇತು ಬಂಧನದಿಂದೆ ಚಲಿಪಂಬುಧಿಯ ದಾಂಟಿ
ಲಂಕೆಯೊಳು ವಧಿಸಿದುದ ನೆನೆವೆಯಲ್ತೆ !

ಶಿಶುಪಾಲನ ಔದ್ಧತ್ಯಂ:—

೬೯

ಬಳಿಕೀಗ ಪರವಂಚಕನುಮೀತ ಭೂಮಿಕೆಯ
ಬದಲಿಸುವ ನಟನಂತೆ ಜನ್ಮತಳೆದು;
ಶಿಶುಪಾಲ ಸಂಜ್ಞೆಯಿಂ ನಿಜರೂಪು ಮರೆಮಾಚಿ
ಇತರರಿಗೆ ಬೇರೆಯವನಂತೆ ಕಾಣ್ಬಂ.

೭೦

ಅವನು ನಿಜ ಬಾಲ್ಯದಲಿ ನಾಲ್ಕುಭುಜ ಮೂರುಕಣ್
ಪೂರ್ಣೇಂದು ಸಮವದನನಾಗಿರ್ದನು;
ಯೌವನಂ ತಳೆದೀಗ ನಿಜಕರಾಕ್ರಾಂತ ಭೂ
ಭುಜನುಗ್ರ ತೇಜದಿಂ ರವಿ ನಿಶ್ಚಯಂ.

೭೧

ಸ್ವೇಚ್ಛೆಯಿಂ ನಿಜಬಲದೆ ಸುರದೈತ್ಯರಾಕ್ಷಸರ
ನಿಗ್ರಹಾನುಗ್ರಹಕೆ ಕರ್ತನೆನಿಸಿ;
ದೇವತಾರಾಧನದೆ ಪಲತೆರದ ವರಪಡೆದ
ರಾವಣಾದಿಗಳನುಂ ಹಾಸ್ಯಗೈವಂ.

೭೨

ವಿಜಿಗೀಷು ಶಿಶುಪಾಲನಿಂದಿಗುಂ ಪೂರ್ವದೊಲು
ಬಲಗರ್ವದಿಂ ಜಗವ ಪೀಡಿಸುವನು.
ನಿಶ್ಚಲಪ್ರಕೃತಿಯಿದು ಜನ್ಮಾಂತರಂಗಳೊಳು
ಪುರುಷನಂ ಪೊಂದುವುದು ಸತಿಯತೆರದೆ.

೭೩

ಅದರಿಂದೆ ವಿಧಿಯಾಜ್ಞೆಯಂ ಮೀರಿದೀತನಂ
ಯಮರಾಜನತಿಥಿಯಂ ಮಾಳ್ಪುದಿಂದು;
ದೌರ್ಜನ್ಯ ಪರಿಪಾಕದಿಂ ವಿಪದಕಾರಿಗಳು
ನಿನ್ನಂಥ ಸಾಧುವಿಗೆ ವಧ್ಯರಲ್ತೆ!

೭೪

ರಿಪುನಾಶ ನಿಶ್ಚಯವ ತಳೆದಾ ಪುರಂದರನ
ಹೃದಯಮುಂ ಮೊದಲಿನೊಲು ಬಲ್ಮೆವಡೆದು;
ಸಾಂದ್ರತರ ರೋಮಾಂಚಯುತ ಕುಚಾಗ್ರದಿ ಭರದೆ
ಶಚಿಯು ಬಿಗಿದಪ್ಪಿದುದ ಸಹಿಸಲಿನ್ನು

೭೫

ನಾರದಂ ಪೇಳ್ದಿಂತು ನಭಕಡರಿ ಮುಂಚಂದ್ರ
ಕಳೆ ತಳೆಯೆ, ಬಳಿಕಾಗಲೆಂದ ಹರಿಯ;
ವದನದಲಿ ಚೈದ್ಯಂಗೆ ಕನಲಿ ರಿಪುನಾಶಕ್ಕೆ
ಭ್ರುಕುಟಿ ಛಲಕೇತುದಿಸಿ ತಂದು ಭರದೆ.

ಉದ್ಧವ ಬಲದೇವ ಶ್ರೀ ಕೃಷ್ಣ ಸಂಭಾಷಣಂ.

೧

ಬಳಿಕ ಯಜ್ಞೋದ್ಯುಕ್ತ ಪಾರ್ಥನಿಂ ಕರೆಬರಲು
ಶಿಶುಪಾಲಗಭಿಮುಖಂ ಗಮಿಸಲಿರ್ದ;
ಮುರವೈರಿ ಸುರ–ಮಿತ್ರ ಕಾರ್ಯಂಗಳೆರಡನುಂ
ಯೋಚಿಸುತೆ ವ್ಯಾಕುಲಂ ಗೊಂಡಿರ್ದನು

೨

ನಭದಿದಿರೊಳುದಯಿಸುವ ಗುರುಶುಕ್ರರನುಸರಿಪ
ಚಂದಿರನ ಶೋಭೆಯಂ ತಳೆದ ಹರಿಯು;
ಬಲರಾಮ ಉದ್ಧವರನೊಡಗೂಡಿ ತರುವಾಯ
ಮಂತ್ರಭವನವ ಪೊಕ್ಕನಾಲೋಚಿಸೆ.

೩

ವಿಶ್ವಶಾಂತಿಯ ಬಯಸಿ ವೇದಿಕೆಯ ಮೇಲೇರಿ
ಮಂಡಿಸಿಹ ನರಶಿಖಿತ್ರಯ ವೋದದಿಂ;
ಯಜ್ಞವೇದಿಕೆಯೇರಿ ಪ್ರಜ್ವಲಿಸಿ ರಾಜಿಸುವ
ಮೂರಗ್ನಿಗಳ ತೆರದಿ ಬೆಳಗುತಿಹರು.

೪

ರತ್ನಕಂಭಗಳಲ್ಲಿ ನಿಜರೂಪು ಬಿಂಬಿಸಲು
ಓರೋರ್ವರಾದರಾ ಮೂವರಾಗ;
ಬಹುಪುರುಷವೃಂದದಿಂ ಬಳಸಿರ್ಪ ವೀರರೊಲು
ಸಭೆಯೊಳಗೆ ಸುತ್ತಲುಂ ರಾಜಿಸಿದರು.

೫

ಈ ಮೂವರುನ್ನತದ ಹೇಮಪೀಠಗಳಲ್ಲಿ
ಕುಳಿತಿರ್ದುದಾ ಸಭೆಯ ಮಧ್ಯದಲ್ಲಿ;
ಮೂರು ಶಿಖರಗಳಿರ್ಪ ಪರ್ವತವನೇರಿದಾ
ಕೇಸರಿಗಳಂತವರು ರಾಜಿಸಿದರು

೬

ಬಳಿಕೀರ್ವ ಹಿರಿಯರಿಗೆ ಜಾಣ ಹರಿ ವಿನಯದಿಂ
ಎರಡು ಗುರುಕಾರ್ಯಗಳ ನಿರ್ವಹಿಸಲು;
ಬರ್ಪ ವಿಪ್ರತಿಷೇಧದೆಡರುಗಳ ಬಿಡಿಬಿಡಿಸಿ
ಬಿತ್ತರಿಸಿ ತೋರಿಸಿದ ಬಗೆವೊಗುವೊಲು

೭

ಮಲ್ಲಿಗೆಯ ಮೊಗ್ಗಿನೊಲು ರಾಜಿಸುವ ಪಲ್ಲುಗಳ
ಹರಿ ವಾಣಿ ಸಭೆಯಂತರಾಳದಲ್ಲಿ;
ಸುಸ್ಪಷ್ಟವರ್ಣಗಳ ಮುಗುಳುನಗೆ ಕಾಂತಿಯಿಂ
ತೊಳೆದಂತೆ ಮಂಜುಳಂ ಕೇಳಿಸಿದುದು.

ಶ್ರೀಕೃಷ್ಣನ ಮಾತು

೮

ನಿಮ್ಮ ನಲ್ಮಾತುಗಳಿಗವಕಾಶ ಕಲ್ಪಿಸಲು
ಮಾತ್ರಮೇ ನುಡಿವೆ ಸಿದ್ಧಾಂತಮಲ್ತು;
ನಾಟಕಗಳಾದಿಯಲಿ ರಂಗವಿಘ್ನವ ಕಳೆಯೆ
ಪೂರ್ವರಂಗವ ಮೊದಲು ರಚಿಸುವಂತೆ.

೯

ದಿಗ್ವಿಜಯವೆಸಗಿರ್ಪ ಸೋದರರ ಭುಜಬಲದಿ
ಭೂಪಾಲರೆಲ್ಲರಿಂ ಕಪ್ಪಕೊಂಡ;-
ಯಮನಂದನನು ನಮ್ಮ ನೆರವಿಲ್ಲದಿರ್ದೊಡಂ
ಸುಸಮರ್ಥನಾದಾನು ಯಜ್ಞವೆಸಗೆ.

೧೦

ಪಥ್ಯಮಿಚ್ಛಿಪ ನರನು ವರ್ಧಿಷ್ಣು ಶತ್ರುವಂ
ಕಡೆಗಣಿಸನೆಂದಿಗುಂ ಅಲ್ಪನೆಂದು ;
ಅಭಿವೃದ್ಧಿಯೈದುತಿಹ ರೋಗಮುಂ ಶತ್ರುವುಂ
ತಿಳಿದವರ್ ಸಮಮೆಂದು ಪೇಳ್ವರಲ್ತೆ. !

೧೧

ಸಾತ್ವತೀಸೂನುವೆನಗಪರಾಧ ಗೈದುದಕೆ
ಎಳ್ಳನಿತು ಪರಿತಾಪಮಿಲ್ಲಮೆನಗೆ ;
ಆದರಿವನೀಲೋಕ ಪರಿತಾಪಗೊಳಿಸುವುದು
ಬಹುವಾಗಿ ನೋಯಿಸುವುದೆನ್ನಮನಮಂ.

೧೨

ನಿಮ್ಮ ಸಲಹೆಯ ತಿಳಿವವರೆಗೆನ್ನ ಮತಮಿಷ್ಟು
ತಮ್ಮಾಶಯವನಿರದೆ ಪೇಳಿಮಿಂದು ;
ವಿದ್ವಾಂಸನಾದೊಡುಂ ಕರ್ತವ್ಯ ನಿರ್ಣಯಿಸ–
ಲೋರ್ವನೇ ಸಂದೇಹಗೊಳ್ವನಲ್ತೆ !

೧೩

ಉಚಿತಾರ್ಥ ಪದಗುಂಫದಿಂದೆಸೆವ ನಲ್ನುಡಿಯು–
ನಿಂತುಸುರಿ ಮಾಧವಂ ಸಮ್ಮನಾದಂ.;
ಪ್ರಸ್ತಾಪಕನುಗುಣಂ ನುಡಿವಲ್ಲಿಯಾವಗುಂ
ಪ್ರಕೃತಿಯಿಂ ಮಿತವಚನರಲ್ತೆ ಪಿರಿಯರ್.

೧೪

ಬಳಿಕ ರಿಪುವೆಸಗಿರ್ದ ದುಷ್ಕೃತಿಗಳಂ ನೆನೆದು
ಸಂತಾಪ ಭರದಿಂದ ಮುದಿರುತಿರ್ಪ ;
ರಮಣಿಬಿಂಬಾಧರವ ಚುಂಬಿಸಲು ಪಟುವೆನಿಪ
ತುಟಿಯಲುಗೆ ಬಲರಾಮ ನುಡಿದನಿಂತು.

ಬಲರಾಮನ ಮಾತು

೧೫

ಹಿರಿಯನಾದುದರಿಂದೆ ಬಳಿಕುಸುರಲೆಳಸಿರ್ಪ
ತತ್‌ಕ್ಷಣಪ್ರತಿಸಂಹೃತಿಯ ಪೊಂದಿದ;
ಕಾರ್ಯಜ್ಞನುದ್ಧವನ ಸೂಕ್ತಿಗಳನಾದರದೆ
ಸಿದ್ಧಾಂತಪಕ್ಷನುಂ ಪ್ರೋಂದಿಸುತಲಿ.

೧೬

ಮದಿರೆಯಾಸ್ವಾದನದೊಳುದಿಸಿ ರಂಜಿಸುತಿರ್ಪ
ಮದಪಾಟಲದ್ಯುತಿಯ ತಳೆದೆಸೆಯುವ;
ನಲ್ಮಡದಿ ರೇವತಿಯ ವದನದುಚ್ಛಿಷ್ಟದಿಂ
ಪರಿಪೂತ ನೇತ್ರಪುಟ ತಿರುಗಿಸುತಲಿ.

೧೭

ಆಲಿಂಗನವ ಬಯಸಿ ಬರ್ಪ ವಧು ಸ್ತನಯುಗದ
ಕಾಠಿನ್ಯ ಗುಣಕೆ ನಲ್‌ಸಾಕ್ಷಿಯೆನಿಪ;
ವನಮಾಲೆಯಂ ತನ್ನ ಅಭಿಮಾನ ತಾಪದಿಂ
ಕಾಯ್ದ ಮುಖಪವನನಿಂ ಮ್ಲಾನಗೊಳಿಪ

೧೮

ಸಂಜೆಗೆಂಪಿನ ನಭದೆ ಮೂಡಿರ್ಪ ತಾರೆಗಳ-
ನನುಕರಣ ಮಾಡುತಲಿ ಕಂಗೊಳಿಸುವ;
ರಿಪು ವೈರದಿಂದೊಗೆದ ಕ್ರೋಧಾರುಣಾಂಗದಲಿ
ರಂಜಿಸುವ ಬೆವರು ಹನಿ ಪೊಳೆಯುತಿರಲು

೧೯

ಥಳಥಳಿಪ ಕುಂಡಲಕೆ ಪೋಣಿಸಿದ ಮಾಣಿಕ್ಯ
ಮಣಿಶಕಲಕಾಂತಿಯಿಂ ರಮ್ಯಮೆನಿಪ;
ನೀಲೋತ್ತರೀಯಮುಂ ಮಾಂದಳಿರ ಶೋಭೆಯಿಂ
ಕೃಷ್ಣಲೋಹಿತಮಾಗಿ ಪೊಳೆಯುತಿರಲು

೨೦

ರೇವತೀ ರಮಣಿಮುಖ ವಾಸದಿಂ ಲಭಿಸಿರ್ಪ
ಸೌರಭವನೊಡಗೊಂಡು ಹೃದ್ಯಮೆನಿಪ;
ಮದಿರೆಯಿಂ ಸಂಸರ್ಗಪಡೆದು ತನ್ನಯ ಮುಖದೆ
ಆಮೋದಮುದ್ವಮನಗೈಯುತಿರಲು

೨೧

ವದನಮೆಂಬುವ ನೆಪದೆ ರಂಜಿಸುವ ತಾವರೆಯ
ಸುತ್ತಲುಂ ಸಂಚಲಿಪ ಮಧುಪಗಳನು;
ಉದ್ಗಮಿಪ ದಂತಾಂಶು ಕಾಂತಿಯಿಂ ಧವಲತೆಯ
ಪೊಂದಿಸುತೆ ಬಲರಾಮ ನುಡಿದನಿಂತು.

೨೨

ವಾಸುದೇವನುಮಿಂತು ಧೈರ್ಯದಿಂದೀವರೆಗೆ
ನುಡಿದ ನಿರ್ದೋಷಕರ ಮಾತುಗಳಿಗೆ;
ಉತ್ತರಂ ಕಾರ್ಯದಲಿ ತೊಡಗುವುದು ಮಾತ್ರಮೇ
ಶೀಘ್ರದಿಂದೆಮ್ಮ ಮುಂದಿರ್ಪುದಿಂದು.

೨೩

ವಿಸ್ತಾರದಿಂ ಪೇಳ್ವ ಮಾತು ಸಂಕ್ಷಿಪ್ತಮಹ
ಹರಿನುಡಿಗಳಂ ಮೀರಲರಿಯದೆಂದುಂ;
ರಾಶಿಸೌದೆಯ ಸುಡುವ ಬೆಂಕಿ ನಿಜಕಾಂತಿಯಿಂ-
ದೆಂದಿಗಾದರು ರವಿಯ ಗೆಲಲಪ್ಪುದೇಂ?

೨೪

ಆದರಿಂದೆ ಸೂತ್ರದೊಲು ಸಂಕ್ಷಿಪ್ತಮಾದರುಂ
ಅರ್ಥಗಾಂಭೀರ್ಯದೀಮಾತುಗಳಿಗೆ;
ವಿಸ್ತಾರದಿಂದೊರೆಯುವೀ ನನ್ನ ನುಡಿಗಳಿವು
ಭಾಷ್ಯರೂಪಗಳಾಗಿ ಮೆರೆಯಲೆಂದುಂ.

೨೫

ಕುಶಲಜನರುಕ್ತಿಗಳು ಪ್ರತಿಕೂಲವಾದಿಯಹ
ವಾಕ್ಪತಿಯನಾದಡುಂ ಮೂಕಗೊಳಿಕುಂ;
ಅನುಕೂಲವಾದಿಸುವ ಜಡರನಾದರು ಮತ್ತೆ
ವಾಗ್ಮಿಗಳನೆಸಗುವುವು ತಡಮಾಡದೆ.

೨೬

ಮಂದಮತಿಯಪ್ಪನುಂ ಗ್ರಂಥಗಳನಭ್ಯಸಿಸಿ
ಸಂಧ್ಯಾದಿ ಷಡ್ಗುಣವ ಶಕ್ತಿತ್ರಯವ;
ಮೂಬಗೆಯ ಸಿದ್ಧಿಗಳ ವೃದ್ಧ್ಯಾದಿ ಉದಯಗಳ
ವ್ಯಾಖ್ಯಾನಮಂಗೆಯ್ಯೆ ಶಕ್ತನಲ್ತೆ.

೨೭

ಕಾರ್ಯಾನುಭವರಹಿತ ವಾಚಾಳಿಯೊದರುತಿಹ
ವಾಗ್ಜಾಲಮೆಲ್ಲವುಂ ವ್ಯರ್ಥಮೆನಿಕುಂ;
ಗುರಿಯ ತಪ್ಪಿದ ಶರವ ಹೂಡಿ ವಿಜೃಂಭಿಸುವ
ಬಿಲ್ಗಾರನಭಿನಯಾಟೋಪದಂತೆ.

೨೮

ಸ್ಕಂಧಪಂಚಕನುಳಿದು ಸರ್ವದೇಹಂಗಳಲಿ
ಆತ್ಮಬೇರಿಲ್ಲದೊಲು ಬೌದ್ಧರಲ್ಲಿ;
ಸಂಧ್ಯಾದಿ ಪಂಚಕವನುಳಿದು ಭೂಪಾಲರಿಗೆ
ಬೇರೆಮಂತ್ರವು ಕಾಣದಿರ್ಪುದಲ್ತೆ !

೨೯

ಸರ್ವಾಂಗ ಸಂವರಣಮಾಗಿರ್ದರುಂ ಭೀರು
ಯೋಧನೊಲು ಧೃಢಗುಪ್ತಮಂತ್ರಮಿನ್ನು;
ಪರಭೇದಶಂಕೆಯಿಂ ಚಿರಕಾಲ ತಡೆದಿರಲ್
ದುಸ್ಸಾಧ್ಯಮಲ್ಲದೊಡೆ ಕಾರ್ಯಕೆಡುಗುಂ.

೩೦

ಆತ್ಮೋದಯಂ ಶತ್ರುನಾಶನವುಮೆಂಬೆರಡು
ಇಂತಿಷ್ಟೆ ನೀತಿಯಿದು ವಿಶ್ವದಲ್ಲಿ!
ಇದನುಮಂಗೀಕರಿಸಿ ಜಾಣರುಂ ಪಲತೆರದೆ
ವಾಗ್ಮಿತೆಯ ಪ್ರಕಟಿಸಲು ವಿಸ್ತರಿಪರು

೩೧

ಅತ್ಯಧಿಕಮೈಶ್ವರ್ಯಮಿರ್ದರುಂ ಮಹಿತರ್ಗೆ
ಸಂತೃಪ್ತಿಯೋಗ ತಾನುಚಿತಮಲ್ತು ;
ಪೂರ್ಣಚಂದ್ರೋದಯವ ಬಯಸುವಾ ಸಾಗರವೆ
ದೃಷ್ಟಾಂತಮಾಗಿರ್ಪುದೀ ವಿಷಯದೊಳ್

೩೨

ಅಲ್ಪ ಸಂಪದದಿಂದೆ ಸಂತೃಪ್ತಿಯಂ ಪಡೆದು
ಸುಸ್ಥಿರಂ ತಾನೆಂದು ತಿಳಿವನಾವಂ ;
ಅಂಥವನ ಸಂಪದವ ಕೃತಕೃತ್ಯದೈವಮುಂ
ಪೆರ್ಚಿಸದು ಎಂದು ನಾಂ ಬಗೆವೆನಿಂದು

೩೩

ರಿಪುಗಳಂ ಬುಡಮಟ್ಟ ಕಿತ್ತೆಸೆಯದೆಯೆ ಜಗದಿ
ಪೊಂದರುದಯಮನೆಂದುಮಭಿಮಾನಿಗಳ್ ;
ಗಾಢಾಂಧಕಾರಮಂ ಪ್ರಧ್ವಂಸನಂಗೆಯ್ದು
ಉದೆಯಿಸುವ ರವಿಯೆ ದೃಷ್ಟಾಂತಮಲ್ತೆ !

೩೪

ಶತ್ರುಗಳ ಸಂಪೂರ್ಣ ನಾಶಮುಂ ಪೊಂದಿಸದೆ
ದುರ್ಲಭ್ಯಮಲ್ತೆ ಪ್ರತಿಷ್ಠೆ ಜಗದಿ !
ಧೂಳಿಯಂ ನೆನಸಿ ಕೆಳಗಿಳಿಸದೆಯೆ ಜಲವು ತಾಂ
ತಿಳಿಯಾಗಿ ಮೇಲೇರಿ ನಿಲ್ವುದೆಂತು ?

೩೫

ಓರ್ವನಾದಡು ವೈರಿ ಎನ್ನೆಗಂ ಬದುಕಿಹನೊ
ಅನ್ನೆಗಂ ಸುಖಮಿನ್ನು ದೊರೆವುನೆಂತು ;
ಅಸುರದ್ರುಹರೆದುರಿನೊಳೆ ಸೈಂಹಿಕೇಯಂ ಬಿಡದೆ
ಚಂದ್ರನಂ ಪೀಡಿಪುದ ಕಾಂಬೆವಲ್ತೆ

೩೬

ಉಪಕಾರಮಪಕಾರ ಕೃತ್ಯದಿಂ ಕೃತ್ರಿಮದ
ಮಿತ್ರನುಂ ಶತ್ರುವುಂ ಶ್ರೇಷ್ಠನೆನಿಕುಂ ;
ಕಾರ್ಯವಶದಿಂ ಸಹಜ ಪ್ರಾಕೃತರನಿಯಮದಿಂ
ಶತ್ರು ಮಿತ್ರೋಭಯರುಮೆನಿಪರಲ್ತೆ !

೩೭

ಉಪಕಾರಿ ರಿಪುವಿನಲಿ ಸಂಧಿಮಾಡಲುಬಹುದು
ಅಪಕಾರಿ ಮಿತ್ರನೊಳು ತಗದು ಸಂಧಿ ;
ಶತ್ರು ಮಿತ್ರತ್ವಗಳಿಗಪಕಾರಮುಪಕಾರ
ಕೃತಿಗಳೇ ಲಕ್ಷಣವು ಪೇಳಿಪಡುಗುಂ

೩೮

ರಾಕ್ಷಸಾತ್ಮಕ ಕ್ರಮದೆ ರುಕ್ಮಿಣಿಯನಪಹರಿಸೆ
ಚೈದ್ಯ ವಿಪ್ರಿಯಗೈದ ಹರಿಯೆ ನಿನಗೆ ;
ರೂಢಮೂಲಮುಮೆನಿಪ ವೈರತರುವಿಗೆ ಜಗದಿ
ಸ್ತ್ರೀಯರೇ ಪ್ರಬಲತರ ಮೂಲಮಲ್ತೆ !

೩೯

ನೀನು ನರಕಾಸುರನ ಜಯಿಸೆ ತೆರಳ್ದುದ ತಿಳಿದು
ಮುತ್ತಿದಂ ಚೈದ್ಯನೀ ಪುರಿಯನಂದು ;
ತೆರಳಲರ್ಯಮ ಮೇರುತಪ್ಪಲಿನ ತಟಗಳಂ
ಗಾಢಾಂಧಕಾರ ತಾಂ ಕವಿಯುವಂತೆ

೪೦

ಬಭ್ರುವಿನ ಭಾರ್ಯಾಪಹಾರವೆಸಗಿದನಿವನು
ಸಾಕಿನ್ನು ಮಾತಾಡಬಾರದಿದನು !
ಪಾಪಿಷ್ಠರಾದವರ ಹೆಸರನುಚ್ಚರಿಪುದುಂ
ಅಶ್ರೇಯಕರಮೆಂದು ಪೇಳ್ವಕತದಿಂ

೪೧

ಇಂತು ನಿನ್ನೊಡನವನು ವೈರಮಂ ಪೆರ್ಚಿಸಿಹ
ನಡಿಗಡಿಗೆ ವಿಪ್ರಿಯವ ಸಾಧಿಸಿಹನು ;
ಶ್ರುತ ಶ್ರವಾಸುತನೊಳೀತೆರದೆ ಕ್ರಿಯೆಯಿಂದಿಂತು
ಕೃತ್ರಿಮಾರಿತ್ವ ತಾಂ ಸಿದ್ಧಿಸಿಹುದು

೪೨

ಸಾಮರ್ಥ ರಿಪುವಿನೊಳು ವಿದ್ವೇಷಮಂ ಬೆಳೆಸಿ
ನಿರ್ಲಕ್ಷ್ಯಭಾವದಿಂದಿರ್ಪ ನರನು ;
ಪ್ರಜ್ವಲಿಪ ಬೆಂಕಿಯುಂ ಪುಲ್ಮೆದೆಯ ಮೇಲಿರಚಿ
ಎಲರೆದುರು ನಿದ್ರಿಸುವನಂತಿರ್ಪನು

೪೩

ಅಲ್ಪವೋ ಒರ್ಮೆಯೋ ವಿಪ್ರಿಯುವನೆಸಗುವನ
ಕ್ಷಮಿಸಿದರು ಕ್ಷಮಿಸಬಹುದಾದರಿಂದು ;
ಮತ್ತೆ ಮತ್ತೀತೆರದೊಳಪರಾಧವೆಸಗುವನ
ಅಭಿಮಾನಶಾಲಿಗಳ್ ಸಹಿಸಲಳವೆ ?

೪೪

ಕ್ಷಮೆಯೆ ಭೂಷಣ ನರಗೆ ಪರಿಭವವುಮಿಲ್ಲದೊಡೆ
ಬೇರೆ ಸಮಯದೆ ಸತಿಗೆ ಲಜ್ಜೆಯಂತೆ ;
ಸುರತದೊಳು ಸ್ತ್ರೀಯರಿಗೆ ಧಾರ್ಷ್ಟ್ಯದೊಲು ವೀರರಿಗೆ
ಪೌರುಷವೆ ಭೂಷಣಂ ಪರಿಭವದೊಳು

೪೫

ಶತ್ರು ಪರಿಭವದಿಂದೆ ದುಃಖದಗ್ಧನುಮಾಗಿ
ಹೀನ ಜೀವನವೆಳೆದು ಬದುಕುವವನು ;
ಪ್ರಸವವೇದನೆಯಿಂದೆ ತಾಯಿಯಂ ರಕ್ಷಿಸಲು
ಪುಟ್ಟದಿರ್ಪುದೆ ಮೇಲು ಜಗದೊಳೆಂದುಂ

೪೬

ಪಾದದಿಂ ತುಳಿದೊಡನೆ ಮೇಲೆದ್ದು ತಲೆಮೇಲೆ
ಕೂಡುತಿಹ ಧೂಳಿಯುಂ ಜಗದೊಳಿನ್ನು ;
ಅಪಮಾನವಾದರುಂ ಸ್ವಸ್ಥವಾಗಿರುತಿರ್ಪ
ಮಾನವನಿಗಿಂತಲುಂ ಶ್ರೇಷ್ಠಮಲ್ತೆ !

೪೭

ಜಾತಿಗುಣ ಕ್ರಿಯೆಗಳಿಂ ಸಾರ್ಥಕ್ಯಮಾಂತೆಸೆವ
ಸುಪ್ರಯೋಜನ ಪಡೆಯದಿರ್ಪನರನ ;
ಜನ್ಮಮುಂ ಕೇವಲಂ ಸ್ವೇಚ್ಛೆಯಿಂದುಚ್ಚರಿಪ
ಡಿತ್ಥಾದಿ ಶಬ್ದದೊಲು ಸಂಜ್ಞೆಗಲ್ತೆ !

೪೮

ಅದ್ರಿಯೊಳಗೌನ್ನತ್ಯ ಮಿತರಗುಣಮಲ್ಲಿಲ್ಲ
ಕಡಲಿನೊಳು ಗಾಂಭೀರ್ಯ ಮಿತರಮಿಲ್ಲಂ ;
ವೀರನೊಳಗಾದರೆಯು ದುರ್ಲಂಘ್ಯಕರಮೆನಿಪ
ಉಭಯಮುಂ ಬೆರೆದಿರ್ಪುವಲ್ತೆ ಜಗದಿ !

೪೯

ತಪ್ಪು ಸಮಮಾದೊಡಂ ಬಹುದಿನಕೆ ಭಾನುವಂ
ಸ್ವರ್ಭಾನು ಹಿಡಿಯುವಂ ಗಗನದಲ್ಲಿ ;
ಹಿಮರಶ್ಮಿಯಂ ಬೇಗ ಪಿಡಿವುದೀ ಲೋಕದಲಿ
ಸ್ಫುಟಮಾಗಿ ಮಾರ್ದವದ ಫಲಮೆಯಲ್ತೆ !

೫೦

ಅಲ್ಪನಾದರು ಶತ್ರುವಾಕ್ರಮಿಸೆ ನಿರ್ವೀರ್ಯ
ಮಾನವಂ ತಾನಾಗಿ ಶರಣಾಗುವಂ ;
ಸುಳಿಗಾಳಿಗಾದರುಂ ತಲೆವಾಗಿ ಕಂಪಿಸುವ
ತೃಣಮೆ ದೃಷ್ಟಾಂತ ದುರ್ಬಲರಿಗಲ್ತೆ !

೫೧

ದೂರದೊಳಗಿರ್ದರುಂ ತೇಜಸ್ವಿಗಳ ಮಧ್ಯೆ
ತೇಜಸ್ವಿಗಣ್ಯತೆಯ ನಾಂಪನೆಂದುಂ ;
ಪಂಚಾಗ್ನಿ ಮಧ್ಯದಲಿ ತಪವೆಸಪನಿಗೆ ರವಿಯು
ಐದನೆಯ ವಹ್ನಿ ತಾನೆನಿಪ ಕತದಿಂ

೫೨

ಮಲೆತ ರಿಪು ಮಸ್ತಕವ ಪೌರುಷದೆ ಪಾದದಿಂ
ಲೀಲೆಯಿಂ ಮೆಟ್ಟದೆಯೆ ಕೀರ್ತಿ ಜಗದಿ ;
ಆಧಾರಮಿಲ್ಲದೆಯೆ ಸ್ವರ್ಗ ಸೌಧಾಗ್ರಮಂ
ಆರೋಹಿಸಲುಮೆಂತು ಶಕ್ಯಮೆನಿಕುಂ

೫೩

ಮೃಗವನಂಕದೊಳಿಟ್ಟ ಕತದಿಂದೆ ಚಂದ್ರಮಂ
ಮೃಗಲಾಂಛನನುಮೆಂಬ ಪಳಿಪ್ರೊರ್ದಿದಂ ;
ನಿಷ್ಠುರದೆ ಮೃಗಯೂಥಮಂ ಕೊಂದ ಕಾರಣದೆ
ಕೇಸರಿಯು ಮೃಗರಾಜನೆನಿಸಿರ್ದಪಂ

೫೪

ಕಡೆಯ ದಂಡೋಪಾಯ ಸಾಧ್ಯ ಶತ್ರುವಿನಲ್ಲಿ
ಸಾಂತ್ವನೆಯುಮುಪಕಾರ ಮಾಂಪುದಲ್ತೆ ;
ಬೆಮರುವಾಮಜ್ವರವ ನಂದಿಸಲು ಲೋಕದಲಿ
ಪ್ರಾಜ್ಞನಾವಂ ಜಲದೆ ಚಿಂಪಡಿಸುವಂ ?

೫೫

ರೂಢವೈರವುಮೆನಿಪ ಚೈದ್ಯನಲಿ ಸಾಮೋಕ್ತಿ
ವಿಪರೀತದಿಂ ರೋಷಪೆರ್ಚಿಸುವುದು ;
ಬಹುವಾಗಿ ಕುದಿಯುತಿಹ ತುಪ್ಪದಲಿ ನೀರ್ವನಿಯು
ಕೂಡಲೇ ದೀಪನವನೆಸಗುವಂತೆ

೫೬

ಕಾಲಮಲ್ಲದ ಕಾಲದಲಿ ಗುಣಗಳಂ ಬಳಸು –
ವವರು ಪ್ರಯೋಜನವ ನಾಶಗೊಳಿಪರ್ ;
ಸಚಿವ ಚಿನ್ಹೆಯ ಪಡೆದ ಶತ್ರು ಸಂಜ್ಞಿತರೆನಿಸಿ
ರಾಜರಿಗೆ ದೂಷ್ಯರವರೆನಿಪರಿಳೆಯೊಳ್

೫೭

ನಿಜಶಕ್ತಿಯುಪಚಯದೆ ಯಾನಮೆಂಬರು ಕೆಲರು
ರಿಪು ವ್ಯಸನದೊಳಗುಚಿತಮೆಂದು ಕೆಲರು ;
ಪೇಳ್ವರೀ ಮತಮೆರಡು ನಿರ್ಲಕ್ಷ್ಯದಿಂದಿರ್ಪ
ನಿನ್ನನುಂ ಪ್ರೇರಿಪುವು ತಡಮಾಡದೆ

೫೮

ಲೋಕಗಳ ಲಂಘಿಸಲು ಬಯಸುತಿಹ ದುರ್ಲಂಘ್ಯ
ಪ್ರಬಲತರ ವೀರ್ಯದಿಂದೆಸೆಯುತಿರ್ಪ ;
ಯಾದವಾಂಭೋನಿಧಿಗೆ ನಿನ್ನ ದುಸ್ಸಹಮೆನಿಪ
ಸಹನೆಯೇ ದಡದಂತೆ ತಡೆದಿರ್ಪುದು

೫೯

ಸಾಕ್ಷಿಮಾತ್ರನುಮಾಗಿ ಫಲಭಾಜನನುಮೆನಿಸಿ
ನೀನಿರಲ್ ಸೈನ್ಯದೀ ವಿಜಯಮೆಲ್ಲಂ ;
ಸಾಂಖ್ಯರೊಳಗಾತ್ಮನಲಿ ಬುದ್ಧಿ ಭೋಗದ ತೆರದೆ
ನಿನ್ನನೇ ಪೊಂದುವುದು ಸಿದ್ಧಮಲ್ತೆ !

೬೦

ದ್ವೈಮಾತುರನುಮೆನಿಪ ನೃಪ ಹಿಡಿಂಬಾರಿಯಿಂ
ಮಡಿದಿರ್ಪ ಸಮಯಮಿದು ಯುದ್ಧದಲ್ಲಿ;
ಚಿರಕಾಲದಿಂ ಮಿತ್ರವ್ಯಸನದಲಿ ಮುಳುಗಿರ್ಪ
ದಮಘೋಷಜಂ ಸುದಮನೆನಿಪ ನೆಮಗೆ

೬೧

ಶತ್ರುವಾಪತ್ತಿನೊಳಗಿರುವಾಗ ಮುತ್ತುವಾ
ನೀತಿಯಿದು ಮಾನಿಗಪಮಾನಮೆನಿಕುಂ;
ಪರಿಪೂರ್ಣಗಾತ್ರನಹ ಚಂದ್ರನಾ ರಾಹುವಿನ
ಉತ್ಸಾಹಮಂ ಪೆರ್ಚಿಸುವನು ದಿಟದಿಂ

೬೨

ಸ್ವೇಚ್ಛೆಯಿಂ ಮೇಲ್ವಾಯ್ದು ಪೀಡಿಸುವ ಬಲ ಬೇರೆ,
ಶಾಸ್ತ್ರದಿಂ ತಡೆದಿರ್ಪ ಶಕ್ತಿಯನ್ಯಂ;
ಬೆಳಕು ಕಗ್ಗತ್ತಲೆಗಳೆರಡುಮೊಂದೆಡೆಯಲ್ಲಿ
ಮೂಡುವುವೆ ಲೋಕದೊಳಗೆಂದಾದೊಡಂ ?

೬೩

ಇಂದ್ರ ಪೂರ್ವಪ್ರಸ್ಥದೆಡೆಗೆಮ್ಮ ಗಮನಮುಂ
ಪೋಗಲಿಂದವಕಾಶಮಿಲ್ಲಮಿನ್ನು;
ನಮ್ಮಾನೆಪಡೆಯ ಸಾನ್ನಿಧ್ಯದಿಂ ಗುಜ್ಜಾದ
ತರುನಿವಹದಿಂ ಚೇದಿದೇಶಮಕ್ಕೆ.

೬೪

ವೀವಧಾಸಾರಪ್ರಸಾರಗಳ ತಡೆಯುವುದು,
ಅಡ್ಡಗಟ್ಟುವ ದೊಡ್ಡಿಯಂತೆ ಗೋವ್ಗಳ್;
ಶತ್ರುಗಳ ಮಾಹಿಷ್ಮತೀ ಪುರಿಯ ಮುತ್ತುವುದು
ತಡಮಾಡದೀಗಳೇ ಯದುವೀರರು.

೬೫

ಯಾಜಿಸುಗೆ ಧರ್ಮಜಂ ಪೊರೆಗೆ ಸಗ್ಗಮನಿಂದ್ರ
ಬೆಳಗಲೀ ಭಾನುತಾಂ ವಿಶ್ವಗಳನು ;
ಮಾಡೋಣ ನಾವಿಂದು ರಿಪುಮಾರಣಕ್ರಿಯೆಯ
ಬಯಸುವರ್ ಸ್ವಾರ್ಥಮನೆ ಸರ್ವರಿಳೆಯೊಳ್ !

೬೬

ಶತ್ರು ಶಿರಮಂ ಕಡಿಯಲುದ್ಗಮಿಪನೆತ್ತರಿಂ
ತೊಯ್ದೆಮ್ಮ ವೀರರುರು ಖಡ್ಗಗಳಲಿ ;
ಸೂರ್ಯಾಂಶು ಸಂಪರ್ಕದಿಂದೆಸೆವ ವಿದ್ಯುತಿನ
ಸಂಪದಂ ಯುದ್ಧದೊಳು ಬೆಳಗಲಿನ್ನು.

೬೭

ಇಂತು ಸಂಕ್ರುದ್ಧನಹ ಬಲಭದ್ರನುಕ್ತಿಗಳ
ಭಿತ್ತಿಯೊಳು ಚಿತ್ರಗತ ದೇವರ್ಕಳು ;
ಭಯದಿಂದಮನುವದಿಪರೆಂಬವೊಲು ಮರುದನಿಯ
ನೆವದಿಂದೆ ಭವನಮದು ಪಡಿನುಡಿದುದು

೬೮

ಶೇಷಾವತಾರ ಬಲಭದ್ರನಾ ನುಡಿಗಳಂ
ಕೇಳಿಯುತ್ತರಿಸಲಾ ಶ್ರೀಕೃಷ್ಣನು ;
ವಾಕ್ಪತಿಯ ಶಿಷ್ಯನಿಗೆ ಪ್ರಸ್ತಾಪ ಕಲ್ಪಿಸಲು
ಸೂಚನೆಯನಿತ್ತ ದೃಕ್ ಸಂಜ್ಞೆಯಿಂದೆ.

೬೯

ಬಳಿಕಾರ್ಥಗಾಂಭೀರ್ಯದಿಂದೆಸೆವ ತಥ್ಯಾರ್ಥ
ಭಾರತಿಯನುದ್ಧವಂ ವಿನಯದಿಂದೆ ;
ಶ್ರೀಕೃಷ್ಣನಿದಿರಿನೊಳ್ ಪ್ರಾಗಲ್ಭ್ಯಮಂ ತಳೆದು
ಗೀಷ್ಪತಿಯ ತೆರನಂತೆ ನುಡಿದನಿಂತು.

ಉದ್ಧವನ ಮಾತು:—

೭೦

ಮುಸಲಪಾಣಿಯು ನುಡಿದವೇಲೆನ್ನ ಮಾತುಗಳು
ಅಪ್ರಯುಕ್ತಮುಮೆನಿಪುವೆನ್ನ ಮನಕೆ ;
ಲೇಖನದೆ ವಕ್ತವ್ಯಮೆಲ್ಲ ನಿರ್ಧರವಾಗೆ
ಮಾತಿನಿಂದೊರೆಯುವುದು ವ್ಯರ್ಥಮಪ್ಪೆ !

೭೧

ಆದರುಂ ಪಿರಿಯನಹ ಬಲಭದ್ರನನುಮಂತೆ
ನನ್ನನುಂ ಗುರುವೆಂದು ಭಾವಿಸಿಹುದು ;
ಇದುವೆ ಸೇವಕನಾಗಿ ಹರಟುತಿಹ ನನಗಿಂದು
ಪ್ರಭುವಿನೊಲು ಪ್ರೇರಣೆಯ ಮಾಡುತಿಹುದು.

೭೨

ಪರಿಮಿತಾಕ್ಷರಗಳಲಿ ಸಪ್ತಸ್ವರಗಳಿಂದೆ
ಗುಂಫಿಸಿದ ವಿಸ್ತಾರ ವಾಗ್ಜಾಲದ ;
ಮಧುರಗಾನದ ತೆರದೆ ರಚನೆ ವೈವಿಧ್ಯದಿಂ-
ದಪರಿಮಿತವಾಗಿಹುದು ಚಿತ್ರಮಲ್ತೆ !

೭೩

ತನ್ನ ಮನಬಂದಂತೆ ಬುದ್ಧಿಗರಿವಪ್ಪಂತೆ
ಬೇಕು ಬೇಕಾದಂತೆ ಹರಟಬಹುದು ;
ಅರ್ಥಸಂಗತಿ ಕೆಡದೆ ಸಂದರ್ಭ ಬಿಡದಿರ್ಪ
ಸುಪ್ರಬಂಧವನೊರೆವುದರಿದು ಜಗದೊಳ್.

೭೪

ಮೃದುವಾದುದಾದರುಂ ಘನತರಾತ್ಮಕಮೆನಿಪ
ಬಹುಗುಣಗಳಿಂ ರಚಿತವಾಗೆಸೆಯುವ ;
ಪಟದಂತೆ ಕುಶಲರಹ ವಕ್ತೃಗಳು ಬಹುಚಿತ್ರ
ವಾಙ್ಮಯವ ವಿಸ್ತರಿಪರಲ್ತೆ ಜಗದಿ.!

೭೫

ಬಹುಸೂಕ್ಷ್ಮ ಭೇದಗಳ ವಿವರಮಂ ತಿಳಿದಿರ್ಪ
ನಿನ್ನೆದುರು ಶಾಸ್ತ್ರಮಂ ಪೇಳ್ವುದೆಲ್ಲಂ;
ವಕ್ತೃಪರಿಚಿತ ವಿಷಯ ಸ್ಥಿರಪಡಿಸೆ ಹೇತುವಹ
ಆ ವೃತ್ತಿಯಭ್ಯಾಸಮೆನಿಪುದಲ್ತೆ!

೭೬

ಅದರಿಂದೆ ಪ್ರಭುವೆನಿಪನಾವಗುಂ ಪ್ರಾಜ್ಞತೆಯ-
ನುತ್ಸಾಹಮಂ ಗಳಿಸಲುಜ್ಜುಗಿಪುದು;
ವಿಜಿಗೀಷುವಾದವನ ಪ್ರಭುಶಕ್ತಿ ಸಂಪದಕೆ
ಮಂತ್ರೋತ್ಸಹಾದಿಗಳ್ ಮೂಲಮಲ್ತೆ!

೭೭

ಉಪಧಾನವೆರಸಿರ್ಪ ಸ್ಥಿರಮಾದ ಬುದ್ಧಿಯನೆ
ಮಂಚಮಂ ಮಾಡಿಕೊಂಡಿರ್ಪ ಧೀರರ್;
ಅದರೊಳಗೆ ಪಗಲಿರುಳ್ ವಿಶ್ರಾಂತಿ ಪಡೆಯುತಲಿ
ಅಲ್ಪಮಾದರು ಖೇದ ಪೊಂದರೆಂದುಂ

೭೮

ಸೂಕ್ಷ್ಮಮತಿ ಶರದಂತೆ ತುಸುಮುಟ್ಟಿಯೊಳಪೊಕ್ಕು
ಸುಲಭದಿಂ ಗುರುಕಾರ್ಯ ಸಾಧಿಸುವನು;
ಬಹುಬಾರಿ ಮುಟ್ಟಿದರು ಮಂದಮತಿ ಕಲ್ಲಿನೊಲು
ಹೊರಗಿರ್ದು ಕಾರ್ಯಮಂ ಗೆಲ್ಲನೆಂದುಂ.

೭೯

ಆರಂಭಮತ್ಯಲ್ಪಮಾತುರವೊ ಬಹು ಪಿರಿದು
ಕಾರ್ಯಾಂತಮಂ ಪೊಂದರಜ್ಞರೆಂದುಂ;
ಪ್ರಾಜ್ಞರಾವಗು ಪಿರಿದುಮಾರಂಭವೆಸಗಿದರು
ನಿರ್ವ್ಯಾಕುಲತೆಯಿಂದೆ ಕೃತಿಸಾಧಿಪರ್.

೮೦

ನೀತಿಶಾಸ್ತ್ರೋಪಾಯಮೆಲ್ಲಮಂ ಬಳಸಿದರು
ಅನವಧಾನತೆಯಿಂದೆ ಕಾರ್ಯ ಕೆಡುಗುಂ ;
ಸನಿಹದೊಳೆ ಮೃಗವಾಸಮಿರ್ದರುಂ ನಿದ್ರಾಳು
ವ್ಯಾಧ ಮೃಗಮೊಂದನುಂ ಕೊಲ್ಲನೆಂದುಂ.

೮೧

ಓರ್ವನಾಗಿರ್ದಡುಂ ವಿಜಿಗೀಷು ವೀರನೃಪ
ಪನ್ನೆರಡು ನೃಪತಿಗಳ ಮಧ್ಯದಲ್ಲಿ ;
ದ್ವಾದಶಾದಿತ್ಯದಲಿ ರವಿಯಂತೆ ರಾಜಿಸುತೆ
ಉತ್ಸಾಹದಿಂದುದಯ ಪಡೆಯಬಲ್ಲಂ.

೮೨

ಬುದ್ಧಿಶಸ್ತ್ರನುಮಾಗಿ ಪ್ರಕೃತಿಯಂಗನುಮೆನಿಸಿ
ಘನಸುಸಂವೃತ ಕವಚ ಧರಿಸಿ ಧೃಢದಿಂ ;
ಚಾರನೇತ್ರನುಮಾಗಿ ದೂತಮುಖನೆನಿಸಿರ್ಪ
ನೃಪವಿಲಕ್ಷಣ ಪುರುಷನಪ್ಪನಿಳೆಯೊಳ್.

೮೩

ಕೇವಲಂ ಕ್ಷಾತ್ರಮನೆ ಕೇವಲಂ ಕ್ಷಮೆಯನೇ
ಕಾಲಜ್ಞ ನೃಪ ವಹಿಪ ನಿಯಮಮಿಲ್ಲಂ ;
ರಸಭಾವವಿತ್ಕವಿಗೆ ಪ್ರೌಢಪ್ರಸಾದಗಳ
ಬಂಧದೊಳು ನಿಯಮಮಿರದಿರ್ಪ ತೆರದೆ.

೮೪

ರಿಪುಗಳಿಂದಪಚಾರಮಾದರುಂ ಮಾನಸಿಕ
ವಿಕ್ರಿಯುವ ತೋರಿಸದೆ ಗುಪಿತಮಾದ ;
ದುಸ್ಸಾಧ್ಯ ರೋಗದೊಲು ಶಕ್ತಿಕುಂಠಿತಮಾಗೆ
ಕಾರ್ಯವಿತ್ ಕೋಪಮಂ ಪ್ರಕಟಿಸುವನು.

೮೫

ಮೃದುವಸ್ತುವಂ ಸಾರ್ದು ತೇಜಮರ್ಥಂಗಳಂ
ಭೋಗಿಸುವ ಸಾಮರ್ಥ್ಯಮಾಂಪುದಿಳೆಯೊಳ್ ;
ದೀಪಶಿಖೆ ಮಧ್ಯದೊಳಗಿರ್ಪಮಲವರ್ತಿಯಿಂ
ಸ್ನೇಹಮಂ ಪೀರುವುದು ಸಿದ್ಧಮಲ್ತೆ !

೮೬

ಕೇವಲಂ ದೈವಮನೆ ನೆರೆನಂಬಿ ಕುಳಿತಿರನ್
ಕೇವಲಂ ಪೌರುಷವನವಲಂಬಿಸಂ ;
ಶಬ್ದಾರ್ಥವೆರಡನುಂ ಸತ್ಕವಿತೆ ಬಯಸುವೊಲು
ವಿದ್ವಾಂಸನೆರಡನುಂ ಬಳಸಿಕೊಂಬಂ.

೮೭

ಮುಖ್ಯರಸಸಾಧನೆಗೆ ಸಂಚಾರಿಭಾವಗಳು
ಸಹಕಾರಿಯೆನಿಸಿ ಪ್ರವರ್ತಿಪಂತೆ ;
ಓರ್ವನೇ ನಾಯಕನ ಕಾರ್ಯಮಂ ಸಾಧಿಸಲು
ಬಹುಮಂದಿ ನೃಪತಿಗಳು ನೆರವಪ್ಪರು.

೮೮

ತಂತ್ರಮಾವಾಪಂಗಳೆಲ್ಲವಂ ತಿಳಿದಿರ್ಪ
ಯೋಗದಿಂ ಮಂಡಲವ ಪೊಂದಿ ಮೆರೆವ ;
ಸುನರೇಂದ್ರನಿಗೆ ಪಾವುಗಳ್ ವಶ್ಯಮಾಂಪವೊಲು
ನಿಗ್ರಹಕೆ ಶತ್ರುಗಳ್ ಸುಲಭರಲ್ತೆ !

೮೯

ಉತ್ತುಂಗತರಮೆನಿಪ ಮಂತ್ರ ಶಕ್ತಿಯುಮೆಂಬ
ಪೆರ್ಬುಡದೆ ಕರದಿಂದ ಬೆಳೆಯುತಿರ್ಪ ;
ಉತ್ಸಾಹಪಾದಪಂ ಪಿರಿದೆನಿಪ ಪ್ರಭುಶಕ್ತಿ
ಸತ್ಫಲವನಾವಗುಂ ಕುಡುವುದಲ್ತೆ !

೯೦

ಅಧಿಕವಾದುದರಿಂದೆ ಪ್ರಾಧಾನ್ಯಗುಣದಿಂದೆ
ವೇಣುನಾದಕೆ ಮಿಕ್ಕ ಸ್ವರಗಳಂತೆ;
ವಿಜಿಗೀಷು ವೀರನಂ ಮಿಕ್ಕ ನೃಪರನುಸರಿಸಿ
ಪರಿವಾರದಂತವನ ಕಾರ್ಯಗೈವರ್.

೯೧

ಏನುಮಂ ಮಾಡದೆಯೆ ಕುಳಿತಿರ್ದರುಂ ಜಗದಿ
ಪರರೆಸಗುತಿರುವರ್ಥಜಾತಮೆಲ್ಲಂ ;
ಗಗನದಲಿ ಗೌಣತ್ವಮಾಂತ ಶಬ್ದಗಳಂತೆ
ನಿಜಮಹಿಮೆಯಿಂ ಪ್ರಭುವ ಸಾರ್ವುವಲ್ತೆ !

೯೨

ಒಂದೆ ಫಲಮೆನ್ನಿಸಿರ್ಪ ದಾರದಲಿ ಪೋಣಿಸಿದ
ಎದುರಿಸುವ ಹಿಂಬಾಲಿಸುವ ರಾಜರ ;
ಮಾಲೆಯೊಳಗತ್ಯಧಿಕ ತೇಜದಿಂ ತೊಳಗುತಿಹ
ನಾಯಕಂ ನಾಯಕತೆಯಾಂಪನಲ್ತೆ !

೯೩

ಶಕ್ತಿಯಂ ಬಯಸುವನು ಷಾಡ್ಗುಣ್ಯರಸಭರಿತ
ಔಷಧವನೆಡೆಬಿಡದೆ ಸೇವಿಸಿದೊಡೆ ;
ಅವನಂಗಗಳುಮೆಲ್ಲ ಹೃಷ್ಟಪುಷ್ಟಗಳಾಗಿ
ಬಲಯುತಮುಮೆನಿಸಿ ಬಲಗೊಳ್ವುವಲ್ತೆ !

೯೪

ಶಮಯುತಾಂಗಿಗೆ ಸಾಧ್ಯವಿಷಯದಲಿ ಶಕ್ತಿಯಿಂ
ವ್ಯಾಯಾಮ ವೃದ್ಧಿಕರಮೆನಿಪುದಿಳೆಯೊಳ್ ;
ತನ್ನ ಶಕ್ತಿಯಮೀರಿ ವ್ಯಾಯಾಮವೆಸಗುವುದು
ಕ್ಷಯಸಂಪದಕೆ ಮೊದಲ ಹೇತುವಲ್ತೆ !

೯೫

ಆದರಿಂದೆ ನೀನಿಂದು ಚೇದೀಶನಂ ತೆಗಳಿ
ಹೀಗಳೆಯದಿರು ಬಲವಿಹೀನನೆಂದು ;
ಅವನುದಾತ್ತಸ್ವರವು ಮಿಕ್ಕವಂ ಪಳಿವವೊಲು
ರಿಪುಗಳಂ ಪಾದದಿಂ ಮೆಟ್ಟಬಲ್ಲಂ

೯೬

ಏಕಾಕಿಯೆಂದೆನುತೆ ಸುಜಯನಿವನೆಂದರಿದು
ಚೇದೀಶನಂ ನೀನು ತಿಳಿಯಬೇಡ ;
ನಿಖಿಲರೋಗದ ಸಾರ ಕ್ಷಯರಾಜಯಕ್ಷ್ಮದ ತೆರದೆ
ಅವನೆಲ್ಲ ರಾಜನ್ಯಕೂಟನೆನಿಪಂ

೯೭

ಸಂಪಾದಿಸಿದ ಫಲದೆ ನಲ್ ಸಪಕ್ಷನುಮೆನಿಸಿ
ಪರಭೇಧಕನುಮೆನಿಪ ಬಾಣನೀಗ ;
ಗುಣಯುತಮುಮಾಗಿರ್ಪ ಕಾರ್ಮುಕದೆ ನಿಜವಾಗಿ
ಇವನೊಡನೆ ಸಂಧಾನಮಾಂಪನಲ್ತೆ !

೯೮

ಇನ್ನುಳಿದ ಕಾಲಯವನಾ ಸಾಲ್ವರುಕ್ಮಿದ್ರುಮ
ಮೊದಲಾದ ರಾಜನ್ಯಕೂಟಮೆಲ್ಲಂ ;
ವರ ತಮೋಗುಣದಿಂದೆ ಸುಪ್ರದೋಷಾತ್ಮಕನ
ನಿವನನೇ ಪೊಂದುವರು ತಡಮಾಡದೆ

೯೯

ಅವನೆಸಗಿದಲ್ಪೋಪಜಾಪಮುಂ ರಿಪುಗಳಲಿ
ಮೊದಲೆ ನಿನ್ನೊಳಗಿರ್ಪ ದ್ವೇಷದಿಂದೆ ;
ವಹ್ನಿಯಿರ್ಪಿಂಧನವ ಗಾಳಿಯೊಲು ಮರುಕೊಳಿಸಿ
ಶೀಘ್ರದಿಂ ದೀಪನಂ ಗೊಳಿಪುದಲ್ತೆ !

೧೦೦

ಅಲ್ಪಾತ್ಮನಾದರುಂ ಬಹು ಸಹಾಯವ ಪಡೆದು
ಕಾರ್ಯಮಂ ಸಾಧಿಸುವನಲ್ತೆ ಜಗದೊಳ್ !
ಹನಿಗೂಡಿ ಹಳ್ಳಗಳು ಪಿರಿದು ನದಿಯಂ ಸೇರಿ
ಸುಲಭದಿಂ ಕಡಲನುರೆ ಸಾರುವಂತೆ

೧೦೧

ಅವನ ಮಿತ್ರರು ನಿನ್ನ ಶತ್ರುಗಳುಮಿರ್ವರುಂ
ಸಹವಾಗಿ ನಿನ್ನಮೇಲೆರಗಿಬರ್ಪರ್ ;
ಚೈದ್ಯ ಪಕ್ಷವನೊಂದಿ ಪೇಡನೆಳಸುವರಲ್ತೆ !
ಮಿಕ್ಕ ಕೆಲವರು ನಿನ್ನ ಸೇರ್ವರಿನ್ನು !

೧೦೨

ಇಂತು ಮಖವಿಘ್ನಮಂಗೊಳಿಸೆ ರಾಜರನೆಲ್ಲ
ವಿಕ್ಷೋಭಗೊಳಿಸಿರ್ಪರ್ ನೀನೆ ಅಯ್ಯೋ !
ಶತ್ರುರಹಿತನುಮೆನಿಪ ಧರ್ಮಜಗೆ ಬುವಿಯೊಳಗೆ
ಮೊದಲನೆಯ ರಿಪುವೆಂಬ ಪಳಿಪೊರ್ದುವೆ !

೧೦೩

ಬಾಂಧವನುಮೆನಿಸಿರ್ಪ ಧರ್ಮಜಂ ನಲ್ಮೆಯಿಂ
ಅತಿಭಾರಸ್ಕಂಧನೆನಿಸಿರ್ಪ ನಿನ್ನ ;
ನಲ್ ಸಹಾಯವ ಬಯಸಿ ಯಜ್ಞಭಾರವನೆಲ್ಲ
ನಿನ್ನೊಳೇ ವಹಿಸಿಹನು ಭಕ್ತಿಯಿಂದೆ

೧೦೪

ಶರಣೆಂದು ಬೇಡಿದೊಡೆ ಶತ್ರುಗಳನಾದರುಂ
ಕರುಣಿಪರು ದೊಡ್ಡವರು ತಡಮಾಡದೆ ;
ಸವತಿಯರುಮೆನಿಸಿರ್ಪ ಗಿರಿನದಿಗಳೆಲ್ಲವಂ
ಕಡಲ ಪೊಂದಿಪುವಲ್ತೆ ದೊಡ್ಡನದಿಗಳ್

೧೦೫

ಬಲಶಾಲಿಯಾದರುಂ ಶತ್ರುಗಳ ಶಿಕ್ಷಿಸಲು
ಪಲಕಾಲಮಾದರುಂ ಸಾಧ್ಯಮಹುದು ;
ವೈಮನಸ್ಯವ ಪಡೆದ ಮಿತ್ರರಂ ಬದಲಿಪುದು
ಮನವನನುಸರಿಸಿದರು ಕಷ್ಟಮಲ್ತೆ !

೧೦೬

ರಿಪುಗಳಂ ವಧಿಸುವುದು ದಿವಿಜರಿಗೆ ಹಿತಕರಂ
ಎಂದು ನೀಂ ಭಾವಿಪೊಡೆ ಮುರಮಥನನೆ ;
ನಲ್ ಪುರೋಡಾಶಮಂ ಭುಂಜಿಸುವ ಸುರರಿಂಗೆ
ಇಷ್ಟಿಯೆಸಗುವುದಿಷ್ಟಮಲ್ತೆ ನೋಡು !

೧೦೭

ವಿದ್ವಾಂಸರಾದವರ್ ಮಂತ್ರಜಿಹ್ವೆಗಳಲ್ಲಿ
ಹೋಮಿಪುದೆ ನಿಜವಾದ ಸುಧೆಯೆನಿಪುದು ;
ಕ್ಷೀರಸಾಗರದಲ್ಲಿ ಮಂದರಾದ್ರಿಯ ಕಡೆವ
ವರ್ಣನಂ ಕೇವಲಂ ಶೋಭಾವಹಂ

೧೦೮

"ನಿನ್ನ ತನಯನ ನೂರು ತಪ್ಪುಗಳ ಮನ್ನಿಸುವೆ"
ನೆಂದು ಭರವಸೆ ನೀಡಿ ನುಡಿದ ನೀನು ;
ಪರಮ ಪೂಜ್ಯಳುಮೆನಿಪ ಸೋದರತ್ತೆಗೆ ಕೊಟ್ಟ
ಭಾಷೆಯಂ ಪಾಲಿಪುದು ನ್ಯಾಯಮಲ್ತೆ !

೧೦೯

ಸಜ್ಜನರ ಮತಿಯತುಲ ತೀಕ್ಷ್ಣ ಹಿಂಸಕಮಲ್ತು,
ತೇಜಸ್ವಿಯಾದರುಂ ಕೃತಿ ಶಾಂತವು ;
ಮಾನೋಷ್ಮಮಿರ್ದರುಂ ತಾಪವೆಸಗದು ಮನವು
ವಾಗ್ಮಿಯಾದವಗಿರ್ಪುದೊಂದೆ ಮಾತು

ದ್ವಾರಕಾನಿರ್ಗಮನಂ

ಪ್ರಯಾಣ ಸನ್ನಾಹಂ :—

೧

ಬಳಿಕ ಹರಿ ಯುದ್ಧಾಭಿಲಾಷೆಯಂ ಬದಿಗಿಕ್ಕಿ
  ಉತ್ತರಾಯಣದಿಂದ ದಕ್ಷಿಣಕ್ಕೆ
ತೆರಳುತಿಹ ರವಿಯಂತೆ ಸೌಮ್ಯಮಾನಸನಾಗಿ
  ಇಂದ್ರಪೂರ್ವಪ್ರಸ್ಥದೆಡೆಗೆ ನಡೆದಂ

೨

ಲೋಕಪಾವನಮೆನಿಪ ಪಾದಂಗಳಿಂದೆಯುಂ
  ಲೋಕಪೂಜ್ಯನ ರವಿಯು ಸೋಂಕಲಿಲ್ಲ ;
ಪೂರ್ಣಚಂದ್ರನ ತೆರದ ಭೂಚಕ್ರಛತ್ರ ತಾಂ
  ತಲೆಯ ಮೇಲ್ಗಡೆ ನಾಡೆ ಪೊಳೆದ ಕತದಿಂ

೩

ಚಲಿಪೆರಡು ಚಾಮರಂ ಬಿಸಸೂತ್ರದಂತೆಸೆಯೆ
  ಮಧ್ಯದೊಳ್ ನಿಂದಿರ್ಪ ಶ್ರೀಕೃಷ್ಣನು ;
ಇರ್ಕಡೆಗಳಿಂ ಬೀಳ್ವ ದೇವಗಂಗೆಯ ನಡುವೆ
  ಕಡುಶೋಭೆಯನು ತಳೆದ ಅಂಬುನಿಧಿಯು

೪

ಹರಿ ಶಿರದ ಮೇಲೆಸೆವ ಮುಕುಟಮಣಿಕಾಂತಿಯಿಂ
  ವಿಪುಲಚಿತ್ರಪ್ರಭೆಯ ತೇಜದಿಂದೆ
ಬಹುಧಾತುರಾಗದಿಂ ಪೊಳೆವ ಮಣಿರಾಶಿಗಳ
  ಗೋವರ್ಧನಾಕೃತಿಯನನುಕರಿಸಿದಂ

೫

ಪೊಳೆವ ಕಾಂಚನ ಕರ್ಣಕುಂಡಲಾಗ್ರಗಳಲ್ಲಿ
ಖಚಿತಮರಕತ ಮಣಿಯಕಾಂತಿಪುಂಜಂ ;
ಶೈಶವೋಚಿತ ಕೇಕಿ ಪಿಂಛದಿಂ ನಿರ್ಮಿಸಿದ
ಮಾಲೆಯೆನೆ ಹರಿಯುರದಿ ನರ್ತಿಸಿದುದು

೬

ಮಂದರಾಚಲ ಶಿಖರದಗ್ರ ಘರ್ಷಣದಿಂದೆ
ಶಾಣದಿಂದುಜ್ಜಿದರೊ ಎನೆ ಪೊಳೆಯುವ,
ದಿವ್ಯಮಣಿಕಾಂತಿಗಳ ಪಟಲದಿಂ ರಾಜಿಸುವ
ಭುಜಕೀರ್ತಿಯುಗಳಮಂ ಹರಿ ಧರಿಸಿದಂ

೭

ಸಹಜದಿಂ ಕೆಂಪಾಂತ ಕರನಖಾಗ್ರದ ಮೇಲೆ
ಕೈಬಳೆಯ ಕೆಮ್ಮಣಿಯ ಕಾಂತಿಬಿಳ್ದು
ದಿವಿಜಾರಿಯೆದೆ ಶೀಳಲುಕ್ಕಿರ್ದನೆತ್ತರಿಂ
ನೆನೆದವೊಲು ರಂಜಿಸುವುದೀವರೆವಿಗುಂ

೮

ಜೋಲ್ವ ಮುತ್ತಿನಹಾರದೆಳೆಗಳಿಂ ಶೋಭಿಸುವ
ಹೊಂಗೆಯೊಲು ಕರ್ಪಿಡಿದ ಹರಿವಕ್ಷವು ;
ಇರ್ಕಡೆಗಳಿಂ ಬೀಳ್ವ ಬಾಂಬೊಳೆಯ ಧಾರೆಗಳ
ಗಗನದೊಡನುಪಮೆಯಂ ಪೊಂದಿರ್ದುದು

೯

ಕಿರಣದಿಂ ದೆಸೆಗಳಂ ಬೆಳಗಿಸುವ ಕಡಲ ಜಲ
ಸಾರಮಯ ಕೌಸ್ತುಭವ ಹರಿ ಧರಿಸಿರೆ ;
ಮಣಿಯೊಳಗೆಬಿಂಬಿಸಿದ ಬಾಹ್ಯವಿಶ್ವಮುಮೆಲ್ಲ
ಹರಿ ಶರೀರದೊಳಡಗಿದಂತೆ ತೋರ್ಕುಂ

೧೦

ಕಟಿಸೂತ್ರದಿಂದಿಳಿದ ಹರಿಯ ಮುಕ್ತಾಹಾರ
ಪಾದಾಗ್ರಪರ್ಯಂತ ತೂಗುತಿರಲು ;
ಅಂಗುಷ್ಠದಿಂದೊಗೆದು ಚಿಮ್ಮಿ ಕಂಗೊಳಿಸುತಿಹ
ಸತತ ಗಂಗಾಧಾರೆಯಂತೆ ತೋರ್ಕುಂ

೧೧

ಇಂದ್ರನೀಲಾಚಲದ ಕಾಂತಿಯೊಲು ಪೊಳೆಯುತಿಹ
ಪೀತಾಂಬರವನುಟ್ಟ ಶ್ರೀಕೃಷ್ಣನು
ಹರಡಿರ್ಪ ತಾವರೆಯ ಧೂಳಿಯಿಂ ಬೆಳಗುತಿಹ
ಯಮುನೆಯಾ ಜಲಪೂರದಂತೆಸೆದನು

೧೨

ಸಿಂಗರಿಸಿಕೊಂಡೆಸೆವ ಮಧುವೈರಿಗೀ ಲಕ್ಷ್ಮೀ
ಮತ್ತೊರ್ವಳೆಂಬುದಿದು ಯುಕ್ತಮೆನಿಕುಂ ;
ಲೋಕಕಾಂತೆಯುಮಿಾಕೆ ಮೈಯೆಲ್ಲ ತುಂಬಿರಲ್
ಲಕುಮಿ ಮತ್ತೊರ್ವ ಸತಿಯೆನಿಪಳಲ್ತೆ!

೧೩

ಕದದಗಲ ಕಂಗೊಳಿಪ ವಕ್ಷದಲಿ ನೆಲೆಸಿರ್ಪ
ಶ್ರೀ ಲಲನೆಯಿಂದೆಸೆವ ಶ್ರೀಕೃಷ್ಣಗೆ
ಸಕಲರಂ ಸಂತವಿಸಿ ಸರ್ವಾಂಗ ಸಂಗಿಯಹ
ಲಕುಮಿ ಮತ್ತೊರ್ವಳಿವಳೆನಿಪುದುಚಿತಂ.

೧೪

ದೇವಿಯರ ವರ್ಣನ

ಭೂಷಣತೆಯಂ ಪೊಂದಿ ದೈತ್ಯಪತಿಯಂ ಸೀಳ್ದು
ಕಂಗೊಳಿಪ ನಲ್‌ನಖ ಕ್ಷತಗಳಿಂದೆ
ಕಾಂತಿಯುತ ಕಾಠಿನ್ಯಮಾಂತೆಸೆದುರೋಜಗಳ
ತರುಣಿಯರ್ ಸುತ್ತಿದರ್ ಶ್ರೀಕೃಷ್ಣನಂ.

೧೫

ಅತ್ಯುನ್ನತಿಯ ಕತದೆ ನಡುವ ಮೇಲೆತ್ತುವೊಲು
ಅತಿಭಾರಮಂ ತಳೆದ ಕಾಮಿನಿಯರ
ಕುಚಮಂಡಲಂಗಳಿಂ ಬಹುಪೀಡಿತವೊ ಎನಲು
ನಡುವು ಕಡು ಬಡವಾಗಿ ಬಾಗಿರ್ದುದು.

೧೬

ಆವಳಾವಳ ಹರಿಯು ನಲ್ಮೆಯಿಂ ನೋಡಿದನೊ
ಅವಳವಳ್ ನಾಣಿಂದೆ ತಲೆತಗ್ಗಿಸಲ್ ;
ಉಳಿದವರುವಿರಾರ್ಷೆಯಿಂದಿವನ ನಿಶ್ಶಂಕೆಯಿಂ
ಕೂರ್ನೋಟದಿಂ ಬಿಡದೆ ಪೊಡೆದರೊಡನೆ.

೧೭

ದಿವ್ಯಾಸ್ತ್ರಧಾರಣಂ

ಅಗಸೆ ಪೂ ಬಣ್ಣದಿಂ ಕಂಗೊಳಿಪ ಯದುಪತಿಯು
ಬಲಭುಜವ ಸುತ್ತುತಿಹ ಕಿರಣತತಿಯ
ಮಂಡಲದೆ ಪ್ರಜ್ವಲಿಪ ಚಕ್ರದಿಂ ರಾಜಿಪನು
ಮಾಸುಳಿಯ ತಳೆದಿರ್ಪ ಜಮುನೆಯಂತೆ.

೧೮

ವೈರಿ ದೇಹಂಗಳಂ ತುಂಡರಿಸೆ ಪಟುವೆನಿಪ
ಎಲ್ಲಿಯುಂ ಪುಸಿಯದಿಹ ವೃತ್ತಿಯಿಂದೆ ;
ಆವಗುಂ ಬಳಿಯಿರ್ಪ ಮೂರ್ತಶಕ್ತಿಯ ತೆರದೆ
ಕೌಮೋದಕಿಯು ಹರಿಯ ಮೋದಗೊಳಿಕುಂ.

೧೯

ಅನ್ಯರೊಳಿದಿಲ್ಲೆಂಬ ಗುಣದಿಂದೆ ಕೇವಲಂ
ತನ್ನಿಂದೆ ನಂದಕಮುಮಲ್ತು ಹರಿಗೆ ;
ರಿಪುತತಿಯನುದ್ವೇಗಗೊಳಿಸುತಲಿ ನಂದಕಂ
ಪೆಸರಿನಿಂದಲು ಮನವ ಮೋದಗೊಳಿಕುಂ.

೨೦

ಮತ್ತ್ರೋರ್ವರಿಂ ನತಿಯು ಪೊಂದದೆಯೆ ಕ್ರಿಯೆಗಳೊಳು
ಕರ್ಣಾಂತಪ್ರಾಪ್ತಗುಣದಿಂದೆಸೆಯುವ;
ಸನಿಹದೊಳು ರಾಜಿಸುವ ಧೃಢಮೂದ ಶಾರ್ಙ್ಗಧನು
ಗೆಳೆಯನೊಲು ಹರಿಗೆ ವಶವರ್ತಿಯೆನಿಕುಂ,

೨೧

ಗಂಭೀರಮುಂಬುದಧ್ವನಿಯ ವರ್ಧಿಸುತಿರ್ಪ
ಕೃಷ್ಣಸಾಗರತಟದೆ ಚಲಿಪ ಹಂಸಂ;
ಮಂದಮಾರುತಜನಿತ ದನಿಯಿಂದೆ ಮೊಳಗುತಿಹ
ಪಾಂಚಜನ್ಯವು ಕೇಳ್ದುದಮಿತಗತಿಯಿಂ.

೨೨

ನಿರ್ಗಮನ ವರ್ಣನ

ಇಷ್ಟಸಿದ್ಧಿಯಗಳಿಸಿ ದಿಕ್ಕುದಿಕ್ಕುಗಳಲ್ಲಿ
ತಡೆಬಡೆಯ ಪಡೆಯದೆಯೆ ಗಮಿಸುತಿರ್ಪ
ಕ್ಷಿಪ್ರ ರಥವೇರಿದನು ಆ ಮಹಾರಥಿ ಚಕ್ರಿ
ಪುಷ್ಯರಥವಡರುವಿರುಳೆರೆಯನಂತೆ.

೨೩

ಬಳಿಕ ಹರಿ ತೇರಿನಲಿ ಬಾವುಟದೆ ರಂಜಿಸುತೆ
ಪಾಸಿರ್ಪ ಮಣಿಪಥದೆ ಪ್ರತಿಬಿಂಬಿಸಿ;
ನಾಗಗಳ ಭಯಗೊಳಿಸೆ ಪಾತಾಲ ಲೋಕಮಂ
ಪುಗುವವೊಲು ಕಾಣಿಸಿದ ಗರುಡನಾಗ.

೨೪

ಹರಿ ಹೊರಡಲನುವಾಗೆ ಗಿರಿಗುಹೆಯ ಭೇದಿಸಲು
ಪಟುವೆನಿಪ ಪಟಹಗಳ ಭಾಂಕಾರವು;
ಬೇರೆ ನೀರಂ ಪಳಿವ ಪೆರ್ಗಡಲಿನೋಘದೊಲು
ಶಬ್ದಾಂತರಂಗಳಂ ಮರೆಮಾಡಿತು.

೨೫

ವಿಶ್ವಧರ ಹರಿಯಾವ ಭೂಪಥದಿ ನಡೆಯುವನೊ
ಆ ಎಡೆಯ ನೇರಕ್ಕೆ ತಿರೆ ಧರಿಸಿದ;
ಫಣಿಯು ಕುಗ್ಗುವ ಹೆಡೆಯ ಸಾಸಿರಕೆ ಸಹಕರಿಸಿ
ಭುಜವ ಪಸರಿಸುವನತಿ ಶೀಘ್ರದಿಂದ

೨೬

ಉನ್ನತದ ತೋರಣದ ಸಂಗಭಂಗಕೆ ಹೆದರಿ
ಬಾವುಟವ ಬಾಗಿಸುತೆ ಸೇನೆಯೆಲ್ಲಂ;
ನಲ್ ನೀತಿಭಾಜನಂ ಕ್ರಿಯೆಯ ಫಲಗಳ ತೆರದೆ
ಹಿಂಬಾಲಿಸಿತು ಸೋಮವಂಶ ಹರಿಯಂ

೨೭

ಎಣ್ಣೆಗೆಂಪಿನ ಗಜಮದೋದಕಂ ಬೆರೆತಿರಲು
ನವಿಲಗರಿ ಚೂರಿನೊಲು ಬೆಳಗುತಿರ್ಪ
ಸ್ವರ್ಣಭುವಿ ಧೂಳಿಗಳು ನೇಮಿವರಮಿಳಿದಿರ್ಪ
ರಥಸಮೂಹಗಳಿಂದೆ ಪುಡಿಯಾದವು.

೨೮

ಚರಣದಿಂ ತುಳಿದಡುಂ ಕನಕಭೂಮಿಯ ರಜವು
ಮಹಿತಜನ ಮಸ್ತಕವನೇರಲಿಲ್ಲಂ;
ಉದ್ಧತಿಯನಾದಡುಂ ತಳೆಯಲಿಲ್ಲ ಧೂಳಿ
ಹಿರಿಮೆಗನುಗುಣಮಾಗಿ ವರ್ತಿಸಿದುದು.

೨೯

ಯಾದವರು ತುರಗಗಳನೆಂತೊ ತಡೆಹಿಡಿದಡುಂ
ಮತ್ತೆ ಮುಂಗಾಲುಗಳನೆತ್ತುತಿಹವು;
ಮಾರ್ಗಮಂ ತಡೆಯುತಿಹ ಪೇರಾನೆಗಳ ಮೀರಿ
ಮುನ್ನಡೆಯೆ ಬಯಸಿದೊಲು ತೋರ್ದುದಾಗ.

೩೦

ಕಡಿವಾಣಮಂ ಪಿಡಿದು ಕಷ್ಟದಿಂ ರಾವುತರು
ತುರಗಗಳ ನಿಗ್ರಹಿಸುತಿರೆ ಮುಂಗಡೆ;
ಧೂಳಿಯೊಳಗಾಡುತಿಹ ಮಕ್ಕಳಂ ಮಾತೆಯರ್
ಬೇಗದಿಂ ಬೀದಿಯಿಂದೊಯ್ದರಾಗ.

೩೧

ಅನಘಮುರಮಥನನಂ ನೋಡಲೆಳಸಿದ ಜನರು
ಪ್ರತಿಬೀದಿಯೊಳು ಬಳಿಯ ಸಾರುತಿಹರು;
ಬಹುಬಾರಿ ಸುಪರಿಚಿತಮಾದರುಂ ಬಹುಪ್ರೀತಿ
ಪೊಸತೆನಿಸಿ ತೋರುವುದು ಚಿತ್ರಮಲ್ತೆ!

೩೨

ವಿದ್ವಾಂಸನಾದಡುಂ ಸಿರಿ ಹರಿಯ ನಗರದಲಿ
ದೃಷ್ಟಿಬೀರುತ ನಡೆಯೆ ನಿಬಿಡಮಾದ
ಸೈನ್ಯದಿಂ ಕಿಕ್ಕಿರಿದ ಮಾರ್ಗಮಂ ಪೊಂದಿರ್ದ
ರಥ ಮಂದಗಮನಮಂ ತಿಳಿಯದಾದಂ.

೩೩

ದ್ವಾರಕಾವರ್ಣನಂ

ಸಾಗರದ ಮಧ್ಯದಲಿ ಪೊನ್ನ ಪೌಳಿಗಳಿಂದೆ
ದಿಶೆಗಳಂ ಪೊಂಬಣ್ಣಗೊಳಿಪ ಪುರಿಯು;
ವಾಡವಾಮುಖಜನಿತ ವಹ್ನಿ ಜ್ವಾಲೆಯ ತೆರದೆ
ಕಡಲ ಸೀಳ್ದೆಳ್ದದೆನೆ ರಾಜಿಸಿದುದು.

೩೪

ಭೂಮಿಭೃತ್ ಸಾಸಿರದೆ ಕೂಡಿರ್ಪ ಸಾಗರದೆ
ಸುತ್ತುವರಿದಿರ್ಪಮಲ ಮೂರ್ತಿ ಪುರಿಯು;
ಖಿನ್ನತೆಯ ಪೊಂದದಿಹ ವಿಧಿಯಿಂದಮಾ ನೆಲಂ
ಬುವಿಯ ಪ್ರತಿಕೃತಿಯಂತೆ ರಚಿತಮಾಯ್ತು.

೩೫

ವಿಶ್ವಕರ್ಮನ ಸದಾಭ್ಯಾಸಸಂಜನಿತವಹ
ಶಿಲ್ಪಶಾಸ್ತ್ರಜ್ಞಾನ ಸೀಮೆಯೆನಿಪ ;
ಆಪುರಿಯು ಕನ್ನಡಿಯ ತೆರದಮಲ ಜಲಧಿಯಲಿ
ಸ್ವರ್ಗಛಾಯೆಯ ತೆರದೆ ತೋರುತಿರ್ಕುಂ

೩೬

ತಂದೆಯೊಲು ಸಾಗರಂ ವರನೆನಿಪ ಕೃಷ್ಣನಿಗೆ
ಪೊಸದಾಗಿ ಕಲ್ಪಿಸಿದ ಮಣಿಮಾಲೆಯಂ :
ಅಂಕಮಂ ಸಾರಿರ್ಪ ನಗರದುಪಕಂಠದಲಿ
ನಲ್ಮೆಯಿಂ ತೊಡಿಸಿದಂ ಮತ್ತೆಮತ್ತೆ

೩೭

ಚಲಿಪ ಕಡಲಿನ ತೆರೆಯ ಮಾಲೆಯಿಂ ಮೇಲೊಗೆವ
ಶಂಖಕುಲಬಳಸಿರಲ್ ಪುರದಾಳ್ವರಿ ;
ಬಳಯೊಳೇ ಸಂಚರಿಪ ಉಡುಚಕ್ರದಿಂ ಪೊಳೆವ
ಹೊನ್ನಬೆಟ್ಟವ ನಿರುತಮನುಕರಿಸಿತು

೩೮

ಆ ಪುರದ ವರ್ತಕರ ಬೀದಿಯಲಿ ಸುರಿದಿರ್ಪ
ಸ್ಥಿರಕಾಂತಿರತ್ನಗಳ ರಾಶಿಗಳನು ;
ಲೋಲಜಲಮಾರ್ಗಗಳ ನೀರಿಂದೆ ಕದ್ದಿರುವ
ಕಡಲು ರತ್ನಾಕರತೆಯಾಂತಿರ್ಪುದು

೩೯

ಆ ಪುರದೆ ಜಲವೊಸರಿನೊರೆಕವಿದು ಪೊಳೆಯದಿಹ
ಉತ್ಕೃಷ್ಟತರ ರತ್ನರಾಶಿಗಳನು
ಬಿಸಿಲಿನೊಳಗೊಣಗಿಸಲ್ ಮುದದಿಂದೆ ಸಾಗರಂ
ತೆರೆಗೈಯ್ಗಳಿಂದಲ್ಲಿ ಹರಡುತಿಹುದು

೪೦

ಕಡಲ ಪೆರ್ದೆರೆ ಪುರಿಯ ಪ್ರಾಕಾರದುನ್ನತಿಯ
ಜಯಿಪುದೆನೆ ದೂರದಿಂದೇಳುತಿಹುದು ;
ಸನಿಹಮಂ ಸಾರ್ದೊಡನೆ ಜಯಿಸಲನುವಾಗದೆಯ
ನಾಣಿಂದಮೆನೆ ತೆರೆ ವಿಲೀನವಾಯ್ತು

೪೧

ಅಂಬುದಂ ಕೌತುಕದೆ ಬೇಗದಿಂದಾಗಮಿಸಿ
ಆ ಪುರಿಯ ಪೌಳಿಯಿಂ ತಡೆದು ಶೀಘ್ರಂ ;
ಗರ್ಜಿಸುತೆ ಮಳೆಗರೆವ ನೆವಮಾಡಿ ದುಗುಡದಿಂ
ಹೊರಗೆ ಕಣ್ಣೀರ್ಗಳಂ ಕರೆದುದೊಡನೆ

೪೨

ಆ ನಗರ ವನಿತೆಯರ ಸಾರೂಪ್ಯಮಂ ಬಿಡಿಪು
ದೇನಾದರುಂ ಗುಣವ ತೋರಲೆಂದು ;
ಬೇಡಲಪ್ಸರೆಗಣವು ಮನು ತನ್ನ ಪ್ರಜೆಗಳಂ
ಸನಿಮೇಷ ಚಿನ್ಹೆಯಿಂ ರಚಿಸಿರ್ದಪಂ

೪೩

ಆ ಪುರದೆ ರಾತ್ರಿಯಲಿ ನಾರಿಯರು ಚಂದಿರನ
ಕಿರಣಜಾಲದೆ ಕವಿದು ಪೊಳೆವ ಪಟಿಕ
ಸೌಧಪಂಕ್ತಿಯನಡರಿ ದಿವಿಪಥದಿ ರಾಜಿಸುತೆ
ದೇವಾಂಗನೆಯರಂತೆ ತೋರುತಿರ್ದರ್

೪೪

ಆ ಪುರದೆ ಪ್ರತಿರಾತ್ರಿ ಶಶಿಕಾಂತಶಿಲೆಗಳಂ
ಪಾಸಿರ್ಪ ಪ್ರಾಂಗಣದ ಮಹಡಿಯಿಂದೆ ;
ಉನ್ನತದ ನಳಿಕೆಗಳು ಮೇಘ ಕೆಳಗಿರ್ದಡುಂ
ಜಲಪೂರಮಂ ಬಿಡದೆ ಸುರಿಸುತಿಹವು

೪೫

ಗೃಹಿಣಿಯರು ರತಿಯಲ್ಲಿ ನಾಣಿಂದೆ ದೀಪಗಳ
ನಂದಿಸಲು ಜಾಲಂಧ್ರದಿಂದೆ ಪೊಕ್ಕು
ವೈಢೂರ್ಯಭಿತ್ತಿಯಲಿ ಬೆಕ್ಕುಕಣ್ಣೊಲು ಭಯವ
ಗೊಳಿಪ ಶಶಿಕಾಂತಿಯಿಂ ಭೀತಿಪಡೆವರ್

೪೬

ಆ ಪುರದ ಮನೆಗಳಲಿ ನುಣುಪಾದ ಕಾರಣದೆ
ಚಿತ್ರಬರೆಯಲಶಕ್ತರಾಗಿ ಯುವಕರ್
ರತ್ನಭಿತ್ತಿಗಳೊಳಗೆ ತಾವೆ ಪ್ರತಿಬಿಂಬಿಸುತೆ
ಜೀವಚಿತ್ರಗಳಿಂದೆ ಸಿಂಗರಿಸುವರ್

೪೭

ಆ ಪುರದ ಮಿಸುನಿಮನೆ ಕಂಭದಲಿ ಬಿಂಬಿಸುತೆ
ಸಾವರ್ಣ್ಯಮಂ ತಳೆದ ಮಾನಿನಿಯರ
ಸ್ಮರಪಾಂಡುರತೆ ತಳೆದು ಗುರ್ತಿಸುವ ಕೆನ್ನೆಗಳ
ಮಣಿದರ್ಪಣದ ಸಿರಿಯ ಧರಿಸಿರ್ದವು

೪೮

ಶುಕದೇಹನೀಲಮಣಿ ರಚಿತ ಗೃಹದೇಹಳಿಯ
ಕಾಂತಿ ಬಾಗಿಲ ಮುಂದೆ ಲೇಪಿಸಿರಲು ;
ಆ ಪುರದ ಮುಗ್ಧಾಂಗನೆಯರದನು ವೀಕ್ಷಿಸುತೆ
ಗೋಮಯದ ಸಾರಣೆಯ ಮಾಡರೆಂದುಂ

೪೯

ಆ ಪುರದ ಗೃಹಗಳಲಿ ವಲಭಿಯಲಿ ಚಣಕಾಲ
ಕುಳಿತಿರ್ಪ ನವಿಲುಗಳ ಬರ್ಹದಿಂದೆ ;
ಪಚ್ಚೆಕಲ್ಲಿನೊಲೆಸೆವ ಪಸಿರುಪುಲ್ಪೊದಿಕೆಯಿಂ
ರಾಜಿಸುವ ಲೋವೆಯೊಲು ಕಾಣ್ಬುವಲ್ಲಿ

೫೦

ಅತುಲಮದು ಪೆರ್ಮೊಲೆಗಳಿರ್ದಡುಂ, ಸುವಿತಾನ
ಮಾದರವಿತಾನಮದು ಸಚ್ಚಿತ್ರಗಳ್
ಮೆರೆದರುಂ ಸುವಿಚಿತ್ರ, ಸುವಿಶಾಲಮಾದರುಂ
ಬಹುಶಾಲಮೆನೆ ಮನೆಗಳೆಸೆವುವಲ್ಲಿ

೫೧

ಮನೆಗಳೊಳು ಪಾರಿವದ ಗೂಡುಗಳ ಲೋವೆಯಲಿ
ಕೃತ್ರಿಮದ ಪಕ್ಕಿಗಳ ಪಂಕ್ತಿಗಳನು
ಹಿಡಿಯೆ ನಿಶ್ಚಲಮಾಗಿ ನಿಂದ ಮಾರ್ಜಾಲಗಳ
ಜನರು ಕೃತಿಮವೆಂದೆ ಬಗೆಯುತಿರ್ದರ್

೫೨

ಆ ಪುರದ ನಾರಿಯರ್ ಭೂಮಿಯೊಳಗಿರ್ದರುಂ
ಮುಖಕಮಲದಿಂ ಶಶಿಯ ಪಳಿವರೆನಲು
ನಕ್ಷತ್ರಮಾರ್ಗಮಂ ಮೀರಿರ್ಪಸೌಧಾಗ್ರ
ಶಿಖರಗಳ ನಡರಿದುದು ವ್ಯರ್ಥಮಲ್ತೆ

೫೩

ರಮಣೀಯವೆಂದರಿದು ಸುಪತಾಕೆ ಸಾರಿರ್ಪ
ಸುವಿವಿಕ್ತಮೆಂದು ರಾಗವ ವರ್ಧಿಪ ;
ನತವಲೀಕಮುಮೆನಿಪ ವಲಭಿಗಳ ಯುವಜನರ್
ಸೇವಿಸಿದರಾಪುರದೆ ವಧುಗಳೊಡನೆ

೫೪

ಕೃತ್ರಿಮತೆ ತಳೆಯದೆಯೆ ಸೌರಭ್ಯಧರಿಸಿರ್ಪ
ಮದ್ಯಗಳು ವನಿತೆಯರ ವದನಮೆರಡುಂ ;
ಯುವಜನರ ಹಿತಕಾಗಿ ವಾಸನೆಯ ಪೆರ್ಚಿಸಲು
ಅನ್ಯೋನ್ಯಕರಣಮಂ ಪೊಂದಿರ್ದಪು

೫೫

ಮನೆಗಳಲಿ ವಿಹರಿಸುವ ಜಗುಲಿಗಳ ಮೇಲಿರ್ಪ
ಲೋವೆಗೂಡುಗಳೊಳಗೆ ವಾಸಗೆಯ್ವ ;
ಪಕ್ಕಿಗಳು ವನಿತೆಯರ ರತಿಕೂಜಿತಂಗಳಂ
ಕೇಳುತಲಿ ಶಿಷ್ಯತ್ವಮಾಂತಿರ್ಪವು

೫೬

ಮುಚ್ಚಿರ್ದರುಂ ಸ್ಪಷ್ಟಕಾಣ್ಬ ಪುರನಾರಿಯರ
ಕುಚಮಂಡಲಗಳಿಂ ಸ್ವಚ್ಛಮೆನಿಪ ;
ಅಂಬರಂಗಳು ನಾಮಮಾತ್ರದಿಂದಲ್ಲದೆಯೆ
ಅರ್ಥದಿಂದಾಗಸವನನುಕರಿಪುವು

೫೭

ಆ ಪುರದೆ ನಿರ್ಜಿಹ್ಮ ನಿಷ್ಪಂಕಮತ್ಯಾಯ-
ತಿಯುಮಹಿತ ಸೀಮೆಯಂ ಬಿಡದೆಸೆಯುವ
ಇರ್ತ್ರರದ ಸುವಿನೀತ ಮಾರ್ಗಗಳನೆಂದಿಗುಂ
ಅಸ್ಖಲಿತ ಸುಜನರುರೆ ಬಿಡಲಿಲ್ಲವು

೫೮

ಅನ್ಯೋನ್ಯ ಸ್ಪರ್ಧೆಯಿಂ ನರರೂಪುತಳೆದಿರ್ಪ
ಆ ಪುರದ ವನಿತೆಯರ ಸೃಜಿಸಿ ಬ್ರಹ್ಮಂ ;
ಘುಣಾಕ್ಷರನ್ಯಾಯದಿಂ ಸಿರಿಯ ಸೃಜಿಸಿದಂ
ಎಂಬುವಪವಾದಮಂ ತೊಳೆದುಕೊಂಡಂ

೫೯

ಮನಸಿನೊಳಗಾಗಾಗ ಬಯಸಿದುದನೆಲ್ಲಮಂ
ತಡೆಯದೆಯೆ ನೀಡುವುವು ಕಲ್ಪತರುಗಳ್ ;
ಆ ಪುರದೆ ವಾಸಿಸುವ ಜನರ ಸಂಪದಮೆಲ್ಲ
ಮಾತಿನಿಂ ಬಣ್ಣಿಸಲು ಶಕ್ಯಮಹುದೆ ?

೬೦

ಸಕಲ ಕಲೆಗಳ ಧರಿಸಿ ಸೌಧದೊಲು ಬಿಳುಪಾಂತ
ಸುಪ್ರಭೆಗಳಿಂ ದಿಶೆಯ ಬೆಳಗುತಿರ್ಪ ;
ರೇವತೀರಮಣ ಬಲಭದ್ರನುಂ ಚಂದ್ರನುಂ
ಆ ಪುರದೆ ಪೊರಮಡಲು ಬಯಸಲಿಲ್ಲ

೬೧

ಬಾಣದನುಜಾಹವದೆ ಶಿವನ ಶಕ್ತಿಯ ಗೆಲ್ದ
ಶ್ರೀಕೃಷ್ಣನಿಗೆ ಪುತ್ರನಾಗಿ ಜನಿಸಿ
ದೇಹಮಂ ಧರಿಸಿರ್ಪ ಜೈತ್ರಶರ ಮನ್ಮಥಂ
ನಿಶ್ಶಂಕೆಯಿಂದಲ್ಲಿ ವಾಸಗೆಯ್ವಂ

೬೨

ಶಿವಮಾರುತಂಗಳಂ ಚಿರಕಾಲ ಸೇವಿಪ್ಪೊಲು
ಹರಿಯಿಂದ ಬಹುಕಾಲ ವಾಸಗೆಯ್ವ
ಉದ್ರಶ್ಮಿ ರತ್ನನಿಧಿ ಕಡಲಿನೊಳಗಾಪುರಂ
ಸ್ಪರ್ಧಿಪುದು ಮೇರೊಳಿಹ ಸುರಪುರವನು

೬೩

ಸ್ನಿಗ್ಧಾಂಜನಶ್ಯಾಮ ರುಚಿಯು ಸದ್ವೃತ್ತಮುಂ
ಸುವಿಶೇಷಕಮು ವರ್ಣಕಾಂತಿ ಕೆಡದ:
ವಧುವ ಸಿಂಗರಿಸುವೊಲು ಮೂಲೋಕತಿಲಕ ಸಿರಿ
ಕೃಷ್ಣನಾಪುರಸಿರಿಯ ಪೆರ್ಚಿಸಿದನು

೬೪

ಸೇನಾನಿರ್ಗಮನಂ

ಅತುಲಪ್ರತಾಪನಾ ಹರಿಯುಮಾ ನಗರಮಂ
ವೀಕ್ಷಿಸುತೆ ಮೂಡುಗಡೆ ನಡೆಯುತಿರಲು ;
ವಜ್ರಪ್ರಭೆಯಿಂ ಪೊಳೆವ ಸುರಕೈದುಗಳಸಿರಿಯ
ಮಾರ್ಗದುರ್ಲಂಘ್ಯಸುರ ಸೇನೆಯಂತೆ

೬೫

ಪದುಮನಾಭಾಂಗದಿಂ ಪ್ರಜೆಗಳುದಿಸಿದ ತೆರದೆ
ಶಿವಜಟಾಜೂಟದಿಂ ಗಂಗೆಯಂತೆ;
ನಾಲ್ಮೊಗನ ಮೊಗದಿಂದೆ ಶ್ರುತಿಗಳೊಲು ಮುರಮಥನ
ಸೇನೆಗಳ್ ಪುರದಿಂದ ಹೊರಹೊರಟವು

೬೬

ವದನದಲಿ ದನಿಗುಡುವ ಕಡಿವಾಣಮನ್ಯೋನ್ಯ-
ಮುಜ್ಜುತಿರಲತ್ತಿತ್ತ ಚಲಿಪಶ್ವದಿಂ;
ಮೊಣಕಾಲಚಿಪ್ಪುಗಳುಮನ್ಯೋನ್ಯಘರ್ಷಿಸಲು
ಸಾದಿಗಳು ಕಷ್ಟದಿಂ ಮುನ್ನಡೆದರು

೬೭

ಪ್ರಾಣಿಗಣದಿಂ ಮಾರ್ಗನಿಬಿಡಮಾಗಿರ್ದರುಂ
ತೇಜೋವಿಶೇಷಯುತ ದ್ವಿಪಗಳಿಂದೆ;
ದೀಪದಿಂ ತಿಮಿರದೊಲು ಪ್ರಾಣಿಗಳು ಸರಿಯುತಿರೆ
ವಿಸ್ತಾರದಿಂದಾನೆ ಪಡೆ ನಡೆಯಿತು

೬೮

ಸೂತರತಿಯತ್ನದಿಂ ಹಗ್ಗಗಳ ಹಿಡಿದೆಳೆಯೆ
ಕುದುರೆ ಕುತ್ತಿಗೆ ಕುಗ್ಗಿ ನೊಗಸಡಲಿರಲ್;
ವೇಗದಿಂದೋಡುತಿಹ ರಥಗಳುಂ ಮೆಲ್ಲನೆಯೆ
ಊರದಿಣ್ಣೆಯ ದಾಂಟಿ ನೆಲಕಿಳಿದವು

೬೯

ಪುರಬೀದಿ ತೋಳ್ಗಳಿಂ ಪಡೆ ತೆರೆಯ ಕಟಿಗಗಳ್
ತಕ್ಷಣಂ ಸುರಿಯುತಿರೆ ಶ್ರೀಕೃಷ್ಣನ
ವಿರಹದಿಂದಾ ಪುರಕೆ ಬಹುತೇಕ ದುಗುಡದಿಂ
ದ್ವಾರಕಾತ್ವದೊಳಿಷ್ಟುಮಿರ್ದುದಿಲ್ಲ

೭೦

ಸಮುದ್ರವರ್ಣನಂ

ಊರ್ಮಿಸಾಸಿರದಿಂದೆ ಚಣಚಣಕೆ ದಡಪೆಡೆಗೆ
ನೂಂಕುತಿಹ ಶೈವಲೆಯ ಶ್ರೇಣಿಯಂತೆ;
ಕಡಲಿನಾಜೆಯ ದಡದಿ ಪಸುರೆಲೆಯ ನೀಲಿಮೆಯ
ರಾಶಿಯಂ ಮುರರಿಪುವು ಕಂಡನಾಗ

೭೧

ಕಡಲದಡದಲಿಬೆಳೆದು ಕರ್ವೋಡದಂತೆಸೆವ
ಲಕ್ಷ್ಮಿಯುತ ಲತೆವಧುಗಳಿಂದಪ್ಪಿದ;
ತರುಗಳಂ ವೀಕ್ಷಿಸುತೆ ಬಹುರೂಪು ತಳೆದಿರ್ಪ
ನಿಜರೂಪಮೆಂದರಿದ ಶ್ರೀಕೃಷ್ಣನು

೭೨

ನೆಲವನಾಲಿಂಗಿಸುತಲಬ್ಬರಿಸಿ ಬಿರುಸಾಗಿ
ಧ್ವಜದಂತೆ ಚಲಿಪ ಪೆರ್ದೆರೆಗಳಿಂದೆ;
ನೊರೆಯೊಗೆವ ಸಾಗರವ ನೀಕ್ಷಿಸಿದ ಕೃಷ್ಣನಿಗೆ
ಮೂರ್ಛೆರೋಗಿಯ ಶಂಕೆಯುದಿಸಿತಾಗ

೭೩

ಕಡಲು ಬಹು ಬಾಯಾರಿ ಕುಡಿದು ವೈಯುಬ್ಬಿದರು
ಹಿಡಿಸದೆಯೆ ಚೆಲ್ಲಿರ್ಪ ತಂಗದಿರನ;
ಕಿರಣಜಾಲಮೆಯೆಂದು ತೀರದಲಿ ಚದುರಿರ್ಪ
ಮುತ್ತುಗಳ ಮಾಲೆಯಂ ಭಾವಿಸಿದನು

೭೪

ಸಂಭ್ರಮದೊಳಾವಗಂ ಗರ್ಜಿಸುತೆ ಮೋಡಗಳು
ಆವ ನೀರಿಂ ಬುವಿಯ ತೋಯಿಸುವುವೊ;
ಆ ಜಲವ ಕಡಲಿನೊಳಗೊಂದುಕಡೆ ನಿಶ್ಚಲವೆ
ಕುಡಿವ ಮೇಘಂಗಳನು ಕಂಡ ಹರಿಯು

೭೫

ಮುನಿವರರ್ ಶ್ರುತಿಗಳಿಂದರ್ಥಮುದ್ಧರಿಸುವೊಲು
ಮೋಡ ಕಡಲಿಂ ನೀರನುದ್ಧರಿಸುತೆ ;
ವಿರಚಿಸುತೆ, ಕಡಲನೇ ಸಾರ್ವ ನದಿಗಳ ಹರಿಯು
ಶ್ರುತಿಯ ಸಾರುವ ಸ್ಮೃತಿಯ ತೆರದರಿದನು

೭೬

ದಿಶೆಗಳಿಂ ತಂದಿರ್ಪ ವರವಸ್ತುಗಳ ಮಾರಿ
ಇಮ್ಮಡಿಸಿ ಲಾಭಮಂ ಪಡೆದೆಸೆಯುವ ;
ನಾವೆಯಲಿ ಸಾರಯುತ ಭಾಂಡಗಳನಾಂತಿರ್ಪ
ದ್ವೀಪ ವರ್ತಕಗಣವ ಹರಿ ಪೊಗಳಿದಂ

೭೭

ಕಡಲಿನೊಳಭಾಗದಿಂ ಮೇಲ್ಮೆಗೆಯಲೆಳಸಿರ್ಪ
ಪಾವುಗಳ್ ಭಕುತಿಯಿಂ ಶ್ರೀಕೃಷ್ಣಗೆ ;
ಬಾವುಟವ ರಚಿಪುವೆನೆ ನಿಟ್ಟುಸಿರಗಾಳಿಯಿಂ
ಜಲವ ಮೇಲ್ಚಿಮ್ಮಿದವು ರಭಸದಿಂದೆ

೭೮

ಅಂಕಶಯನದೆ ಮಲಗಿಯಾಪದದೆ ಬುಂಧುವಹ
ಅತಿಥಿಯೊಲು ಬಂದಿರ್ಪ ಹರಿಯ ಕಂಡು ;
ಅಧಿಕ ಸಂತೋಷದಿಂ ತೆರೆಗೈಯ್ಗಳಂ ಚಾಚಿ
ಕಡಲೆದುರುಗೊಳ್ವವೊಲು ರಂಜಿಸಿದುದು

೭೯

ಜಲಕಣಗಳಂ ಸೋಂಕಿ ಯೇಲಕ್ಕಿ ಲತೆಗಳಂ
ಘರ್ಷಿಸುತೆ ಸೌರಭ್ಯಮಾಂತೆಸೆಯುವ ;
ಕಡಲೆಲರ್ ತೀರದಲಿ ಸಂಚರಿಪ ಮಾಧವನ
ಬೆವರ್ವನಿಗಳಂ ಬಿಡದೆ ಪರಿಹರಿಸಿತು

೮೦

ಉನ್ನತದ ತಾಳವನ ಸಂಜನಿತ ಪವನನಿಂ
 ಬೈತಲೆಯ ತೆಗೆದೆಸೆವ ಕೇತಕಿಗಳ ;
ಲವಣಸಾಗರದೆಡೆಯ ಜೌಗುಪ್ರದೇಶಗಳ
 ಸೈನಿಕರ್ ಪೊಂದಿದರ್ ಮೋದದಿಂದೆ

೮೧

ಸುಲವಂಗನಲ್ಕುಸುಮ ಮಾಲೆಗಳ ಸಿಂಗರಿಸಿ
 ಎಳೆನೀರ್ಗಳಂ ಕುಡಿದು ತಣಿದ ಭಟರು ;
ಹಸಿಯಡಕೆ ರುಚಿನೋಡಿ ಸಾಗರವು ಸಲ್ಲಿಸಿದ
 ಆತಿಥ್ಯಮೆಲ್ಲಮಂ ಸ್ವೀಕರಿಸಿದರ್

೮೨

ತುರಗಶತ ಬಳಸಿರ್ಪ ಪ್ರತಿಪಥದೆ ಮಥಿತಭೂ-
 ಭೃತರಿರ್ಪ, ಧೃತಸಿರಿಯ ಹರಿಸೇನೆಯು ;
ಏಕಾಶ್ವಮಂ ಪಡೆದ ಭೂಭೃದ್ವಿಮಥಿತಮಹ
 ವಿಗತಸಿರಿ ಕಡಲಿಂದೆ ದೂರಮಾಯ್ತು

ಪ್ರಯಾಣ ವರ್ಣನಂ

೧

ರೈವತಕಪರ್ವತ ವರ್ಣನಂ :—

ಇಂದ್ರನೀಲಾಶ್ಮಗಳು ಪೋಣಿಸಿದ ಪಲತೆರದ
ಧಾತುಮಯ ಮಣಿಕಾಂತಿಯಿಂದೆ ಬುವಿಯ ;
ಸೀಳ್ದಿಳ್ದ ಪಾವುಗಳ ನಿಶ್ವಾಸಧೂಮದೊಲು
ರೈವತಕ ಪರ್ವತವ ಕಂಡ ಹರಿಯು ೪–೧

೨

ಪೆರ್ಬಂಡೆಗಳಮೇಲೆ ಸಂತತಂ ಸುತ್ತುತಿಹ
ಮೇಘವೃಂದಗಳಿಂದೆ ರವಿಮಾರ್ಗಮಂ ;
ಮತ್ತೆ ತಡೆವುದಕಾಗಿ ವಿಂಧ್ಯತ್ವಮಾಂತುದೆನೆ
ರಾಜಿಸುವ ಪರ್ವತವ ಕಂಡನಾಗ ೪–೨

೩

ಸಾಹಸ್ರ ಸಂಖ್ಯೆಗಳ ತಲೆ ಕಾಲ್ಗಳಿಂ ಪಿರಿದು
ದಿವಿ ಬುವಿಗಳೆಲ್ಲವಂ ತುಂಬಿ ಮೆರೆವ ;
ಕಣ್ಗಳೆಡೆಯೊಳಗಿರ್ಪ ರವಿಶಶಿಗಳಿಂದೆಸೆವ
ಬ್ರಹ್ಮನಂ ಸ್ಫುಟವಾಗಿ ಹೋಲುತಿರ್ಪ ೪–೩

೪

ಕೆಲವು ಕಡೆ ಜಲಮಳಿದು ಬಿಳಿದಾಗಿ ತೊಳೆದಿರ್ಪ
ಬಟ್ಟೆಯೊಲು ಬೆಳಗುತಿಹ ಮೋಡ ಧರಿಸಿ ;
ಗಿರಿಜಾಂಗಸಂಗದಿಂ ಬೇರ್ಪಟ್ಟು ಭಸ್ಮದಿಂ
ರಾಜಿಸುವ ಹರನಂತೆ ಗಿರಿಯೆಸೆದುದು ೪–೪

೫

ಸ್ಕಂಧಮಾರೋಹಿಸಿದ ಜ್ವಲ ನೀಲಕಂಠಗಳ
ಉರಗೇಂದ್ರರಿಂ ಬ್ಳಸಿನೊಡಲಿನೊಳಗೆ ;
ನರ್ತಿಸುವ ಬಹು ಬಳ್ಳಿ ತೋಳ್ಗಳಿಂ ರಾಜಿಸುವ
ಬಹು ರುದ್ರರಂ ಧರಿಸಿದಂತೆ ತೋರ್ಪ ೪–೭

೬

ತೂಗುತಿಹ ನೈದಿಲೆಯ ಕರ್ಣಾವತಂಸಗಳ
ಲೋಧ್ರಸುಮಧವಲಸುಕಪೋಲದಂತೆ ;
ಪೊಸ ನೊಸೆಯ ಪುಲ್ಮರಳ ದಿಬ್ಬಗಳ್ ಬಳಸಿರ್ಪ
ತಿಳಿನೀರ ಶೈವಲಿನಿ ಕೊಳಗಳೆಸೆವ ೪–೮

೭

ತಾವರೆಯ ಸಾಲುಗಳ ವಶಮಾಗಿ ಚಲಿಪಳಿಯ
ತರುತತಿಗಳಿಂ ಬಿಸಿಲನಪಹರಿಸುವ ;
ರಮ್ಯಮುಂಗುರುಳುಗಳ ಸುರಲಲನೆಯರು ಮುದದೆ
ರಕ್ಷರಿಂದ ಕ್ಷೋಭದಿಂದಪ್ಪುವ ೪–೯

೮

ರೈವತಕಗಿರಿಯ ಮಹಿಮೆ :—

ಮುರವೈರಿ ಮುದವಡೆಯೆ ಮೇರುಗಿರಿ ಶಿಖರದಿಂ
ತಂದು ಸುರವರರಿಂದೆ ವರ್ಧಿಸಿರ್ಪ ;
ಔನ್ನತ್ಯ ಸೌಂದರ್ಯಮೀಗಿರಿಯ ಗರಿಮೆಯುಂ
ಕವಿವಚನ ಪ್ರೌಢೋಕ್ತಿಮೃಷೆಯಲ್ಲವು ೪–೧೦

೯

ಅರಳಿರ್ಪ ಸುಮನೇತ್ರ ಸಾಸಿರವ ಧರಿಸಿರ್ಪ
ಪೆರ್ಮರವ ಸುರಪನಾರೋಹಿಸಿರ್ಪ ;
ಸುರಗಜದ ಧಾವಲ್ಯ ಶೋಭೆಯುಂ ತಳೆದತುಲ
ರಾಜಿಸಿತು ರಜತಮಯ ಗಂಡಶೈಲಂ ೪–೧೩

೧೦

ಅರುಣನಿಂ ಕೆಂಪೆಸೆವ ರವಿರಥಾಶ್ವಗಳಿಲ್ಲಿ
ಬಿದಿರು ಮೊಳಕೆಯ ನೀಲಮಣಿಗಳಿಂದೆ ;
ಸುತ್ತಲುಂ ಬೆಳಗುತಿಹ ಸ್ವಪ್ರಭೆಗಳಿಂಮತ್ತೆ
ನಿಜ ಹರಿದ್ವರ್ಣಮನೆ ಸಾರ್ದಿರ್ದವು ೪—೧೪

೧೧

ಎನಿತುಸಲ ನೋಡೆದರುಮಾಶೈಲ ಮುರಹರಗೆ
ಪೊಸತರೊಲು ಸೋಜಿಗವ ಮೂಡಿಸಿದುದು ;
ಚಣಚಣಕೆ ನವ್ಯತೆಯ ತಳೆವುದೇ ಲೋಕದಲಿ
ರಮಣೀಯತೆಯ ಸುಸ್ವರೂಪಮಲ್ತೆ ! ೪—೧೭

೧೨

ಮೇಲೊಗೆದ ದೀರ್ಘತರ ರಶ್ಮಿಗಳ ರವಿಯುದಯ
ಹಿಮಕಿರಣನಸ್ತಮಯ ಮಾಗುತಿರಲು ;
ಈ ಗಿರಿಯು ತೂಗಿ ಬಳಸಿರುವೆರಡು ಗಂಟೆಗಳ
ಗಜರಾಜಲೀಲೆಯಂ ತಳೆದಿರ್ದುದು ೫—೨೦

೧೩

ಬಿದಿರುರಂಧ್ರಗಳಲ್ಲಿ ತುಂಬಿ ದನಿಗೈಸುತಿಹ
ಕಂಬಳೀ ಮೃಗದೆವೆಯ ಮುದುರುತಿರ್ಪ
ಕಸ್ತೂರಿಮೃಗಸಂಗಗಂಧದಿಂ ಕಾಮಿಯೊಲು
ವಾಯು ವಿಷಯದಿ ರಕ್ತಿಪೊಂದಿರ್ದುದು ೬—೬೧

೧೪

ರುದ್ರನುಂ ಸಾಂದ್ರಗಜಚರ್ಮವಸನವ ಪೊರ್ದು
ಹಿಮಶೀತಲಾಚಲದೆ ಮಲಗುತಿಹನು ;
ಸರ್ವರ್ತುಸುಖಮಿಾಯುವೀ ಗಿರಿಯೊಳಿರುತಿರ್ಪ
ಬಡವನಿನಿತುಂ ದ್ವಂದ್ವ ದುಗುಡವರಿಯಂ ೪—೬೪

೧೫

ಪೊಸಮರದ ಬನಸಾಲು ಕರ್ಪಿಡಿದ ಮಧ್ಯದಿಂ
ಸ್ಪಟಿಕಶಿಲೆ ಸಾನುಗಳ ಭೂಭಾಗದಿಂ ;
ನಾಗನಡುಕಟ್ಟನಿಂ ಭಸ್ಮಾಂಗ ರಾಗದಿಂ
ಬಿಳುಪಾಂತ ಶೂಲಿಯಂ ಗಿರಿ ನಟಿಪುದು ೪–೬೫

೧೬

ಈ ಗಿರಿಯು ನೀಂ ಬರಲು ಶಿಖರೌಘಸಿರಿಪೋಲ್ವ
ಬಿರುಗಾಳಿ ಲೀಲೆಯಿಂ ಮೇಲೆಳುವ ;
ಹಲಧರಾಂಬರಶ್ಯಾಮ ಮೇಘದಿಂಸಡಗರದೆ
ಎದುರೆದ್ದು ಗೌರವಿಪ ತೆರನಿರ್ಪುದು ೪–೬೮

೧೭

ಇಂತು ಪ್ರೇಯಸಿಯಂತೆ ಹಿತಮಾಗಿ ದಿಟಮೆನಿಪ
ದಾರುಕನ ಮಾತುಗಳ ಕೇಳಿ ಕಡೆಗೆ ;
ದಟ್ಟಡವಿ ಬಟ್ಟೆಯಂ ಪೊದೆದು ರಾಜಿಸುತಿರ್ಪ
ಗಿರಿಯೊಳಗೆ ರಮಿಸೆ ಹರಿ ನಿರ್ಧರಿಸಿದಂ ೫–೧

೧೮

ಶಿಬಿರ ವರ್ಣನಂ :—

ಕೂರುಗುರಿನಿಂದಾನೆ ತಲೆ ಸೀಳೆ ಕೆಳಸುರಿದ
ಮುತ್ತುಗಳ ಮೊತ್ತಮಿಹ ಗವಿಮನೆಗಳೊಳ್
ಕೃಷ್ಣಾನುಚರ ನೃಪರು ಬಲ್ಪಿಂದೆ ರಿಪುಗಳೊಲು
ಸಿಂಹಗಳ ಸಂಹರಿಸಿ ವಾಸಿಸಿದರು ೫–೧೨

೧೯

ಪರಿಜನರು ವಾಹನದೆ ಕೆಳಗಿಳಿಸೆ, ನೋಳ್ಪರಂ
ಹಿಂದೂಡೆ ಬಳಲಿರಲ್ ಕಂಚುಕಿಗಳು ;
ಜಾರಿರಲ್ ಮುಖಪರದೆ ಚಣಕಾಲ ರಾಣಿಯರ
ಜನರು ಭಯಕೌತುಕದೊಳೀಕ್ಷಿಸಿದರು ೫–೧೬

೨೦

ಮಿಂದು ತಿಳಿಜಲ ಕುಡಿದು ಬಟ್ಟೆಗಳ ಮಡಿಮಾಡಿ
ಬಿಸಸುಮಗಳಂ ಧರಿಸಿ ದಂಟು ತಿಂದು ;
ಸೈನಿಕರು ಗಿರಿನದಿಯ ಸಿರಿಯನುಪಭೋಗಿಸದ
ಸ್ವೈಷ್ಟಲ್ಯದೋಷಮಂ ತೊಳೆದರಂದು ೫—೨೯

೨೧

ಪೇರಾನೆ ಜಲಧಿ ಪೆರ್ದೆರೆಯೊಳಭಿಮುಖಮಾಗಿ
ಬಿಂಬಿಸಿದ ನಿಜರೂಪು ನೋಡಿ ಭರದಿಂ
ಪ್ರತಿಗಜವನೆದುರಿಪೊಲು ಕ್ರೋಧದಿಂ ನಿರ್ಭಯದೆ
ಕೊಲ್ಲುವದಕೆ ಧಾವಿಸಿದುದೇಂ ಸೋಜಿಗಂ ! ೫—೩೨

೨೨

ಗಜಪತಿಯು ಮುಂದೆಸೆವ ನಲ್ಕಬ್ಬ ಮುಟ್ಟದೆಯೆ
ಹತ್ತಿರಿಹ ಪೆಣ್ಗಜವ ನಿಚ್ಛಿಸದೆಯೆ ;
ಕಣ್ಮುಚ್ಚಿ ಕೇಲವಂ ಸ್ವೇಚ್ಛೆಯಿಂ ಬನಗಳಲಿ
ವಿಹರಿಸಿದ ವೈಭವವ ನೆನೆಯುತಿತ್ತು ೨—೫೦

೨೩

ಸ್ವರ್ಣ ಭುವಿಯೊಳು ಸುತ್ತಿ ಹೊರಳಿ ನಿಜದೇಹಮಂ
ಕಂಪಿಸುತೆ ಚದುರಿದಾಯತಕೇಶದಿಂ ;
ಅಗ್ನಿಕಣದರುಣತೆಯ ಧೂಲಿನಿಕರದೆ ವಾಜಿ
ತೇಜೋತಿರೇಕದೊಲು ರಾಜಿಸಿದುದು ೫—೫೫

೨೪

ಸ್ನಾನದಿಂ ತೊಯ್ದೊಡಲ, ದಿವಿಜರೊಲು ಜನರಿಂದೆ
ಎವೆಯಿಕ್ಕದೀಕ್ಷಿಸುವ; ಸಿರಿಯೋಗದಿಂ
ರಮ್ಯತರಮೆನಿಪಶ್ವ ಕಡಲಿನಿಂದೀಗಲೇ
ಪುಟ್ಟದಮರಾಶ್ವದೊಲು ಕಂಗೊಳಿಸಿತು ೫—೫೭

೨೫

ಭಾರಮಿಳುಪಲು ಹಗುರಮಾದರುಂ ಬಸವಗಳು
ನೊಸೆಪುಲ್ಲಮೆದೆ ಮೇಯ್ದು ಭಾರವಾಗಲ್
ಗುರು ಗಂಗೆ ದೊಗಲಲುಗೆ ಮೃದುವಾಗಿ ಮೆಲಕುತಲಿ
ಕಣ್ಮುಚ್ಚಿಮರಗಳಡಿ ಮಲಗಿರ್ದವು ೫—೬೪

೨೬

ದೀರ್ಘಮನ್ವರ್ಥಕರ ಕುತ್ತಿಗೆಯ ಧರಿಸಿರ್ಪ
ಮೇಲ್ಮುಖೋಷ್ಟ್ರಗಳಧಿಕ ರಸವೊಸರುವ ;
ನವ್ಯೋಚ್ಚತರವೆನಿಪ ಮರದ ಪೊಸ ಚಿಗುರುಗಳ
ಲೋಲೋಷ್ಠಮೆಂತಂತು ಮೇಯ್ವುವಲ್ಲಿ ೫—೬೫

೨೭

ಅಭ್ಯಾಶವಸದಿಂದೆ ಬೇವಿನೆಲೆಗಳ ಜೊತೆಗೆ
ಎಂತೊ ಮುಖದೊಳಪೊಕ್ಕ ಮಾವುಚಿಗುರಂ ;
ಒಂಟೆ ತತ್‌ಕ್ಷಣ ಪಿಂದೆ ಮ್ಲೇಚ್ಛರೊಡ ನುಂಗಿರ್ದ
ವಿಪ್ರನಂ ಗರುಡನೊಲು ಹೊರಗುಗಿದುದು ೫—೬೬

೨೮

ರಾಜನವಸರ ಕಾಯ್ದು ಹೊರಗಿರ್ಪ ಜನಗಳಿಗೆ
ತತ್ಕಾಲಚರಿತಮಂ ಸ್ಫುಟಗೊಳಿಸುವ ;
ಮೃದುವಚನವಂದಿಗಳು ಸ್ಪಷ್ಟಪದ ಪ್ರಕಟಾರ್ಥ
ಗೀತೆಗಳ ಪಠಿಸಿದರು ಗಟ್ಟಿಯಾಗಿ ೫—೬೭

೨೯

ಚೆಂಬಟ್ಟೆಯೌನ್ನತ್ಯ ಪಟಮುಂಟಪಗಳೆಸೆವ
ಸುತ್ತಲುಂ ಗಜಪಡೆಗಳಿಂ ತುಂಬಿದ ;
ಸಂಜೆವಿಸಿಲಿಂ ಪೊಳೆವ ಮೇಘಚಿತ್ರಿತಗಗನ
ಸಿರಿಯನನುಕರಿಸುವುದು ಹರಿ ಶಿಬಿರವು ೫—೬೮

೩೦

ಸೈನ್ಯಮಾಕ್ರಮಿಸಿರ್ಪ ಗಿರಿಪತಿಯು ವಿಹರಿಸುವ
ಗಜಭಗ್ನತರುರವದೆ ಶ್ರೀಪತಿಯನು;
" ಗಿರಿಯೆತ್ತಿ ಪೆಸರಾಂತ ನೀನಧಿಕ ಪಿರಿದೆನಿಪ
ನನ್ನೇಕೆ ತುಳಿವೆ " ಎಂದೇಡಿಸುವುದು ೫—೬೯

೩೧

ಋತುವರ್ಣನಂ:—

ಬಳಿಕ ಗಿರಿಯೊಳು ರಮಿಸೆ ಬಯಸಿರ್ಪ ಸಜ್ಜನರ
ವಿಪದಂತಕಾರ ಹರಿ ಸೇವಿಪುದಕೆ:
ಒರ್ಮೆಯೇ ಋತುಗಣವು ಪದವಿಟ್ಟು ದಿಶೆಯೊಳಗೆ
ನಿಜವೃಕ್ಷಪ್ರಸವ ಸಿರಿಯೌಚಿತ್ಯದಿಂ ೬—೧

೩೨

ವಸಂತಋತು:—

ಹರಿಯು ಪೊಸಚಿಗುರಿಸೆವ ಮುತ್ತುಗದ ಬನಗಳಿಂ
ಕುಸುಮರಜಮಿಡಿಕಿರಿದ ತಾವರೆಗಳಿಂ;
ತಾಂತ ಮೃದುಪಲ್ಲವದ ಸುರಭಿ ಸುಮವೃದ್ಧಿಯಿಂ
ಪೊಳೆವ ಋತುರಾಜನಂ ಕಂಡನಿದಿರೊಳ್. ೬—೨

೩೩

ಮುಂಗುರುಳ ಚದುರಿಸುತೆ ಹರಿಣಾಕ್ಷಿಯರ ಹಣೆಯ
ಬೆವರ ಹನಿಯಾರಿಸುತೆ ಮಂದಪವನಂ;
ಮಡುವುಗಳ ಕಿರುತೆರೆಯ ಭೇದಿಸುತೆ ವಿಕಸಿಸಿದ
ನೈದಿಲೆಯ ನಲುಗಿಸುತೆ ಬೀಸಿತಾಗ. ೬—೩

೩೪

ಶೈಲವನಗಳನೆಲ್ಲ ಕಂಗೊಳಿಸಿ ಪಥಿಕರಂ
ಸಂತಾಪಗೊಳಿಸುತಲಿ ಮುತ್ತೆ ಮುತ್ತೆ;
ಅರಳಿರ್ಪ ಮುತ್ತುಗದ ಸುಮರಾಶಿಯಿಂ ಮಧುವು
ದಾವಾಗ್ನಿ ಶೋಭೆಯಂ ತಳೆದಿರ್ದುದು. ೬—೨೧

೩೫

ಗ್ರೀಷ್ಮ:—

ಬಾಗೆ ಪೂ ಧೂಳಿಗಳ ಕಾಂತಿಗಳ ರವಿತುರಗ
ರೋಮಸಮರುಚಿಯಾಂತು ಕಂಗೊಳಿಸಲು;
ಪೊಸಮಲ್ಲಿಗೆಯ ಸುಮಕೆ ಸೌರಭವ ಚಿರಕಾಲ
ವೆಸಗುತಲಿ ಗ್ರೀಷ್ಮರ್ತು ಪಡವಿಟ್ಟುದು. ೬–೨೨

೩೬

ವರ್ಷರ್ತು:—

ಪೊಳೆವಚಲ ವಿದ್ಯುತಿನ ನಯನದಿಂ ಬಹುಬಾರಿ
ಅಗಲಿತೋರುಪಯೋಧರಗಳ ಧರಿಸಿ;
ಮೇಘ ಪಂಕ್ತಿಯುವಿರಾಗ ನಿಜಸಮಯ ವೀಕ್ಷಿಸದೆ
ಕಾಂತನಂ ಸಾರ್ವವೊಲು ಗಿರಿಗೈದಿತು. ೬–೨೫

೩೭

ಬಿರುಗಾಳಿಯಿಂ ಚಲಿಪ ಮೇಘದಿಂ ಚಣಕಂಡು
ಕಾಣದಿಹ ಮಿಂಚುಗಳು ಪವನನಿಂದೆ;
ಚಲತರುಗಳಿಂ ಕಂಡು ಕಾಣದಿಹ ಪೊಸ ಹೊಂಗೆ
ಗೆಣೆ ನಭದ ತರುಗುಚ್ಛದಂತೆಸೆವುವು. ೬–೨೮

೩೮

ಬೆಂಗದಿರ ಕರಗಳಿಂ ಕತ್ತಲೆಯ ಲೋಕದಲಿ
ಗಗನದಲಿ ಮೇಘಮಯ ತಮವುಳಿಸಿದಂ;
ತಾವರೆಯ ಪಂಕ್ತಿಯಲಿ ನಿದ್ರೆ ತಮವಳಿಸಿದಂ
ರಿಪು ಮಹಿತರಿಂದೆಲ್ಲಿ ನಶಿಸದಿಹನು? ೬–೪೩

೩೯

ಶರತ್:—

" ಉರು ಬಲಾಬಲಗಳಂ ಸಮಯಮೇ ಮಾಳ್ಪುದೆಂ "
ದೆಲ್ಲರಿಗೆ ಪೇಳ್ವವೊಲು ಶರದಿಯೊಳಗೆ;
ಪರುಷವಾಗಲ್ ನವಿಲ ದನಿ, ಹಂಸರವಗಳುಂ
ರಮಣೀಯತೆಯನಾಂತು ರಾಜಿಸಿದವು. ೬–೪೪

೪೦

ಹೇಮಂತ:—

ಗಜಪತಿಯ ಪರಿಮಿತಿಯ ನದಿಗಳಂ ಹಿಮಗೊಳಿಸಿ
ಹೇಮಂತ ಪವನನೀ ಪರ್ವತದಲಿ;
ಪಥಿಕರಮಣಿಯರಮಲ ಕಂಗಳೊಳಗನುತಾಪ
ಸಲಿಲ ಸಂತತಿ ಬಿಂದು ಮೂಡಿಸುವನು. ೬—೫೫

೪೧

ಶಿಶಿರರ್ತು:—

ಬರಗು ಬಳ್ಳಿಯ ಪೂವನಳಿಸುತೆ ಮದಮತ್ತ
ಪೆಣ್ದುಂಬಿ ಝೇಂಕೃತಿಯ ಮೊಳಗಿಸುತಲಿ;
ಮುನಿದಗಲಿ ಕಾದಲಗೆ ಕಾತರಿಪ ಯುವತಿಯರ
ಗದರಿಸಿತು ಬನಗಳಲಿ ಶಿಶಿರಾನಿಲಂ ೬—೬೨

೪೨

ಬಲವಂತನಾದರುಂ ಕಾಲವಶದಿಂ ಶತ್ರು
ಪ್ರಬಲಿಸಲು ದೌರ್ಬಲ್ಯಮಾಂಪನಲ್ತೆ !
ಮಾಘದಲಿ ಮೃದುಕಿರಣಮಾಂತೆಸೆವ ಸೂರ್ಯನುಂ
ಘನ ಹಿಮವ ಮರ್ದಿಸಲಶಕ್ತನೆನಿಕುಂ. ೬—೬೩

೪೩

ಇಂತು ಸುಮಭಾರದಿಂ ತರುಗಳಂ ಬಾಗಿಸುವ
ಮುಗಿಸನೆಯೆ ಮಧುಪ ಮೃದು ಝೇಂಕೃತಿಗಳಂ;
ತಪ್ಪಲಲಿ ಸಕಲಋತು ಧರಿಸಿದಗದಲಿ ಹರಿಯು
ವಿಹರಿಸಲು ಪ್ರೇರಿಪಂ ನವಿಲದನಿಯಿಂ ೬—೭೯

೪೪

ವನವಿಹಾರಂ:—

ಬಳಿಕ ಹರಿ ಗಿರಿಯೊಳಗೆ ಋತುಗಳಿಂ ಶೋಭಿಸುವ
ಬನಸಿರಿಯ ದರ್ಶಿಸಲು ನಿರ್ಗಮಿಸಿದಂ;
ಪೂಜಿಸುವ ಭಾವುಕರ ಸೇವಾಪ್ರಯಾಸಮಂ
ಹಿರಿಯರೆಂದಿಗು ವ್ಯರ್ಥಗೊಳಿಸರಲ್ತೆ ! ೭—೧

೪೫

ಸೂರ್ಯಾಸ್ತವರ್ಣನಂ:—

ಬಳಿಕ ಬೆಂಗದಿರ ನಿಜ ತೇಜಸಿನ ಸಂಪದದ
ತಾಪಾತಿರೇಕಮಂ ಸಹಿಸನೆನಲು;
ಪಡುಗಡಲ ಸಲಿಲದಲಿ ಧುಮುಕಲೆಳಸುತೆ ಭರದೆ
ಅಸ್ತಾದ್ರಿಗಿಳಿಯಲುರೆ ಧಾವಿಸಿದನು. ೯–೧

೪೬

ಪರಿಣತಿಯನಾಂತಿರ್ಪ ವಿರಲತಾಪಚ್ಛವಿಯ
ಸುತ್ತಲುಂ ಬಿಳುಪು ತಳೆದಭ್ರ ಶಿರದಿಂ;
ನಸುಬಿಸಿಯ ದೇಹದಿಂ ಪರಿಶಾಂತ ರವಿನಯನ
ದಿವಸವೃದ್ಧನ ತೆರದೆ ಶಿಥಿಲವಾಯ್ತು. ೯–೩

೪೭

ಸಂಜೆ ತಂಗಾಳಿಯಿಂ ಮೆಲ್ಲನಲುಗುವ ಲತೆಯ
ಅಂಗುಳಿಗಳಿಂ ತಮ್ಮ ಗೂಡುಗಳಿಗೆ;
ಕರೆವವೊಲು ಕಂಗೊಳಿಪ ಮರಗಳಿಗೆ ಖಗಕುಲಂ
ಉತ್ತರಿಪುದೆನೆ ತುಮುಲ ದನಿಗೈದುದು. ೯–೪

೪೮

ಸಂಜೆ ಹತ್ತಿರವಾಗೆ ರವಿಯ ತನು ಕರಜಾಲ
ತಕ್ಷಣಂ ಗಿರಿಶಿಖರಮೇರಿರ್ದುದು;
ನಾಶವಾಗುವ ಸಮಯ ಸನ್ನಿಹಿತವಾದರುಂ
ಸಜ್ಜನರಿಗುಚ್ಚ ಪದವುಚಿತಮಲ್ತೆ ! ೯–೫

೪೯

ಪ್ರತಿಕೂಲವಾಗೆ ವಿಧಿ ಬಹುಸಾಧನತ್ವಮುಂ
ಲೋಕದಲಿ ನೈಷ್ಫಲ್ಯಮಾಂಪುದಲ್ತೆ !
ಕರಸಾಸಿರಂಗಳುಂ ಕೆಳಬೀಳ್ವ ದಿನಪತಿಯ
ಮೇಲೆತ್ತಲವಲಂಬಮಾಗಲಿಲ್ಲಂ. ೯–೬

೫೦

ಬೆಂಗದಿರಗೆದುರಾಗಿ ಮುಳುಗುವರೆಗುಂ ಚಿರವು
ಎವೆಯಿಕ್ಕದವಧಾನ ದೈನ್ಯತಳೆದು;
ಪೊರಬರುವ ಮಧುಪಾಶ್ರು ಜಲಕಮಲ ನಯನಗಳ
ನಲಿನಿಯನುತಾಪದಿಂ ಕಣ್ಮುಚ್ಚಿತು. ೯—೧೧

೫೧

ರುಚಿಧಾಮ ಪತಿಯು ಪರಲೋಕಮಂ ಪೋದಿರಲು
ವಿಮಲಕಾಂತಿಗಳನಲನೊಳಪೊಕ್ಕವು;
ಇಲ್ಲದೊಡಮವನೆ ಜನ್ಮಾಂತರದೆ ಪತಿಯಾಗಿ
ಸುಲಭದಿಂ ದೊರೆಯುವನೆ ಸಾಧ್ವಿಯರಿಗೆ? ೯—೧೩

೫೨

ಅಂಧಕಾರ:—

ತನ್ನ ನೆರಳನೆ ಕಂಡು ಕಡಲಿನೊಳ್ ರವಿಸಿಂಹ
ರೋಷದಿಂದೆನೆ ಭರದೆ ಬಿಳ್ದಬಳಿಕ;
ಕರಿಗಳೊಲು ಕರ್ಪಿಡಿದ ಕತ್ತಲೆಯ ಮೊತ್ತಮುಂ
ಸುತ್ತಲುಂ ಲೋಕದೊಳಗಾವರಿಸಿತು. ೯—೧೮

೫೩

ಚಂದ್ರೋದಯ:—

ಬಳಿಕ ಬುವಿಭಾಗದಿಂ ಹೊರಬಂದ ಶೇಷಫಣಿ
ಮಣಿಯ ಸಾಸಿರಕಾಂತಿ ಪಟಲಮೆನಲು;
ಚಂದಿರನ ತೊಳಪಾಂಶು ಜಾಲಮಾವರಿಸುತಲಿ
ಭೂಷಿಸಿತು ಮಾಹೇಂದ್ರ ದಿಗ್ಭಾಗಮಂ. ೯—೨೫

೫೪

ಶುಭ್ರ ಕಾಂತಿಗಳಿಂದೆ ತುಂಬಿದುದಯಾಚಲಕೆ
ದೂರಮಿಹ ಶಶಿಬಿಂಬ ಮಂದಮಾಗಿ;
ಅಪ್ರಕಾಶಿತ ದಶನ ಶಕ್ರದಿಶೆ ಮುಖದಂತೆ
ಸುವಿಲಾಸ ಹಾಸದೊಲು ಕಾಣಿಸಿದುದು. ೯—೨೬

೫೫

ಪೂರ್ವದಿಶೆಯಗ್ರದಲಿ ಹಿಮಕರನ ಕಿರಣದಿಂ
ನಸುಭೇದಿಸಿರ್ದ ತಿಮಿರೌಘ ಜಟೆಯಿಂ;
ಸಟೆಯಲ್ಲಮೀ ಗಗನ ಜನಗಳಿಗೆ ಗಣಪತಿಯ
ಮೂರ್ತಿಯೊಲು ಕಾಣಿಸಿತು ಚಣಕಾಲವು. ೯—೨೭

೫೬

ನವಚಂದ್ರಿಕಾ ಕುಸುಮ ಮುಡಿದು ಕತ್ತಲೆಕೇಶ
ಪಾಶಮಂ ಧರಿಸಿರ್ದ ಶಕ್ರದಿಶೆಯು;
ಮುಖದೊಳಿಹ ಹಣೆಯಂತೆ ರಾಜಿಸುವ ಶಶಿಖಂಡ
ಮಲಯಜದೆ ನಾಂದವೊಲು ಕಂಗೊಳಿಸಿತು. ೯—೨೮

೫೭

ಹಿಮಕಿರಣ ಮೊದಮೊದಲು ಕಲೆಮಾತ್ರ ತಳೆದಿರ್ದು
ಬಳಿಕರ್ಧ ತರುವಾಯ ಪೂರ್ಣನಾದಂ;
ತೇಜಸ್ವಿಯಾದರುಂ ಕ್ರಮವಾಗಿ ವರ್ಧಿಪಂ
ಸಹಸೋಪಚಯ ಸಾಧ್ಯಮಲ್ತು ಜಗದೊಳ್ ೯—೨೯

೫೮

ಪ್ರಭಾತವರ್ಣನಂ:—

ಅಂಶುಮಾಲಿಯು ನೇತ್ರ ವಿಷಯುವೊಂದುವ ಮೊದಲೆ
ನಿಖಿಲ ತಮಮರುಣನಿಂ ನಷ್ಟವಾಯ್ತು;
ಪರರ ಪರಿಭವಿಪ್ಪೋರು ತೇಜಮಂ ಬೆಳಗುವರ
ಮುಂದಾಳುವುಂ ಶತ್ರು ವಧಿಸಬಲ್ಲಂ. ೧೧—೨೫

೫೯

ಕಮಲಗಳ ನಲುಗಿಸುತೆ ಲತೆಗಳಂ ಚದುರಿಸುತೆ
ಕೊಡವಿ ತರುಸುಮಗಳಂ ಬನಬನಗಳೊಳ್;
ಎಲ್ಲಿ ನಿಲದಿರ್ದರುಂ ಗಾಳಿ ಮಧುಸುಮಗಂಧ
ಗಹಗಳಲಿ ಸ್ಥಿರಮಾಗಿ ನೆಲೆಸಿರ್ದುದು. ೧೧—೨೭

೬೦

ಚಾಜಿರ್ಪ ಹುರಿಗಳೊಲು ದೀರ್ಘ ಕಿರಣಗಳಿಂದೆ
ಚಪಲ ಪಕ್ಷಿಗಳೆಸೆಪ ಕಲನಿನದದಿಂ;
ದಿಶೆಗಳಿಂ ಸೇದುತಿಹ ಪಿರಿದು ಕೊಡದೊಲು ಭರದೆ
ಜಲಮಧ್ಯದಿಂ ರವಿಯು ಮೇಲೊಯ್ವನು. ೧೧–೪೪

೬೧

ಉದಯಗಿರಿ ಪ್ರಾಂಗಣದೆ ಚರಿಸಿ, ಪದ್ಮಿನಿಯರುಂ
ಕಮಲ ಮುಖಹಾಸಮಂ ನೋಡುತಿರಲು;
ಪಕ್ಕಿ ದನಿಯಿಂ ಕರೆವ ಗಗನಾಂಕದಲಿ ಚಾಚಿ
ಕರಗಳಂ ಕ್ರೀಡಿಪಂ ಬಾಲರವಿಯು. ೧೧–೪೬

೬೨

ಚಣ ಕುಳಿತು ಪೀಠದಲಿ ಪಾದಗಳ ಬುವಿಗಿಳಿಸಿ
ನಮಿಪ ನಲ್ಮೆಯ ಜನರ ನೋಡಿ ಶೀಘ್ರಂ;
ಭುವನತಲಮೆಲ್ಲಮಂ ವೀಕ್ಷಿಸಲು ಸಪ್ತಾಶ್ವ
ಗಿರಿಶಿಖರ ಪೀಠದಿಂ ಮೇಲೆದ್ದನು. ೧೧–೪೮

೬೩

ಬಳಿಕಿಂತು ಬೆಳಗಿನಲಿ ತೇರ್ಕುದುರೆ ಗಜವೇರಿ
ನೃಪಗಣಂ ತೋರಣದ ಹೊರವಳಯದೊಳ್;
ಪ್ರಸ್ಥಾನಕುಚಿತ ವರವೇಷಭೂಷಣ ರಚಿಸೆ
ಕ್ಷಣವಿಲಂಬಿತ ಹರಿಯ ಕಾಯುತಿರ್ದರ್. ೧೨–೧

೬೪

ಸ್ವಕ್ಷಂ ಸುಪತ್ರಂ ಕನಕೋಜ್ವಲದ್ಯುತಿಯ
ಜವದೆ ನಾಗಂಗಳಂ ಜಯಿಸಿ ಮೆರೆವ;
ಏರಿ ಘನತಾರ್ಕ್ಷ್ಯವಮಂ ಗಗನದೊಲು ಬುವಿಯಲ್ಲಿ
ತಡೆಯಿರದ ಪಥದೆ ಹರಿ ನಡೆದ ಸುಖದಿಂ. ೧೨–೨

೬೫

ಕರದೊಳೆಸೆಯುವಖಂಡ ಸಿರಿಚಕ್ರಶಾಲಿಯುಂ
ದ್ವಿಜೇಂದ್ರ ಕಾಂತನಂ ಸಿರಿವಕ್ಷನಂ;
ಸತ್ಯಾನುರಕ್ತನಂ ನರಕರಿಪು ಶಾಂರ್ಙ್ಗಯುಂ
ನೃಪರುಮಿಾ ಗುಣಗಳಿಂದನುಸರಿಸಿದರ್. ೧೨–೩

೬೬

ಸೇನಾಭಿಘಾತದಿಂ ಮೇಲೆದ್ದು ಹತ್ತಿರದ
ರವಿಕಿರಣದಿಃ ಕಾಯ್ದುದೆನಲು ರಜವು;
ರಮ್ಯ ಕಲ್ಹಾರಗಳ ಗಾಳಿಯಿಂ ಕಂಪಿಸುತೆ
ಜಮುನೆ ಜಲದೊಳು ಬಿಳ್ದುದೆದುರಿನಲ್ಲಿ ೧೨–೬೬

೬೭

ರವಿಕುವರಿಯಾದರುಂ ತಂಪಾದ, ಯಮಭಗಿನಿ-
ಯಾದರುಂ ಜನರನುಜ್ಜೀವಿಸುತಲಿ;
ಕೃಷ್ಣೆಯಾದರು ಶುಭ್ರವಿಮಲತೆಯನೆಯ್ದಿಸುವ
ಜಲದೆ ಜಮುನೆಯು ಪಾಪ ಕಳೆವಳಲ್ತೆ! ೧೨–೬೭

೬೮

ಪೊಂಗೆ ಪೂ ಕರ್ಪಿಡಿದ ಸಂಪೂರ್ಣ ದೀರ್ಘತಮ
ಜಮುನೆ ಶೀಘ್ರದಿ ಬುವಿಯನಾಕ್ರಮಿಸಲು;
ಉದ್ಯುಕ್ತಮಾಗಿರ್ಪ ಪೆರ್ಬಲಾಂಬುಧಿ ಮುಂದೆ
ದಡದಂತೆ ಚಣಕಾಲ ರಾಜಿಸಿದುದು. ೧೧–೭೦

೬೯

ಎರಡುಕಡೆ ಇಳಿಬಿಟ್ಟ ಲಂಗರಿನ ಪಾದದಿಂ-
ದೆನೆ ಬೇಗ ಗಮಿಸುತಿಹ ನಾವೆಯಿಂದೆ;
ದೋಣಿ ಭ್ರಮಿಸಲು ಹೆದರಿ ಲಲನೆಯರ್ ಕಣ್ಮುಚ್ಚಿ
ಪಿಡಿದಿರ್ದ ಜನ ಜಮುನೆ ದಾಂಟುತಿರ್ದರ್ ೧೨–೭೧

೭೧

ದಾಂಟಲಸದಳವೆನಿಸುವಾ ಮಹಾ ಜಮುನೆಯಂ
ಪಂಥದೊಲು ಶೀಘ್ರದಿಂ ದಾಂಟ ಮುಂದೆ;
ಕೊಂಬಿನಿಂ ಕೆರೆದೆಸೆವ ಬುವಿಯ ಭಾಗಂಗಳುಂ
ಗೂಳಿಗಳ ಗುಟುರುಗಳ್ ಮೆರೆದಿರ್ದವು ೧೨–೭೪

೭೧

ತರಿಪ ಯದುನೃಪಬಲದೆ ಬೈತಲೆಯ ತೆಗೆದಿರ್ಪ
ಕೋಣಕೊಂಬಿನ ಕಾಂತಿ ವ್ಯಾಪಿಸಿರ್ಪ;
ಸಿಂದೂರಿತಾನೆಗಳ ಶೇಖರಾಂಕಿತಮೆನಿಪ
ನದಿಯು ಬುವಿವೇಣಿಯೊಲು ದೀರ್ಘಮೆಸೆಗುಂ ೧೨–೭೫

೭೨

ಗೂಳಿಕೊಂಬುಗಳಿಂದ ಪೆಳಗಿಸಿದ ಪೆರ್ದಡದ
ದಂತಿಚರಣದಿ ಸೆಳೆದ ನಕ್ರಂಗಳ;
ರಥಗಳಿಂ ಕಲಕಿರ್ಪ ಜಲದ ಜಮುನೆಯ ಬೇಗ
ದಾಂಟ ಶ್ರೀಪತಿ ಸೇನೆ ಮುನ್ನಡೆದುದು ೧೨–೭೬

ಇಂದ್ರ ಪ್ರಸ್ಥಾಭಿಗಮನಂ

೧

ಯಮುನೆ ದಾಂಟಿದ ಬಳಿಕಮೀಗ ಯಮುನಂದನಂ
ಹರಿಬರವನರಿದನೆಂದೆನ್ನಲೇಕೆ?
ನಿಜಪುರದೆ ನಿರ್ಗಮಿಸಿದಂದಿನಿಂ ಪಗಲಿರುಳ್
ಹರಿಯ ವೃತ್ತಾಂತಗಳ ನರಿಯುತಿರಲು

೨

ಯದುಪತಿಯ ಬರವಿನಿಂದುಸಿದಾನಂದದಿಂ
ದುಬ್ಬಿರ್ದ ನೃಪನ ಪುರ ಹಿಡಿಸದೆನಲು;
ಅನುಜರಿಂದೊಡಗೊಂಡು ತತ್‌ಕ್ಷಣಂ ಶ್ರೀಕೃಷ್ಣ
ಗಭಿಮುಖಂ ಹೊರವಂಟ ಧರ್ಮತನಯಂ

೩

ರಭಸದಿಂ ಬಾಜಿಸುವ ಕುರುಸೈನ್ಯದಂದುಭಿ
ಧ್ವನಿಗಳಿಂ ಜನರ ಕಿವಿ ಕಿವುಡಾಗಲು;
ವಕ್ತೃಗಳ ವಕ್ತವ್ಯ ಶೇಷಾರ್ಥಮೆಲ್ಲಮಂ
ಕೈಸನ್ನೆಯಿಂ ಪೇಳಲನುವಾದರು

೪

ವೇಗದಿಂ ಸುತ್ತುತಿಹ ಕನಕಚಕ್ರಾಂತ್ರಗಳ
ಬಿರುಗಾಳಿ ಚಲನೆಯಿಂ ತಮ್ಮತಮ್ಮೊಳ್ ;
ಪ್ರೋಲ್ವ, ಭೂಧೂಲಿಯುಂ ಕೇತುವಿಹ ತೇರುಗಳ್
ಇಡಿಕಿರ್ದವಾ ನೃಪರ ಸುತ್ತಮುತ್ತು

೫

ಕರತಾಡನದೆ ನುಡಿವ ತಮಟೆಯೊಲು ಕುದುರೆ ಕಾ-
ಲ್ಗೊರಸಿಂದೆ ನೆಲವೆಲ್ಲ ದನಿ ಗುಡುಗುತಿರೆ;
ಮೇಘಗಂಭೀರ ಗಜ ಘೀಂಕಾರದಿಂ ನಲಿವ
ನವಿಲುಗಳ್ ಕೂಜನದೆ ನರ್ತಿಸಿದವು

೬

ಯದುಪತಿಯ ಕುರುಪತಿಯ ಸೇನೆ ಸೌಹಾರ್ದದಿಂ
ದೈಕ್ಯತೆಯನಾಂತಿರ್ದ ಸಮಯದೊಳಗುಂ :
ಗಜಗಳಲಿ ಚಣಚಣಕೆ ಕಲಹಮುದಿಸುತಲಿತ್ತು
ಮದಗೂಢಮತಿಗೆ ಸುವಿವೇಕಮುಂಟೆ ?

೭

ಹರಿಯ ದೂರದೆ ಕಂಡು ಹರ್ಷದಿಂ ರಥದಿಂದೆ
ಕೆಳಗಿಳಿಯಬೆಳಸುತಿರೆ ಧರ್ಮಸೂನು ;
ನೃಪತಿಗಿಂ ಮೊದಲೆ ಹರಿ ತಾನೆ ರಥದಿಂದಿಳಿದು
ಸಡಗರದೆ ವಿನಯಮಂ ಪ್ರಕಟಿಸಿದನು

೮

ಸರ್ವಲೋಕೋತ್ತರಂ ಭುವನೈಕವಂದ್ಯನುಂ
ತಾನೆ ಗೌರವಮೆಸಗಿ ಹರಿ ಎದುರಿನೊಳ್ ;
ತೋರಮುತ್ತಿನಹಾರ ಪರಿಪುಂಜವಪುವಿಂದೆ
ಸೋದರತ್ತೆಯ ಸುತಗೆ ವಂದಿಸಿದನು

೯

ಮುಕುಟಕಿರಣದೆ ಧೂಳಿ ರಂಜಿಸುತೆ ನಿಜಶಿರದೆ
ನೆಲಸಾರ್ವಮೊದಲೆ ನೃಪ ಮುಂದೆ ನಮಿಪ
ಹರಿಯ ಭುಜಪಂಜರದೆ ಕ್ರಮಸಿಯುಮ ಲೆಕ್ಕಿಸದೆ
ರಭಸದಿಂದೆತ್ತಿ ಬಿಗಿಯಪ್ಪುತಿರ್ದಂ

೧೦

ಶ್ರೀಪತಿಯ ಕದದಗಲಡಿದೆಯ ಯಮನಂದನನ
ಕಿರಿದೆನಿಪ ವಕ್ಷದೊಳಗಡಗಲಿಲ್ಲ ;
ಆದರುಂ ಚಾಚಿರ್ಪ ದೀರ್ಘ ಭುಜಯುಗಲದಿಂ–
ದಾಲಿಂಗಿಸಿದ ಹರಿಯ ಧರ್ಮತನಯಂ

೧೧

ನಾಭಿಕಮಲವ ತೊರೆದು ವಕ್ಷದಲಿ ಚಿರಕಾಲ
ನೆಲೆಸಿರ್ಪ ಸಿರಿಯು ಕುರುರಾಜನೆಸಪ ;
ನಿರ್ದಯಾಲಿಂಗನದ ಭಯದಿಂದ ಮುರವೈರಿ
ಮುಖಮಧ್ಯವಡರಿದೊಲು ರಾಜಿಸಿದುದು

೧೨

ಬಲಿಬಂಧನದೊಳತುಲ ಛಲವಾಮನನುಮಾಗ
ವಿನಯ ವಾಮನನಾಗಿ ಮೆರೆವ ಹರಿಯು ;
ವೀರ್ಯದಿಂ ಗೆಲ್ದಸುರ ಕಲ್ಪಸುಮ ಯಶದಿನೆನೆ
ಸೌರಭಾನ್ವಿತ ಶಿರವ ನೃಪ ಮೂಸಿದಂ

೧೩

ಹರಿಯ ಗಾಢಾಲೀಗನವು ಸಿಥಿಲಮಾದರುಂ
ಸುಖದೆ ಪುಳಕಿತರೋಮಕೂಪಮಿರ್ಪ ;
ಕುರುಪತಿಯ ದೇಹಲತೆ ವಿಕಸಿಸಿದ ನೀಪಸುಮ
ಬೃಂದಕಮನೀಯತೆಯ ತ್ಯಜಿಸಲಿಲ್ಲ

೧೪

ಸರ್ವಜನ ಸನ್ಮಾನ್ಯ ಶೌರ್ಯದಿಂದಸುರರಂ
ಕಿತ್ತೆಸೆದು ಹೃಷ್ಟನಹ ಶ್ರೀಕೃಷ್ಣನು ;
ಹರ್ಷವಿಕಸಿತನೇತ್ರ ಧರ್ಮತನಯಾನುಜರ
ನುಚಿತದಿಂದುಪಚರಿಸಿ ಮನ್ನಿಸಿದನು

೧೫

ಸಮತೇಜದಾ ಶಿಲಾಘನರ ಘನಪಕ್ಷರುಂ
ದೀರ್ಘತರ ಬಾಹು ಶಾಲಿಗಳುಮೆನಿಪ ;
ನೃಪತಿಗಳು ನೃಪರೊಡನೆ ವಜ್ರಘಾತಕೆ ಮೊದಲು
ಗಿರಿಗಳಂ ಗಿರಿಗಳೊಲು ತಬ್ಬುತಿರ್ದರ್

೧೬

ಗಜಕುಂಭದೊಲು ತುಂಗಮನ್ಯೋನ್ಯಕುಚಭಾರ–
ದಿಂ ದೂರನೂಂಕಿದುದರಾಳಿ ಮೆರೆಯೆ ;
ಹರ್ಷಪುಳಕಿತಗಂಡಫಲಕಗಳ ಯದುಕುರು–
ಸ್ತ್ರೀಯರಾಲಿಂಗಿಸಿದರನ್ಯೋನ್ಯರಂ

೧೭

ತೇರ್ಕುದುರೆ ಕಾಲಾಳು ಕರಿಣಿಗಳ್ ಬೆರೆದಿರ್ಪ
ಆ ಸೈನ್ಯಮನ್ಯೋನ್ಯ ಸಂಧಿಸಿರಲು ;
ಕರಿಗಳಂ ದೂರದೊಳು ಬೇರೆ ನಿಲಿಸಿರ್ದರಹೊ !
ಮಹಿತಚೇಷ್ಟಿತಮೆಲ್ಲ ಜನವಿದೂರಂ !

೧೮

"ರಥವನಾರೋಹಿಪುದು" ಎಂದು ಧರ್ಮಜ ನುಡಿಯೆ
ಕಪಿಕೇತನನ ಕರವ ಹಿಡಿದು ಹರಿಯು ;
ಧನಪತಿಯ ಕೈವಿಡಿದು ಸುರಪತಿಯು ಮೇಘಮಂ
ಏರುವೊಲು ತೇರನಾರೋಹಿಸಿದನು

೧೯

ರಥವೇರಿ ಪುರದೆಡೆಗೆ ಗಮಿಸುತಿಹ ಮುರವೈರಿ-
ಯನುರಾಗಭಾವಿತಂ ಧರ್ಮತನಯಂ ;
ತ್ರಿಪುರಹರನಿಗೆ ಬ್ರಹ್ಮ ಸಾರಥ್ಯಗೆಯ್ದವೊಲು
ಹರಿರಥದ ಸಾರಥ್ಯಮಾಂತನೊಲವಿಂ

೨೦

ಹರಿಗೆ ಬಹು ನವುರಾದ ಜಾಲಂಧ್ರದಲಿ ಸರಿವ
ಶಶಿಕಿರಣ ಪುಂಜದೊಲು ಕಂಗೊಳಿಸುವ;
ಚಾಮರವನೊಲವಿಂದನನಿಲಜಂ ಬೀಸಿದನು
ಕಡಲೆಡೆಗೆ ಫೇನಮಂ ಪೇರಿಪಂತೆ

೨೧

ಅರಳಿರ್ಪ ನಲ್‌ಕಡಲೆ ಹೂವಿನೊಲು ನೀಲಾಂಗ
ಜಗದೀಶನಿಗೆ ತೋರತಾರೆಛವಿಯ;
ಯಮುನಾತಟದಿ ಚರಿಪ ಹಂಸಮಂಡಲ ಧವಲ
ಛತ್ರಮಂ ಜಿಷ್ಣು ಪಿಡಿದಿರ್ದ ನೊಲವಿಂ

೨೨

ಅರ್ಕಾನ್ಯಮಿತರಗ್ರಹವೆರಡರಂತರವಿರ್ಪ
ಧುರಧುರಾಯೋಗಯುತ ಚಂದ್ರನಂತೆ;
ಅನಿಲಸುತನಿಂದ್ರಸುತರಂತರದೆ ಕಂಗೊಳಿಪ
ಚಕ್ರಿ ರಾರಾಜಿಸಿದನತಿಶಯದೊಳು

೨೩

ಬಳಿಕ ವಶಿ ನೃಪವರನನಯ ನಯಗಳೊಲು ನಿಯತ
ಯತಿಯ ಯಮನಿಯಮದೊಲು ವಿಜಿಗೀಷುವಂ;
ರವಿಮಾರುತರ ತೆರವೆ ನಕುಲ ಸಹದೇವರುಂ
ಹರಿಯ ಹಿಂಬಾಲಿಸಿದರೊಲವಿನಿಂದೆ

೨೪

ನಿಷ್ಕಪಟ ಸಂಭ್ರಮ ಪ್ರಕಟಪರಭಕ್ತಿಯುತ
ದುಷ್ಟಶಿಕ್ಷಕ ಮುದಿತ ಪಾಂಡುಸುತರು;
ದಿವಿಜವೈರಿಯ ಬಳಿಯ ಸೇರಿದರು ವಿನಯದಿಂ
ಗುರುಸನಿಹಮಂ ಸಾರ್ವ ಶಿಷ್ಯರಂತೆ

೨೫

ಗಂಗೆ ಜಮುನೆಯರಂತೆ ಸೈನ್ಯವೆರಡೊಂದಾಗಿ
ಇಂತು ಪೊರಮಡುತಿರಲು ಗಗನದೊಳಗೆ
ಸುರಯಾನಗಳು ಪರಮ ಹರ್ಷದಿಂ ಧ್ವನಿಪುವೆನೆ
ಮೊಳಗಿದುದು ದುಂದುಭಿಧ್ವಾನಮಾಗ

೨೬

ನೃಪನ ಮುಖಮಂ ನೋಡೆ ಬಂದಿರ್ಪ ಭೂಭುಜರ
ಬಲಗಳಿಂ ಸುತ್ತಲುಂ ಹೊರವಳಯದೊಳ್ ;
ರಿಪುಬಲವ ತಡೆವುವೆನೆ ನಿರ್ಮಿಸಿದ ಗೃಹಗಳಿಂ
ರಾಜಿಸುವ ಪತ್ತನವ ಕಂಡ ಹರಿಯು

೨೭

ಪ್ರತಿನಾದದಿಂ ದಿಶೆಗಳಂತರಾಳವ ತುಂಬಿ
ಪುರಗೋಪುರದ ಕಡೆಗೆ ಗಮಿಪ ಸೈನ್ಯ-
ಸಾಗರಂ ಹಿಮಗಿರಿ ಗುಹಾಮುಖೋನ್ಮುಖನಾಗಿ
ಪರಿವ ಸುರನದಿಪೂರದಂತೆಸೆದುದು

೨೮

ಬಹುಬಾರಿ ದೇಹಗಳ ಧರಿಸಿದಾ ಶ್ರೀಪುರುಷ
ನವಗೋಪುರಾಂತರದ ಪುರವನಾಗ ;
ನೃಪಪುತ್ರರೈವರಿಂ ಸಂತಸದೆ ಸಾರಿದಂ
ದೇಹಾಂತರವ ಜೀವನೈದುವಂತೆ

೨೯

ಹರನೇತ್ರವೀಕ್ಷಿಸದ ಸ್ಮರವಿಗ್ರಹದ್ಯುತಿಯ
ನ್ಮೈವೆಳಗಿನಿಂ ಪೊಳೆವ ಪುರುಷರಿಂದೆ ;
ಅಕ್ಷೀಣ ಪೂರ್ಣೇಂದು ಮುಖಿಯರಹ ಪೆಣ್ಗಳಿಂ
ರಾಜಿಸುವ ಪುರವ ಹರಿ ಪೊಕ್ಕನಾಗ

೩೦

ಬಳಿಕ ಪುರನಾರಿಯರು ಪಟಹದನಿ ಕರೆಗೇಳ್ದು
ಅಸುರ ವೈರಿಯನೋಳ್ಪ ಬಯಕೆಯಿಂದೆ ;
ಕೆಲಸವೆಲ್ಲಬಿಟ್ಟು ವೀಥಿವೀಥಿಗಳಲ್ಲಿ
ತವಕದಿಂ ಕಿಕ್ಕಿರಿದು ನೆರೆದಿರ್ದರು

೩೧

ಪೌರನಾರೀಚೇಷ್ಟಾವರ್ಣನಂ :—

ಪರಿಧಾನ ಸರಿಯುತಿರೆ ಕರದಿ ನೀವಿಯ ಪಿಡಿದು
ಅರ್ಧವಿರಚಿತ ಮಂಡನದೆ ಗಮಿಸುವ ;
ವನಿತೆಯರ ನೆರೆ ನೋಡಿ ಪಟಹ ಪಡಿನುಡಿಯಿಂದೆ
ಭಿತ್ತಿಯೊಳು ನಗುತಿತ್ತು ಸೌಧರಾಜಿ

೩೨

ತ್ವರೆಯಿಂದೆ ಬರುವಾಗ ವಕ್ಷದಲಿ ಒಡ್ಯಾಣ,
ಕೇಶದಲಿ ಓಲೆಗಳ, ನಾರಿಜನವು
ಜಘನದಲಿ ಕುಪ್ಪಸವ ಕುಚಗಳೆಡೆ ಪರಿಧಾನ
ಕೈಗೆ ಕುಂಡಲ ಧರಿಸಿ ಧಾವಿಸಿದರು

೩೩

ಸಿಂಗರಿಸುವಳ ಕರದೆ ಸೆಳೆದೊಂದು ಚರಣಮಂ
ಹಸಿಯರಗಿನಿಂ ದಾರಿ ಚಿತ್ರಮಾಗಲ್;
ಹರನರ್ಧತನು ಧರಿಸಿ ಗಮಿಪ ಗಿರಿಜೆಯ ತೆರದೆ
ರಸವಶದೆ ಬರುತಿರ್ದಳೋರ್ವ ಚದುರೆ

೩೪

ಸುವಿಶಾಲ ಜಘನದಲಿ ಹೊರಳಿ ದನಿಗುಡುತಿರ್ಪ
ಮೇಖಲಾಕುಲತುಂಗ ಸ್ವರ್ಣಸೌಧ-
ಸೋಪಾನವಡರುತಿರೆ ಕನಕ ನೂಪುರದನಿಯ
ವನಿತೆಯರ್ ಹತ್ತಿದರ್ ಹರ್ಮ್ಯತಲಮಂ

೩೫

ಹರಿದರ್ಶನವ ಬಯಸಿ ಕನಕ ಸೌಧದ ಕಿಟಕಿ-
ಯೊಳು ಪೊಳೆವ ಸುದೃಶ ಶುಚಿ ವದನಕಮಲಂ ;
ಉದಯಾದ್ರಿ ಕಂದರದ ವಿವರ ಮಧ್ಯದೊಳಿರ್ಪ
ಚಂದ್ರಮಂಡಲದಂತೆ ರಾಜಿಸಿದುದು

೩೬

ಉನ್ನತದ ನಿಜಭವನವಡರಿ ಸುಳಿಗಾಳಿಯಿಂ
ಚಲಿಪ ವಸ್ತ್ರಾಂಚಲದ ವಧುವೋರ್ವಳಿಂ ;
ಮಾಧವಂ ಬರುತಿರಲ್ ಬಾವುಟವ ತಳೆದಿರ್ದು
ಶೋಭಿಪೊಲು ರಂಜಿಸಿದುದಾ ನಗರವು

೩೭

ಶುಕ್ತಿಪುಟದಿಂ ಬಿಳ್ದ ಮೌಕ್ತಿಕಪ್ರಕರದೊಲು
ಕರಕಮಲಮುಕುಳದಿಂದೆರಚುತಿರ್ಪ ;
ಲಾಜಸುಮ ನಿಕರದಿಂ ಪ್ರತಿಗೃಹದೆ ವನಿತೆಯರ್
ಮುಚ್ಚಿದರ್ ನಲ್ಮೆಯಿಂ ಪ್ರಿಯಚಕ್ರಿಯಂ.

೩೮

ಹಿಮಮುಕ್ತ ಚಂದ್ರರುಚಿ ಪದ್ಮಸಹಿತನುಮೆನಿಸಿ
ದ್ವಿಜರ ಮುದಗೊಳಿಪ ಝಷಕೇತ ಜನಕಂ ;
ಸುಪ್ರಸಾದಿತ ಸುರಂ ಮಾಧವಂ ಬಹುದಿನಕೆ
ಪ್ರಮದೆಯರಿಗುತ್ಸವವನೇರ್ಪಡಿಸಿದಂ.

೩೯

ಗಿರಿಸುತೆಯ ಭಯದಿಂದೆ ಸ್ಫುಟವಾಗಿ ಮುಕ್ಕಣ್ಣ-
ನೀಪುರದ ನಾರಿಯರ ನೋಡನೆಂದು ;
ಭಯವುಳಿದ ಮದನನಿಂದಾಕ್ರಾಂತರಾದಿವರ
ಮಾಧವಂ ಚಣಕಾಲಮೀಕ್ಷಿಸಿದನು.

೪೦

ಪ್ರಳಯದಲಿ ಸಾಗರದೆ ಶಯಿಪಾವ ಹರಿ ಬೃಹತ್
ಕುಕ್ಷಿ ತಾಂ ಭುವನಗಳ ಕುಡಿದಿರ್ದುದೊ ;
ಆ ಹರಿಯನೋರ್ವ ಪುರವನಿತೆ ತಾಂ ಮದವಿಭ್ರ-
ಮಸಮಗ್ರನೇತ್ರದಿಂ ಕುಡಿದಳಿಂದು

೪೧

ಕೃಷ್ಣಗಭಿಮುಖಮಾಗಿ ಮೇಲೇಳೆ ಘನಕುಚದೆ
ನರ್ತಿಸುವ ಕೇಕಿ ಕಲವಲಯದನಿಯಿಂ ;
ಬೆರಳ ತುದಿಯಿಂದೊಂದು ಕರ್ಣವಿವರವ ಬೇಗ
ಪೊಡೆವಳೋರ್ವಳು ಬಿಡದೆ ಮತ್ತೆ ಮತ್ತೆ

೪೨

ಬಾರಿಬಾರಿಗು ಚಲಿಪ ರಕ್ತಾಬ್ಜ ಪತ್ರರುಚಿ
ತಳಿರ ಬೆರಳಿನ ಕರದೆ ಲಲನೆಯೋರ್ವಳ್ ;
ವರ್ಣಮುಚ್ಚರಿಸದೆಯೆ ಗೂಢಾರ್ಥಮೆಂತಂತು
ತಲೆದೂಗಿ ಮಧುರಿಪುಗೆ ಕರೆಯನಿತ್ತಳ್

೪೩

ಕಮಲಸನಿಹದ ಚಿಗುರು ಕಳೆತಳೆದ ಕೈಯಿಂದ
ಸುಂದರಾನನ ಮುಚ್ಚಿ ಚದುರೆಯೋರ್ವಳ್ ;
ಪೊಳೆವ ಬೆರಳಿನ ಸಂದಿಯಲಿ ಪೊರಟು ರಾಜಿಸುವ
ಪಲ್ಬೆಳಗು ಮೊಳೆಯುತಿರೆಯಾಕಳಿಸಿದಳ್

೪೪

ಹರಿಯ ವೀಕ್ಷಣದಿಂದೆ ಸ್ತಿಮಿತ ದೃಷ್ಟಿಯ ಲಲನೆ
ಬಳೆಗಳಲಿ ಬಂಧಿಸಿದ ನೀಲಮಣಿಯ ;
ಕಾಂತಿಯಿಂದಿಡಿಕಿರಿದ ಸೂಕ್ಷ್ಮ ಬಾಸೆಯು ಪೊಳೆಯೆ
ತಳಿರ ಕರದಿಂ ಸರಿವ ಸೀರೆ ಪಿಡಿದಳ್

೪೫

ತನ್ನ ಸೌರಭದಿಂದೆ ಚಲಿಪ ದುಂಬಿಯ ರೆಕ್ಕೆ
ಬೀಸಣಿಗೆ ಗಾಳಿಯಿಂ ಬೆವರಳಿಯಲು ;
ಶೌರಿಗಭಿಮುಖವಾಗಿ ಬಿಡುಗಣ್ಣ ಭಾಮಿನಿಯು
ನಗರ ದೇವತೆಯಂತೆ ಕಾಣಿಸಿದಳು

೪೬

ನಮ್ಮ ಕಣ್ಬಯಕೆಯಂ ತೀರಿಸದೆ ಹರಿ ನಡೆವ
ನೆಂದೆಲ್ಲ ಲಲನೆಯರ್ ದುಗುಡವಾಂತರ್ ;
ಸತತವಿಾತನ ನೋಳ್ಪನಾವನುಂ ಲೋಕದಲಿ
ತೃಪ್ತಿಯಂ ಪೊಂದನೆಂದಿವರರಿಯರು

೪೭

ಹರಿಯೊಡನೆ ಗಮಿಸಿರ್ಪ ಮನವ ಕಾಯುವ ತೆರದೆ
ಶೂನ್ಯತೆಯನಾಂತಿರ್ಪ ನಾರಿಜನವು ;
ನಿಜನಿವಾಸಕೆ ನಡೆವ ಬಯಕೆಯಂ ಬದಿಗಿಟ್ಟು
ಚಿತ್ರಲಿಖಿತರ ತೆರದೆ ಚಣವಿರ್ದರು

೪೮

ಅರಳಿಸಿದ ಕಣ್ಣುಗಳ ಬೊಗಸೆಯಿಂ ತ್ವರೆಯಿಂದೆ
ಕುಡಿದ ಮಾಧವರಸದ ಭಾರದಿಂದೆ ;
ಮದವಾಂದ್ಯತೆಯನಾಂತ ಮೆಯ್ಗಳಿಂ ನಾರಿಯರು
ಮೆಲ್ಲಮೆಲ್ಲನೆ ಮನೆಗೆ ಪಿಂದಿರುಗಿದರ್

೪೯

ನಗರ ವರ್ಣನಂ :—

ನವಗಂಧ ಜಲಸೇಕದಿಂ ವಿರಜವಾಗಿರ್ದು
ಘನಧೂಪ ಧೂಮದಿಂ ರಜವುಮೆನಿಪ ;
ಎತ್ತರದ ಬಾವುಟದೆ ಜೋಲ್ವ ವಸನಗಳೆಸೆವ
ಬೀದಿಗಳ ಪಿಂದಿಟ್ಟು ಹರಿ ನಡೆದನು

೫೦

ವೃಷಪರ್ವ ಗೃಹರಚಿಸಿಯುಳಿದ ಮಣಿದಾರುಗಳ
ಬಿಂದುಸರದಿಂ ತಂದ ಸಲಕರಣೆಯಿಂ ;
ಮಯಶಿಲ್ಪಿ ನಿರ್ಮಿಸಿದ ಸುರಸದ್ಮ ಸಂಪದವ
ಕಡೆಗಣಿಪ ಸಭೆಗೆ ಹರಿ ಬಂದನೊಲವಿಂ.

೫೧

ಸಭಾವರ್ಣನಂ:–

ಆ ಸಭೆಯ ಕಲಧೌತ ಧವಲ ಶಿಲೆ ವೇಶ್ಮಗಳ
ಕಾಂತಿಯಲಿ ಪುಗುತಿರ್ಪ ಶೀತರುಚಿಯು ;
ಮತ್ತೆ ಪಾಲ್ಗಡಲಿನಲಿ ಗರ್ಭವಾಸವ ಬಯಸಿ
ಚಣಕಾಲಮಿರ್ಪವೊಲು ಕಾಣ್ಬನಿರುಳೊಳ್

೫೨

ಮನೆಗಳಲಿ ನೀಲಮಣಿ ಕಾಂತಿಯಿಂ ಪಸುರಾದ
ನಡುಮನೆಯ ಲೋಹಮಣಿರಚಿತಬುವಿಗಳ್ ;
ತೆಳುವಾದ ಪಾಚಿಯಿಹ ಪರಶುರಾಮನು ಕೊಟ್ಟ
ಪಿತೃತರ್ಪಣದ ಜಲದ ತೆರನಿರ್ದವು

೫೩

ಪಟಿಕಶಿಲೆಗಳ ರಾಶಿಯಿಂದ ರಚಿಸಿದ ಸಭೆಯ
ನಿಶೆಯಲ್ಲಿ ಶಶಿಯರುಚಿಯೊಡವೆರೆದಿಹ ;
ಗೃಹಪಂಕ್ತಿಗಳ ಜನರು ಕೈಸೋಂಕಿನಿಂದರಿದು
ಇರುಳಿನೊಳ್ ದಾಂಟಿದರು ಮೃದುಗಮನದಿಂ

೫೪

ಆ ಸಭೆಯ ಮನೆಗಳಲಿ ಬಿಸಿನಿವಧು ಪರಿಭವದ
ತಪ್ಪಿನಿಂದಿರುಳಿನಲಿ ಶಶಿಕಿರಣಮಂ ;
ನಿರ್ದೋಷ ನೀಲಮಣಿ ಕಾಂತಿಗಳು ಗುರುಭಾವ–
ದೊಳುಪಾಂಶು ಪೊಡೆಯುವುವು ಮತ್ತೆ ಮತ್ತೆ

೫೫

ನವ ಸಮಾಗಮದಿಂದೆ ನಾಚಿ ಮುಖತಿರುವಿದರು
ಗೃಹರತ್ನ ಭಿತ್ತಿಗಳ ಪ್ರತಿಮೆಗಳಲಿ ;
ಪೂರ್ಪೊಳೆದುಮಭಿಮುಖಂ ಬರುವ ಕಾಂತೆಯರಿಂದೆ
ಭೋಗಿಗಳ್ ಹರ್ಷಮಂ ತಳೆಯುತಿರ್ದರ್

೫೬

ಹಸಿರುಗಲ್ ಮನೆಗಳಲಿ ತೃಣದಾಸೆಯಿಂ ತಲೆಯ
ಬಾರಿಬಾರಿಗು ನಮಿಸೆ, ಜಹ್ವಾಗ್ರದೊಳ್ ;
ಲಗ್ನಕಿರಣಾಂಕುರವ ತೃಣಕಬಲ ಧರಿಸಿದೊಲು
ರಾಜಿಸುವ ಚಿಗರಿಗಳ ಜನ ನೋಡಿತು

೫೭

ಆ ಸಭೆಯ ಸನಿಹವಿಹ ವೃಕ್ಷಗಳು ಸುವಿಶಾಲ
ಪಾತಿ ತುಂಬಿದ ನೀರ ದರ್ಪಣದಲಿ ;
ಪ್ರತಿಬಿಂಬಿಸಿದ ತಮ್ಮ ಮೂರ್ತಿಯಿಂ ಬುಡಗಳಲಿ
ಪರ್ಣರಾಶಿಯ ಧರಿಸಿದಂತೆಸೆದವು

೫೮

ಫಣಿಶಿರೋರತ್ನಗಳ ಸಾನ್ನಿಧ್ಯದಿಂದುದಿಸಿ
ಬಾರಿಬಾರಿಗು ಮೇಘ ದನಿಗಳಿಂದೆ ;
ಆ ಸಭಾಂಗಣಮೆಲ್ಲಮುದ್ಗಮಿಪ ವೈಡೂರ್ಯ
ಮಣಿ ಬುವಿಯ ಮೊಳಕೆಯಿಂ ರಾಜಿಸಿದುದು

೫೯

ನೆಲವೆಂದು ಕೌರವಂ ಕಾಲಿಟ್ಟು ಮುಗ್ಗರಿಸಿ
ಕೆಳಬೀಳೆ ಗುಪ್ತಜಲ ನಲಿನಿಯಲ್ಲಿ ;
ಅನಿಲಜನ ನಗೆಯಿಂದೆ ಸಂಕ್ಷುಭಿತರಾದೆಲ್ಲ
ರಾಜನ್ಯಕುಲನಾಶ ಹೇತುವಾಯ್ತು

೬೦

ಸುತ್ತಲುಂ ಸ್ಫುರಿಸುತಿಹ ಕತ್ತಿಗಪ್ಪಿನ ರುಚಿಯ
ನೀಲಮಣಿ ಬುವಿಯ ಬಳಿ ನಿಂದ ಜನರು ;
ನೆಲವೆಂದು ನಗುತಿರಲು ಜಲಶಂಕೆಯಿಂದವನು
ಪಂಚೆಯಂ ಮೇಲೆಳೆದ ಮತ್ತೆ ಮತ್ತೆ

೬೧

ಅಮಲಾಂಶು ಮಂಡಲದೆ ಪೊಳೆವ ತನುಗಳ ಧರಿಸಿ
ನಯನ ನಂದನರೆನಿಪ ಹರಿ ಪಾಂಡವರ್ ;
ಉದಯಾದ್ರಿಯಿಂ ನಭಕೆ ನಡೆವ ಶಶಿ ಶುಕ್ರರೊಲು
ಸಭೆಯ ಬಳಿ ರಥದಿಂದ ಕೆಳಗಿಳಿದರು

೬೨

ಬಳಿಕ ನೃಪನಾದರದೆ ' ಇತ್ತಿತ್ತ ' ವೆನುತಿರಲು
ರತ್ನರಂಜಿತ ಭಿತ್ತಿಯಿಂ ಕಾಣದ ;
ಧವಲಾಂಶು ಪಟಲದಿಂದರಿಯದಿಹ ಬಾಗಿಲಿನ
ಸಭೆಯ ಹೊಕ್ಕನು ಹರಿಯು ಮಂದಗತಿಯಿಂ

೬೩

ಪೊಸಮಿಸುನಿಯಿಟ್ಟಿಗೆಯನಿಟ್ಟಿಟ್ಟು ನಿರ್ಮಿಸಿದ
ನೃಪಸದನಮಂ ಹರಿಯು ಕಂಡನಲ್ಲಿ ;
ಬಾಂಗೊಗೆವ ಮಣಿಕಾಂತಿ ಪುಂಜದಿಂದಾಸಭೆಯು
ವಿಸ್ಮಯಾವಹಮಾಯ್ತು ಸಗ್ಗಿಗರಿಗುಂ

೬೪

ಉದಯಾದ್ರಿ ಮಂಡೆಯೊಳಗೊರ್ಮೆಯೇ ರಾಜಿಸುವ
ರವಿ ಪೂರ್ಣ ಚಂದಿರರ, ಸಂಭವಿಸದ
ಕಾಂತಿಯಂ ಧರಿಸಿರ್ಪ ಹರಿನೃಪರು ಪ್ರಜ್ವಲಿಪ
ವಿಪುಲಾಸನಂಗಳಲಿ ಮಂಡಿಸಿದರು

೬೫

ಬೇಗೆಯಿಂ ಬೆಂದೊಡಲು ಗಾಳಿಯಿಂ ತಣಿವವೊಲು
ಶಶಿಕಿರಣದಿಂ ಕಡಲ ಜಲದ ತೆರದೆ ;
ಸಕಲ ದುಃಖವ ಕಳೆವ ಯದುಪತಿಯ ಬರವಿಂದೆ
ಸುಲಭದಿಂ ಕುರುಕುಲಂ ಸೊಗವಡೆದುದು

೬೬

ಶ್ರೇಷ್ಠವಾದ್ಯದ ಲಯವನನುಸರಿಸಿ ಸಭೆಯೊಳಗೆ
ನವಗೀತವಾದರುಂ ಅನವಗೀತಂ ;
ಸಾತ್ವಿಕಾಂಗಿಕ ಮಧುರಮುಜ್ವಲನೃತ್ಯಗಳ
ಸುವಿಲಾಸಿ ನರ್ತಕಿಯರನುಭವಿಸಿದರ್

೬೭

ಶ್ರೀಕೃಷ್ಣ ಮನೆಗೆ ಬರೆ ನೃಪ ನಿಖಿಲ ನಗರದಲಿ
ಉತ್ಸವವ ಬೆಸಸಿದನಕಾಲದೊಳಗುಂ ;
ಸತತೋತ್ಸವಂ ನಗರಮೆಂಬುದುಂ ಧರ್ಮಜಗೆ
ಉತ್ಕಟಾನಂದದಲಿ ಮರತೆಹೋಯ್ತು !

೬೮

ಎಲ್ಲರಭಿಧಾನಗಳನರಿತ ಹರಿ ಬಾಲರಿಂ–
ದೆಲ್ಲ ಬಾಂಧವ ಜನರ ಕುಶಲ ಕೇಳ್ದಂ ;
ಐಸಿರಿಯೊಳಿರ್ದರುಂ ಮದವಳಿದು ಸಜ್ಜನರ್
ಎಂದಿಗುಂ ಏನನುಂ ಮರೆಯರಲ್ತೆ !

೬೯

ಶ್ರೀಪತಿಯು ಭೂಪತಿಯುಮನ್ಯೋನ್ಯ ಪ್ರೀತಿಯಿಂ
ಮರ್ತ್ಯದುರ್ಲಭರಸದ ಸಾರಮೆನಿಪ ;
ಪ್ರತಿಪದಕುಮತಿಮಧುರಚಿರವಿನೂತನಮಾಂತ
ಬಹುಸಂಕಥಾಮೃತವ ಸವಿದರೀರ್ವರ್

ಮಾಘಕವಿ ವಂಶವರ್ಣನಂ

೧

ಶ್ರೀವರ್ಮಲ ನೃಪನ ಸರ್ವಾಧಿಕಾರದಲಿ
ಸುಕೃತಾಧಿಕಾರಿ ಸುಪ್ರಭದೇವನು ;
ಅನಾಸಕ್ತದೃಷ್ಟಿಯು ವಿರಜಸ್ಕನನುಮೆನಿಪ
ಎರಡನೆಯ ದೇವನೊಲು ನಿರುತಮಿರ್ದಂ.

೨

ಮಿತಸತ್ಯಮುಂ ಭಾವಿಹಿತಕರಂ ತಾನೆನಿಪ
ಬುದ್ಧ್ಯೋಪದೇಶಮಂ ಪ್ರಾಜ್ಞನಂತೆ
ಸ್ವಹಿತೇಚ್ಛೆಯಿಂ ನೃಪನು ಸುಪ್ರಭನ ವಚನಮಂ
ಎದುರಾಡದೆಯೆ ನಡೆಸುತಿರ್ದನಾಗ.

೩

ಕ್ಷಮಿ ಮೃದೂದಾತ್ತಗುಣ ಧರ್ಮಪರನೆನಿಸಿರ್ದ
ದತ್ತಕಾಖ್ಯೆಡೆ ತನುಜನವಗುದಿಸಿದಂ ;
ಕಂಡಿವನ ಜನರಂದು ವ್ಯಾಸೋಕ್ತ ಧರ್ಮಜನ
ಗುಣಪೂರ್ಣ ವಚನಮಂ ನಂಬಿರ್ದರು.

೪

ಸ್ವಯಮದ್ವಿತೀಯನುಂ ಸುಜನಮುಖ್ಯನುಮೆನಿಸಿ
ಸ್ವರ್ವಾಶ್ರಯನುಮೆಂಬ ಶ್ಲಾಘ್ಯಮಾದ ;
ಗೌಣನಾಮಾಂತರವ ಸಕಲ ಸಂತುಷ್ಟರಹ
ಜನರಿಂದೆ ಗಳಿಸಿರ್ದ ದತ್ತಕಾಖ್ಯಂ.

೫

ಶ್ರೀ ಶಬ್ದದಿಂರಮ್ಯ ಸರ್ಗಾಂತ ಸೂಚಿಸುವ
ಶ್ರೀಪತಿಯ ಚರಿತೆಯಿಂ ಚಾರುವೆನಿಪ ;
ಆವನ ಸುತ ಮಾಘನೀ ಶಿಶುಪಾಲವಧಕಾವ್ಯ
ರಚಿಸಿದಂ ಸುಕವಿಯಶ ಬಯಸಿ ಮುದದೆ.

ಅಮರವಾಣೀಕೃತ

ಸಿರಿಗನ್ನಡ ಶಿಶುಪಾಲವಧ ಕಾವ್ಯದೊಳ್ ಇಂದ್ರಪ್ರಸ್ಥಾಭಿಗಮನಂ ಮುಗಿದುದು

ಟಿಪ್ಪಣಿಗಳು

೧ ಕಾವ್ಯದ ಪ್ರಾರಂಭದಲ್ಲಿ ಮಂಗಳವನ್ನು ಮಾಡುವುದು ಕವಿ ಸಂಪ್ರದಾಯ. ಮಂಗಳವು ಆಶೀರ್ವಾದ, ನಮಸ್ಕಾರ ಮತ್ತು ವಸ್ತುನಿರ್ದೇಶವೆಂದು ಮೂರುವಿಧ. ಶಿಶುಪಾಲವಧ ಕಾವ್ಯದಲ್ಲಿ ವಸ್ತುನಿರ್ದೇಶ ರೂಪವಾದ ಮಂಗಳವನ್ನು ಕವಿ ಮಾಡಿದ್ದಾನೆ. "ಕಥಾನಾಯಕನಾದ ಶ್ರೀ ಕೃಷ್ಣನು ಸಾಕ್ಷಾತ್ ವಿಷ್ಣುವಿನ ಅವತಾರ. ಶ್ರೀ ಕೃಷ್ಣನು ತನ್ನ ಅರಮನೆಯ ಮುಂದೆ ನಿಂತಿರುವಾಗ ಆಕಾಶದಿಂದ ಕೆಳಗಿಳಿಯುತ್ತಿರುವ ನಾರದಮಹರ್ಷಿಯನ್ನು ಕಂಡನು." ಎಂಬ ಕಾವ್ಯದ ಕಥಾನಾಯಕ ಶ್ರೀಕೃಷ್ಣನ ವಿಷಯಕವಾದ ವಸ್ತು ಇಲ್ಲಿ ಸೂಚಿತವಾಗಿದೆ. ಕಾವ್ಯದ ಮೊಲನೆಯ ಪದ್ಯದ ಆದಿಯಲ್ಲಿ ಉಪಯೋಗಿಸಿರುವ ಶ್ರೀ (ಸಿರಿ) ಪದವು ಮಂಗಲವಾಚಕ. ಶ್ರೀಪತಿ (ಸಿರಿಯಪತಿ) ಎಂಬುದರಿಂದ ಲಕ್ಷ್ಮೀಪತಿ, ರುಕ್ಮಿಣಿಯ ಪತಿ ಎಂದು ಅರ್ಥವಾಗುತ್ತದೆ. ಲಕ್ಷ್ಮಿಯು ವಿಷ್ಣುವಿನ ರಾಮಾವತಾರದಲ್ಲಿ ಸೀತೆಯಾಗಿಯೂ, ಕೃಷ್ಣಾವತಾರದಲ್ಲಿ ರುಕ್ಮಿಣಿಯಾಗಿಯೂ ಅವತರಿಸಿದಳು. (ವಿಷ್ಣುಪುರಾಣ-೫-೨೬; ಭಾಗ ೧೦-೫೨; ಹರಿ ೨-೫೯) ವಿಶ್ವಗಳಿಗಾಧಾರ-ತನ್ನ ಕುಕ್ಷಿಯಲ್ಲಿ ಸಕಲ ಭುವನಗಳನ್ನೂ ಧರಿಸಿರುವುದರಿಂದ ಶ್ರೀಕೃಷ್ಣನು ಜಗತ್ತಿಗೆ ಆಧಾರನೆನಿಸಿದ್ದಾನೆ. ಶ್ರೀನಿಲಯ .... ಸದನದಲಿ - ವಸುದೇವ ರೂಪಿಯಾದ ಕಶ್ಯಪನ ಮನೆಯಲ್ಲಿ, ಜಗವ ಪೊರೆಯೆ-ಮಹಾವಿಷ್ಣುವು ದುಷ್ಟನಿಗ್ರಹ ಶಿಷ್ಟಾನುಗ್ರಹಗಳಿಂದ ಲೋಕವನ್ನು ಪೊರೆಯುವುದಕ್ಕಾಗಿ ಅವತರಿಸಿದ್ದಾನೆ. ಗಗನದಿಂದಿಳಿವಂಬುಜಜತನಯ-ಆಕಾಶದಿಂದ ವತರಿಸುತ್ತಿರುವ ಅಂಬುಜಜ (ಅಂಬು-ಜ-ಜ-ತನಯ) ನೀರಿನಲ್ಲಿ ಜ-ಹುಟ್ಟಿದ ಕಮಲದಲ್ಲಿ ಜ-ಹುಟ್ಟಿದವನು ಬ್ರಹ್ಮ. ಅವನ ತನಯ-ಮಗನಾದ ಮುನಿ- ನಾರದಮಹರ್ಷಿಯನ್ನು ಶ್ರೀಕೃಷ್ಣನು ಕಂಡನು. ಬ್ರಹ್ಮನ ಉತ್ಸಂಗದಿಂದ ಹುಟ್ಟಿದವನು ನಾರದ. (ಭಾಗ ೩-೧೨. ಮತ್ಸ್ಯ-೩) ಇಲ್ಲಿ ಚಿಕ್ಕದಾಗಿರುವ ವಸುದೇವನ ಮನೆಯಲ್ಲಿ ಸಕಲ ಜಗತ್ತಿಗೆ ಆಶ್ರಯನಾದ (ದೊಡ್ಡವನಾದ) ಶ್ರೀಕೃಷ್ಣನು ಎಂದು ಹೇಳಿರುವುದರಿಂದ ಅಧಿಕಾಲಂಕಾರ.

ಜಗತ್ತುಗಳಿಗೆ ಆಶ್ರಯನಾದವನು ಅಂಥ ಜಗತ್ತಿನ ಒಂದು ಪ್ರದೇಶದಲ್ಲಿರುವ ನೆಂಬುದರಿಂದ ವಿರೋಧಾಭಾಸಾಲಂಕಾರ.

ಈ ಕಾವ್ಯವು 'ಮಧುರಛಂದಸಿ' ನಲ್ಲಿ ಅನುವಾದಿಸಲ್ಪಟ್ಟಿದೆ. ಪದ್ಯದ ಒಂದು ಮತ್ತು ಮೂರನೆಯ ಪಾದಗಳಲ್ಲಿ ಐದುಮಾತ್ರೆಯ ನಾಲ್ಕು ಗಣಗಳೂ ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ಮೂರು ಗಣಗಳು ಒಂದು ಗುರುವೂ ಇರುತ್ತವೆ. ಇದು ಹಳೆಯ ತ್ರಿಪದಿಯ ಪ್ರಭೇದವಾದರೂ ಆದಿ ಮತ್ತು ಅಂತ್ಯ ಪ್ರಾಸವಿರಬೇಕೆಂಬ ನಿಯಮ ವಿಮುಕ್ತವಾಗಿ ಅರ್ಥ ಸ್ವಾರಸ್ಯಕ್ಕೆ ತಡೆಯಾಗದೆ ಕಾವ್ಯ ಧಾಟಿಯಲ್ಲಿ ಹರಿದಿದೆ. ಸಂಸ್ಕೃತದಲ್ಲಿರುವಂತೆ ಕವಿ ಶಕ್ತಿಯನ್ನು ಅನು ಸರಿಸಿ ಪ್ರಾಸಾದಿಗಳು ಬರಬಹುದು. ಈ ಪದ್ಯದ ಎರಡು ಮತ್ತು ಮೂರನೆಯ ಪಾದಗಳ ಆದಿಯಲ್ಲಿ 'ವ' ಕಾರ ಪ್ರಾಸವಿದೆ.

೨ ಗಗನತಲದಿಂದ ಕೆಳಗಿಳಿಯುತ್ತಿದ್ದ ತೇಜಃಪುಂಜವನ್ನು ಕಂಡ ಜನ ಆಶ್ಚರ್ಯಗೊಂಡಿತು. ಏಕೆಂದರೆ ಅರುಣಸಾರಥಿ—ಸೂರ್ಯ (ಅರುಣನೇ ಸಾರಥಿ ಯಾಗಿರುವ) ನ ಕಿರಣಗಳು ಅಡ್ಡಡ್ಡವಾಗಿ ಬೀಳುತ್ತವೆ. ಅಗ್ನಿ ಜ್ವಾಲೆಗಳು ಮೇಲ್ಮುಖವಾಗಿರುತ್ತವೆ. ಆದರೆ ಎಲ್ಲಕಡೆಗೂ ಪ್ರಸರಿಸುತ್ತಿರುವ ಕಿರಣಗಳುಳ್ಳ ಈ ವಿಲಕ್ಷಣ ತೇಜಸ್ಸು ಯಾವುದು ಎಂಬುದೇ ಈ ಸೋಜಿಗಕ್ಕೆ ಕಾರಣ. ಇಲ್ಲಿ ಮುನಿಯ ತೇಜಸ್ಸು ಉಪಮಾನವಾದ ಸೂರ್ಯ ಮತ್ತು ಅಗ್ನಿಗಳ ತೇಜಸ್ಸಿ ಗಿಂತಲೂ ವಿಲಕ್ಷಣವಾಗಿರುವುದರಿಂದ ವ್ಯತಿರೇಕಾಲಂಕಾರ.

೩ ಶ್ರೀಕೃಷ್ಣನು ಮುಗಿಲಿನಿಂದ ಕೆಳಗಿಳಿಯುತ್ತಿರುವ ತೇಜಸ್ಸನ್ನು ನೋಡಿ ಮೊದಲು ಇದೊಂದು ತೇಜಃಪುಂಜ (ಬೆಳಕಿನಸಮೂಹ) ವೆಂದೂ ಬರಬರುತ್ತ ಶರೀರಾಕಾರವು ಕಂಡುದರಿಂದ ಈತ ದೇಹಧಾರಿಯೆಂದೂ, ಅನಂ ತರ ಅವಯವಗಳು ಸ್ಪಷ್ಟವಾಗಿ ಕಂಡುದರಿಂದ ನರ(ಪುರುಷ)ನೆಂದೂ ನಿಶ್ಚೈಸಿ ಕಡೆಗೆ ನಾರದನೆಂದು ನಿರ್ಧರಿಸಿದನು. ಇಲ್ಲಿ 'ಆಕೃತಿಯಿಂದ' ಮತ್ತು 'ಬಿಡಿ ಬಿಡಿಸಿದವಯವದೆ' ಎಂಬ ಪದಗಳು 'ದೇಹಧಾರಿ' ಮತ್ತು 'ಪುರುಷ' ಎಂಬು ದನ್ನು ನಿರ್ಧರಿಸಲು ಹೇತುಗಳಾದ್ದರಿಂದ ಪದಾರ್ಥಹೇತುಕ ಕಾವ್ಯಲಿಂಗಾ ಲಂಕಾರ.

೪ "ಪ್ರೊಸತು....ಶುಭ್ರವಾದ" ದೊಡ್ಡದೊಡ್ಡ ಹೊಸ ಮೇಘಗಳ ಕೆಳಗೆ ಕರ್ಪೂರಧೂಳಿಯ ರಾಶಿಯಂತೆ ಬಿಳುಪಾಗಿರುವ ನಾರದನು "ಚಣಮಾನೆ.... ಪ್ರೋಲುತಿರ್ಪ"—ಮೇಘಗಳು ಸಮೀಪದಲ್ಲಿರುವ ಕಾಲದಲ್ಲಿ ಅಥವ ತಾಂಡವ ಉತ್ಸವಕಾಲ (ಚಣ–ಕ್ಷಣ. ಕಾಲಭೇದ ಮತ್ತು ಉತ್ಸವ) ದಲ್ಲಿ ಭಸ್ಮಲೇಪನ ಮಾಡಿಕೊಂಡು ಗಜಚರ್ಮವನ್ನು ಮೇಲಕ್ಕೆ ಎತ್ತಿಕೊಂಡಿರುವ ಶಿವನಂತೆ ಕಂಡನು. ಉಪಮಾಲಂಕಾರ.

೫ "ಕಮಲ.... ಪ್ರೊಳೆವ" — ತಾವರೆ ಹೂವಿನ ಕೇಸರಗಳಂತಿರುವ ಕೆಂಜೆಡೆಗಳನ್ನು ಧರಿಸಿ ಶರಚ್ಚಂದ್ರನ ಕಿರಣಗಳಂತೆ ಪ್ರಕಾಶಿಸುವ ನಾರದನು 'ಹಿಮಭುವಿ.....ಬೆಟ್ಟದಂತೆ'–ಹಿಮಭುವಿಯಲ್ಲಿ ಬೆಳೆದು ಹಣ್ಣಾಗಿ ಹೊಂಬಣ್ಣ ತಳೆದ ಬಳ್ಳಿ ಪೊದೆಗಳನ್ನು ಧರಿಸಿರುವ ಹಿಮಗಿರಿಯಂತೆ ಕಂಡನು.

೬ "ಪೊನ್ನೊಸೆಯ–(ಪೊನ್ನು- ನೊಸೆ) ಹೊಂಬಣ್ಣವಾಗಿರುವ ನೊಸೆ ಹುಲ್ಲಿನ ಮೌಂಜಿಯುತ– ಉಡಿದಾರವನ್ನು (ಬ್ರಾಹ್ಮಣಾದಿ ದ್ವಿಜರಿಗೆ ಉಪನಯನ ಕಾಲದಲ್ಲಿ ಮೌಂಜಿಯ ಉಡಿದಾರ ಕಟ್ಟುತ್ತಾರೆ) ಕರ್ಪಿಡಿದ–ಕಪ್ಪಾದ ಕೃಷ್ಣಾಜಿನದ ಮೇಲೆ ಧರಿಸಿರುವ ಬಲರಾಮ (ನೀಲಾಂಬರ) ನನ್ನು ಹೋಲುತ್ತಿದ್ದಾನೆ.

೭ ವೈನತೇಯ= ಗರುಡ. (ಕಶ್ಯಪಬ್ರಹ್ಮನಿಗೆ ಕದ್ರು, ವಿನತೆ ಎಂಬುವರು ಮಡದಿಯರು. ಇವರಲ್ಲಿ ವಿನತೆಯಮಗ ಗರುಡ. ಇವನೇ ವೈನತೇಯ. ಕದ್ರುವಿನ ಮಕ್ಕಳು ಆದಿಶೇಷನೇ ಮೊಲಾದ ನಾಗಕುಲ) ಅವನ ಮೈಮೇಲಿನ ಉದ್ದವಾದ ಕೂದಲಿನಂತಿರುವ ಮತ್ತು 'ಪೊನ್ನ....ಎಳೆಯ'–ಚಿನ್ನದ ಹೊಲದಲ್ಲಿ ಬೆಳೆದಿರುವ ಬಳ್ಳಿಗಳ ಎಳೆಗಳಿಂದ ಮಾಡಿದ, ಯಜ್ಞೋಪವೀತವನ್ನು ಧರಿಸಿದ ನಾರದನು ಹಿಮಶುಭ್ರವಾದ ಶರತ್ ಋತುವಿನಲ್ಲಿ ಮಿಂಚುಗಳ ಬಳಗದಿಂದ ಪ್ರಕಾಶಿಸುವ ಮೇಘದಂತೆ ಕಂಡನು.

೮ ಬಿಸಖಂಡ (ತಾವರೆದಂಟು) ದಂತೆ ಬಿಳುಪಾಗಿರುವ ಶರೀರದಮೇಲೆ ನಿಜಭಾವ – ಸ್ವಭಾವದಿಂದಲೇ ಚಿತ್ರವಾದ ನವುರಾದ ರೋಮಗಳಿಂದ ಮನೋಹರವಾದ ಜಿಂಕೆ ಚರ್ಮವನ್ನು ಹೊದೆದಿರುವ ನಾರದನು ಸಬರವನ್ನು ಹಾಕಿರುವ ಐರಾವತ (ಇಂದ್ರನವಾಹನ) ದಂತೆ ಕಾಣುತ್ತಿದ್ದನು.

೯ “ಆಪಗುಂ....ಬೆಳಗುತಿರ್ಪ” ಯಾವಾಗಲೂ ಮಹತೀ ವೀಣೆಯನ್ನು ಮಿಾಟುತ್ತಿರುವುದರಿಂದ ಹೆಬ್ಬೆರಳು ಕೆಂಪಾಗಿದೆ. ಆ ಅಂಗುಷ್ಠನಖ ಕಿರಣಗಳು ಅದೇಕೈಲಿ ಹಿಡಿದಿರುವ ಅಕ್ಷಮಾಲೆಯ ಒಂದು ಪಾರ್ಶ್ವದಲ್ಲಿ ಬಿದ್ದಿವೆ. ಇದರಿಂದ ಅಕ್ಷಮಾಲೆಯ ಅರ್ಧವು ಕೆಂಪಗೂ, ಉಳಿದರ್ಧವು ಬೆಳ್ಳಗೂ ಇದೆ. ಇದನ್ನು ನೋಡಿದರೆ ಸ್ಫಟಿಕ ಮಣಿಗಳ ಅರ್ಧಕ್ಕೆ ಹವಳಗಳನ್ನು ಪೋಣಿಸಿದೆಯೋ ಎಂಬಂತಿತ್ತು. ಇಲ್ಲಿ ಸ್ಫಟಿಕ ಮಣಿಗಳು ತಮ್ಮ ಬಿಳುಪನ್ನು ಬಿಟ್ಟು ಹವಳದ ಕೆಂಪು ತಳೆದವು ಎಂಬುದರಿಂದ ತದ್ಗುಣಾಲಂಕಾರ. “ಅರ್ಧ ಹವಳವನ್ನು ಪೋಣಿಸಿದೆಯೋ” ಎಂಬಲ್ಲಿ ಉತ್ಪ್ರೇಕ್ಷಾಲಂಕಾರ.

೧೦ “ಅನಿಲಚಾಲನದಿಂದೆ”–ಗಾಳಿ ಸುಳಿಯುತ್ತಿದ್ದುದರಿಂದ ವೀಣೆಯ ತಂತಿಗಳು ಬೇರೆಬೇರೆ ಅನುರಣನ ಮಾಡುತ್ತಿವೆ. ‘ನಿಯತ....ಸ್ವರಗಳಿಂದೆ’ ಸ್ವರ–“ಶ್ರುತ್ಯನಂತರಭಾವೀ ಯಃ ಸ್ನಿಗ್ಧೋ ಅನುರಣನಾತ್ಮಕಃ। ಸ್ವತೋ ರಂಜಯತಿ ಶ್ರೋತುಶ್ಚಿತ್ತಂ ಸ ಸ್ವರ ಉಚ್ಯತೇ” (ರತ್ನಾಕರ) ಎಂದರೆ ಶ್ರುತಿಯ ತರುವಾಯ ಮೃದುವಾಗಿ ಅನುರಣನ ಮಾಡುತ್ತಾ ಕೇಳುವರ ಚಿತ್ತವನ್ನು ಸ್ವತಃ ರಂಜಿಸುವುದಕ್ಕೆ ಸ್ವರವೆಂದು ಹೆಸರು. ಶ್ರುತಿ–ಸ್ವರಾರಂಭಕ ಅವಯವ ಶಬ್ದವಿಶೇಷ. ಅಂದರೆ ಬಿಡಿಬಿಡಿಯಾಗಿ ನಿಯತ ಸಂಖ್ಯೆಯಿಂದ ವ್ಯವಸ್ಥಿತವಾದ ಶ್ರುತಿ ಸಮೂಹಗಳು. ಶ್ರುತಿಸಂಖ್ಯಾನಿಯಮ–ಷಡ್ಜ ಮಧ್ಯಮ ಪಂಚಮಗಳಿಗೆ ನಾಲ್ಕುನಾಲ್ಕು, ನಿಷಾದ ಗಾಂಧಾರಗಳಿಗೆ ಎರಡೆರಡು. ಋಷಭ ಧೈವತಗಳಿಗೆ ಮೂರುಮೂರು. ಈ ಶ್ರುತಿಗಳಿಂದ ‘ಸ–ರಿ–ಗ–ಮ–ಪ–ಧ–ನಿ’ ಎಂಬ ಸಪ್ತಸ್ವರಗಳು ಹುಟ್ಟುತ್ತವೆ. ಅಂಥ ಸ್ವರಗಳಿಂದ ‘ಸ್ಫುಟಮಾಂತ .ಮೂರ್ಛನೆಯ’– ಈ ಸ್ವರಗಳಿಂದ ಸ್ಪಷ್ಟವಾಗುತ್ತಿರುವ ‘ಗ್ರಾಮವಿಶೇಷ–ಷಡ್ಜಾದಿ ಹೆಸರಿನ ಸ್ವರಸಮೂಹ ಭೇದತ್ರಯದ ‘ಮೂರ್ಛನೆ’–ಸ್ವರಗಳ ಆರೋಹಣಾವರೋಹಣ ಕ್ರಮ ಭೇದಗಳುಳ್ಳ ಮಹತೀವೀಣೆಯು ಪುರುಷ ಪ್ರಯತ್ನವಿಲ್ಲದೆಯೇ ನುಡಿಯುತ್ತಿದ್ದುದರಿಂದ ನಾರದನು ಆಶ್ಚರ್ಯದಿಂದ ಅದನ್ನು ಮತ್ತೆ ಮತ್ತೆ ನೋಡುತ್ತಿದ್ದನು. ಅಂಥ ನಾರದನನ್ನು ಕೃಷ್ಣನು ಕಂಡನೆಂದು ತಾತ್ಪರ್ಯ. “ವಿಶ್ವಾವಸೋಸ್ತು ಬೃಹತೀ ತುಂಬುರೋಸ್ತು ಕಲಾವತೀ। ಮಹತೀ ನಾರದಸ್ಯಸ್ಯಾತ್ ಸರಸ್ವತ್ಯಾಸ್ತು ಕಚ್ಛಪೀ॥” ಇಲ್ಲಿ ಪುರುಷವ್ಯಾಪಾರ

ವಿಲ್ಲವೆಯೇ ಸ್ವರಾದ್ಯಾಪಿರ್ಭಾವವನ್ನು ಹೇಳಿದ್ದರಿಂದ ವೀಣೆಯಲ್ಲಿ ಲೋಕೋತ್ತರ ಶಿಲ್ಪಸೌಷ್ಟವವು ತೋರುತ್ತದೆ. ಅದರೊಡನೆ ಸ್ವತಃಸಿದ್ಧ ಅತಿಶಯಕ್ಕೆ ಅಭೇದಾಧ್ಯವಸಾನಮಾಡಿದ್ದರಿಂದ ಅತಿಶಯೋಕ್ತಿ ಅಲಂಕಾರ-

೧೧ ಸರ್ವಾರ್ಥದರ್ಶಿ – ದೇಶಕಾಲಾತೀತವಾದ ಅತೀಂದ್ರಿಯ ವಸ್ತುಜ್ಞಾನಕ್ಕೆ ನಿಧಿ, ಸರ್ವಜ್ಞ.

೧೨ ಮುನಿಯು ಬಂದೊಡನೆಯೇ ಭೂಮಿಯನ್ನು ಹೊತ್ತಿರುವ ಆದಿಶೇಷನು ಎತ್ತಿದ್ದ ತನ್ನ ಹೆಡೆಗಳನ್ನು ಮುನಿ ಗೌರವದಿಂದಲೋ ಎಂಬಂತೆ ಸ್ವಲ್ಪ ತಗ್ಗಿಸಿದನು. ಧಾತೃಸುತ–ಬಹ್ಮಪುತ್ರ ಅತಿಶಯೋಕ್ತಿ ಅಲಂಕಾರ. ಉತ್ಪ್ರೇಕ್ಷೆ.

೧೪ ಸಾಮಾನ್ಯದಿಂದ ವಿಶೇಷ ಸಮರ್ಥಕವಾದ ಅರ್ಥಾಂತರನ್ಯಾಸಾಲಂಕಾರ.

೧೫ ನಿಂದವರ–ಪರಸ್ಪರ ಎದುರಾಗಿ ನಿಂತಿರುವ ನಾರದ–ಕೃಷ್ಣರನ್ನು ಪುರಾಣಪುರುಷ–ಶ್ರೀಕೃಷ್ಣ.

೧೬ ಮುಡಿಗೆ–ತುದಿಗೆ, ಏರ್ದ= ಏರಿರುವ, ಚಂದ್ರಾಭಿರಾಮತೆ–ಚಂದ್ರನ ಶೋಭೆ, ಅಸಂಭವದ್ವಸ್ತು–ಸಂಬಂಧರೂಪವಾದ ನಿದರ್ಶನಾಲಂಕಾರ.

೧೭ ಯಾಜಕಪ್ರಿಯ– ಯಜ್ಞಮಾಡುವವರಿಗೆ ಪ್ರಿಯನಾದ, ಹೃಷ್ಟ-ಸಂತುಷ್ಟ, ವಿಧಿಯಿಂದೆ - ವಿಧ್ಯು (ಶಾಸ್ತ್ರ) ಕ್ತವಾಗಿ ತುಷ್ಟ - ಸಂತುಷ್ಟ, ಪರಿಚರ್ಯೆ - ಸೇವೆ, ಅರ್ಥಾಂತರನ್ಯಾಸಾಲಂಕಾರ.

೧೮ ಮುನಿಯು ಎಲ್ಲಾ ತೀರ್ಥಗಳನ್ನು ಕಮಂಡಲದಲ್ಲಿ ತುಂಬಿ ತಂದಿದ್ದನು. ಪಾಪ ಪರಿಹಾರಕವಾದ ಆ ತೀರ್ಥವನ್ನು ಹರಿಯು ತಲೆಬಾಗಿ ಸ್ವೀಕರಿಸಿದನು.

೨೦ ಮಿಸುನಿ– ಚಿನ್ನ, ಲಾಂಛನ- ಚಿಹ್ನೆ, ಬಡಬಾಗ್ನಿಶಿಖೆ- ಸಮುದ್ರದಲ್ಲಿನ ಅಗ್ನಿಜ್ವಾಲೆ, ಅಂಬುಧಿ– ಸಮುದ್ರ (ಅಂಬು –ಧಿ) ಉಪಮಾಲಂಕಾರ.

೨೧ ಶ್ರೀಕೃಷ್ಣನ ನೀಲಕಿರಣಗಳಲ್ಲಿ ನಾರದನ ಶುಭ್ರ ಕಿರಣಗಳು ಬೆರೆತು ರಾತ್ರಿಹೊತ್ತು ಮರದ ಎಲೆಗಳ ಸಂದುಗಳಲ್ಲಿ ಕಾಣುವ ಚಂದ್ರಕಿರಣಗಳಂತಿದ್ದವು. ಉಪಮಾಲಂಕಾರ.

೨೨ ಹೊಂಗೆ ಹೂವಿನಂತೆ ಕಪ್ಪಗಿರುವ ಕೃಷ್ಣನ ಕಾಂತಿಗಳು ಬೆಳ್ಳಗಿರುವ ನಾರದನ ಮೇಲೆಯೂ ಏಳಿಲೆಯ ಬಾಳೆಯ ಹೂವಿನ ಧೂಲಿಯಂತಿದ್ದ ನಾರದನ ಕಾಂತಿಗಳು ಕೃಷ್ಣನ ಮೇಲೆಯೂ ಬಿದ್ದಿದ್ದುದರಿಂದ ಅವರಿಬ್ಬರೂ ಒಂದೇ ಬಣ್ಣದವರಂತೆ ಕಂಡರು. ಉತ್ಪ್ರೇಕ್ಷಾಲಂಕಾರ.

೨೩ ಉಪಸಂಹೃತಿ– ಅಡಗುವಿಕೆ, ತಾಪಸಾಗಮನ- ತಪಸ್ವಿ ನಾರದನ ಬರುವಿಕೆ, ಕೈಟಭಾರಿ– ಕೈಟಭನೆಂಬ ರಾಕ್ಷಸನ ಶತ್ರು ಶ್ರೀಕೃಷ್ಣ. ಅತಿಶಯೋಕ್ತಿ ಅಲಂಕಾರ.

೨೪ ಉಪಮಾ ಮತ್ತು ಕಾವ್ಯಲಿಂಗಾಲಂಕಾರಗಳಿಗೆ ಸಾಂಕರ್ಯ.

೨೨ 'ಶಶಿ....ತನುಸೌಧ'– ಚಂದ್ರಕಿರಣಗಳಂತೆ ಶುಭ್ರವಾದ ನಾರದನ ಶರೀರವೆಂಬ ಉಪ್ಪರಿಗೆಯನ್ನು ಕೃಷ್ಣನು ತನ್ನ ದಂತ (ಹಲ್ಲು) ಕಾಂತಿಯ ನೆಪದಿಂದ ಬಿಳುಪುಮಾಡಿದನು. ಬೆಳ್ಳಗೆ (ವಿ. ಪೂ. ಕ) ಅತಿಶಯೋಕ್ತಿ ಮತ್ತು ಅಪಹ್ನವಾಲಂಕಾರಗಳಿಗೆ ಸಂಸೃಷ್ಟಿ.

೨೬ ದೇಹಿ= ದೇಹಧರಿಸಿದ ಜೀವ, ಮುಕ್ಕಾಲ= ಮೂರು ಕಾಲಗಳು (ಭೂತ, ವರ್ತಮಾನ, ಭವಿಷ್ಯತ್) ಸಾಂಪ್ರತಂ– ಈಗ, ಭಾವಿ– ಭವಿಷ್ಯತ್ ಕಾಲ, ಕಾವ್ಯಲಿಂಗಾಲಂಕಾರ.

೨೭ ವ್ಯಾಪಿಸದ- ಹರಡದಿರುವ, ಅಮಿತ– ಹೆಚ್ಚಾದ, ತೇಜೋರಾಶಿ– ಎಲ್ಲೈ ತೇಜಸ್ವಿಯೇ ವ್ಯತಿರೇಖಾಲಂಕಾರ.

೨೮ ಸತ್ಪಾತ್ರ- ಯೋಗ್ಯಪುರುಷ ಮತ್ತು ಹಂಡೆ ಮೊದಲಾದ ಪಾತ್ರೆ. ನಿಕ್ಷೇಪ–ಇರಿಸುವಿಕೆ ಮತ್ತು ಹೂತಿಡುವಿಕೆ, ನಿರ್ವ್ಯಾಕುಲತೆ– ಸಮಾಧಾನದಿಂದಿರುವಿಕೆ, ಏಗಳುಂ- ಯಾವಾಗಲೂ, ಬಳಸು– ಉಪಯೋಗಿಸು, ಪಿತ- (ಪ್ರಜಾಸೃಜ) ಬ್ರಹ್ಮ ಮತ್ತು ತಂದೆ, ತವಿಸದಿಹ- ಸವೆಯದಿರುವ, 'ಶ್ರುತಿಯ ನಿಕ್ಷೇಪಸೀನಾದೆ'– ಬ್ರಹ್ಮನು ವೇದಗಳೆಂಬ ನಿಕ್ಷೇಪವನ್ನು ನಿನ್ನಲ್ಲಿರಿಸಿ ಸಮಾಧಾನದಿಂದಿದ್ದಾನೆ. ಎಂದರೆ ಶ್ರುತಿ ಸಂಪ್ರದಾಯದ ಮೂಲಕ ಧರ್ಮಾಧರ್ಮ ವ್ಯವಸ್ಥಾಪಕತ್ವದಿಂದ ಜಗತ್ತಿನ ಪ್ರತಿಷ್ಠೆಗೆ ಕಾರಣರಾದ ನಿಮ್ಮಂತಹವರ ವರ್ತನವು ಯಾರಿಗೆ ತಾನೇ ಶ್ಲಾಘ್ಯವಲ್ಲ! ಶ್ಲೇಷಾಲಂಕಾರ.

೨೯ ವಿಲೋಕನ– ನೋಟ, ಮಹಿತಾರ್ಥ– ಮಹತ್ವವಾದ, ಶ್ರೇಯ– ಶ್ರೇಯಸ್ಸು.

೩೦ ಸ್ಪೃಹೆ– ಆಸೆ. ಧಾರ್ಷ್ಟ್ಯ– ದಿಟ್ಟತನ.

೩೧ ಗಮ್ಯ– ಹೊಂದಲು ಯೋಗ್ಯ, ಗುರುಕಾರ್ಯ– ಮಹತ್ವದ ಕೆಲಸ.

೩೨ ಉದ್ರಿಕ್ತ ವಿಷಯಾಭಿಲಾಷೆ– ಉತ್ಕಟವಾದ ಇಂದ್ರಿಯಗಳ ಉಪಟಳಕ್ಕೆ ವಶವಾಗುವುದು. ದುರ್ಗಮ್ಯ– ಹೊಂದಲು ಅಸಾಧ್ಯವಾದ, ಮೋಕ್ಷಪಥ– ಮುಕ್ತಿಮಾರ್ಗ, ನಿರಪಾಯ– ಪುನರಾವೃತ್ತಿಯಿಲ್ಲದ, ಅಗ್ರಭುವಿ– ಹೊಂದಬೇಕಾದ ಸ್ಥಾನ.

೩೩ ಅಧ್ಯಾತ್ಮದೃಷ್ಟಿ– ಅಧ್ಯಾತ್ಮಜ್ಞಾನ, ವಿಕೃತಿಬಾಹ್ಯ- ವಿಕಾರವಿಲ್ಲದವನು ಎಂದರೆ ಮಹತ್ತು ಮೊದಲಾದ ೨೪ ತತ್ವಗಳಿಗೆ ಹೊರಗಿರುವವನು. ಪ್ರಕೃತಿಭಿನ್ನ- ಸತ್ತ್ವರಜಸ್ತಮೋಗುಣಾತ್ಮಕವಾದ ಮೂಲಕಾರಣಕ್ಕಿಂತ ಬೇರೆಯಾದ, ಔದಾಶೀನ್ಯ– ಪ್ರಕೃತಿಯು ಸ್ವಾರ್ಥಪ್ರವೃತ್ತವಾದರೂ ಕೂಡ ನೀನು ಸ್ವಯಂ ಅಪ್ರಾಕೃತನಾದ್ದರಿಂದ ಆ ಕಾರ್ಯದಲ್ಲಿ ಉದಾಶೀನನಾಗಿರುವೆ. ಪೂರ್ವಜ್ಞರು- ಕಪಿಲಾದಿ ಪುರಾತನರು, ಅಜ– ಹುಟ್ಟು ಇಲ್ಲದವನು ಸಾಂಖ್ಯಮತದ ಪ್ರಕಾರ ವರ್ಣನೆ:— ಸಾಂಖ್ಯರು ಪ್ರಕೃತಿಯು ವಿಕಾರ ಹೊಂದುವ ಮಹದಾದಿ ೨೩ ತತ್ತ್ವಗಳಿಂದ ಜಗತ್ತಿನ ಪ್ರವೃತ್ತಿಗೆ ಕಾರಣವಾಗುವುದೆಂದೂ ೨೫ ನೆಯವನಾದ ಪುರುಷನು ಉದಾಶೀನನಾಗಿದ್ದರೂ ಪ್ರಕೃತಿಯಿಂದಾದ ಕಾರ್ಯಗಳ ಫಲವು ಪುರುಷನನ್ನೇ ಹೊಂದುವುದೆಂದೂ ಹೇಳುವರು.

೩೪ ಶಿಲ್ಪಿ– ಸೃಷ್ಟಿಮಾಡುವವನು, 'ಲೀಲೆ......ಅವನಿ ತಲಮಂ'- ವರಾಹ ಅವತಾರಮಾಡಿ ರಸಾತಲದಿಂದ ಮೇಲಕ್ಕೆತ್ತಿದ ಭೂಮಿಯನ್ನು. ಹಿಂದೆ ಹಿರಣ್ಯಾಕ್ಷನು ಭೂಮಿಯನ್ನು ರಸಾತಲಕ್ಕೊಯ್ದಾಗ ವಿಷ್ಣುವು ವರಾಹಾವತಾರ ಮಾಡಿ ಅವನನ್ನು ಕೊಂದು ಭೂಮಿಯನ್ನು ಮೇಲಕ್ಕೆ ಎತ್ತಿದನು ಎಂಬುದು ಇಲ್ಲಿನ ಪೂರ್ವಕತೆ (ಭಾರ. ಸ. ೫೪. ವನ. ೧೪೪, ೨೭೩. ಶಾಂತಿ. ೨೦೮. ಭಾಗವತ–೩–೧೩. ವಾಯು. ೭. ಪದ್ಮ. ೬. ೨೬೪. ಲಿಂಗ. ೯೪. ವತ್ಸ್ಯ, ಶಿವಾದಿ ಪುರಾಣಗಳು) ನಾಗರಾಜ ಸ್ತಂಭ– ಆದಿಶೇಷನೆಂಬ ಶ್ರೇಷ್ಠ ಕಂಭದ

ಶಿರಸ್ಸುಗಳಲ್ಲಿ ಆ ಭೂಮಿಯನ್ನು, ಫಣಿಗೃಹ–ಪಾತಾಳಲೋಕವೆಂಬ ಮನೆಗೆ, ಮೇಲುಭಾವಣಿ– ಮನೆಯಮೇಲಿನ ಹೊದಿಕೆ. ಶ್ಲಿಷ್ಟಪರಂಪರಿತ ರೂಪಕಾಲಂಕಾರ.

೩೫ ಅನುಪಮಿತ– ಹೋಲಿಕೆಯಿಲ್ಲದ, ದೇವದಾನವತತಿ– ದೇವಾಸುರರ ಸಮೂಹ, ಭವ-ಸಂಸಾರ, ಭಂಗಿಸು- ದಾಟಿಸು.

೩೬ ಹಗುರಿಸು–ಹಗುರವಾಗಿಮಾಡು, (ನಾಮಧಾತು) ಗೌರವ-ಪೂಜ್ಯತೆ ಮತ್ತು ಭಾರ, ಇಲ್ಲಿ ಭೂಭಾರವನ್ನು ಹಗುರಗೊಳಿಸಲು ಬಂದವನು ಭೂಮಿಗೆ ಗುರು (ಭಾರ) ವಾದೆ ಎಂದರೆ ವಿರೋಧ, 'ಪೂಜ್ಯನಾದೆ' ಎಂಬುದರಿಂದ ಪರಿಹಾರ. ವಿರೋಧಾಭಾಸಾಲಂಕಾರ.

೩೭ ನಿಜತೇಜ–ತನ್ನಪ್ರಭಾವ, ದುರ್ನಿರೀಕ್ಷ್ಯ–ನೋಡಲು ಅಶಕ್ಯವಾದ, ದೃಕ್ಪಥ- ನೋಟ.

೩೮ ಮದಮತ್ತರು- ಮದೋನ್ಮತ್ತರು, ಗರ್ವಿಷ್ಠರು, ವೈಧರ್ಮ್ಯದಿಂದ ಪ್ರತಿವಸ್ತೂಪಮಾಲಂಕಾರ.

೩೯ ನುತಿ- ಸ್ತುತಿ. ಪರ್ಯಾಯ- ಬೇರೆವಿಧ. ಹರಿ-ಸಿಂಹ ಮತ್ತು ವಿಷ್ಣು, ಶ್ಲೇಷ ಮತ್ತು ಉಪಮೆಗಳಿಗೆ ಸಾಂಕರ್ಯ.

೪೦ ಶ್ರಮವಿನಿತಗಣಿಸದೆಯೆ- ಆಯಾಸವನ್ನು ಲೇಶಮಾತ್ರವೂ ಲೆಕ್ಕಿಸದೆ, ಏಕಾಂತ- ನಿರ್ಜನಪ್ರದೇಶ.

೪೧ ಇಂದ್ರಾನುಜ- ಇಂದ್ರನ ತಮ್ಮ ಶ್ರೀಕೃಷ್ಣ, ಉಪೇಂದ್ರ ಎಂದರೆ ಅದಿತಿಗೆ ದೇವೇಂದ್ರ ಮತ್ತು ಉಪೇಂದ್ರ (ತ್ರಿವಿಕ್ರಮ) ಎಂಬುವರು ಮಕ್ಕಳು. ತ್ರಿವಿಕ್ರಮನು ವಿಷ್ಣುವಿನ ೫ ನೆಯ ವಾಮನಾವತಾರ ಇಂದ್ರಸಂದೇಶ– ಇಂದ್ರನು ಹೇಳಿಕಳುಹಿಸಿರುವ ವಿಚಾರ. ಸಕಲಕಾರ್ಯಾಗ್ರಣಿ- ಎಲ್ಲಕೆಲಸಗಳಿಗೂ ಮುಂದಾಳು. ವೃತ್ರಾರಿ- ವೃತ್ರಾಸುರನ ಶತ್ರು ಇಂದ್ರ. ಕಾವ್ಯಲಿಂಗ ಅಲಂಕಾರ.

೩೨ ದಿತಿನಂದನಂ- ದಿತಿಯ ಮಗ ಹಿರಣ್ಯಕಶಿಪು. 'ಇಂದ್ರ....ದಾತನಂ' ಇದಿ 'ಪರಮೈಶ್ವರ್ಯೇ' ಎಂಬ ವ್ಯುತ್ಪತ್ತಿಯಿಂದ ಇಂದ್ರಶಬ್ದದ ಅರ್ಥವೆನಿಸಿರುವ ಐಶ್ವರ್ಯವೆಲ್ಲವನ್ನೂ ಅಪಹರಿಸಿರುವ.

೩೩ ಅಸುರಾ..ಮೊದಲಿಗಂ– 'ಅಸ್ಯತೀತ್ಯಸುರಃ' ತಿನ್ನುವವನು ಅಸುರ. ಈಶಬ್ದಕ್ಕೆ ಇವನೇ ಮೊದಲನೆಯವನು. ದೇವತೆಗಳಿಗೆ ಮೊದಲು ಭಯವುಂಟಾದುದು ಇವನಿಂದಲೇ.

೩೪ ನಾಲ್ಕುದಿಕ್ಪಾಲಕರು– ಇಂದ್ರ ಯಮ ವರುಣ ಮತ್ತು ಕುಬೇರ ರಾಗಹೃತೆ–ಪ್ರೇಮದಿಂದ ಆಕರ್ಷಿಸಲ್ಪಟ್ಟವಳು.

೩೫ ಹಿಂದೆ ಇಂಥ ಶತ್ರುವಿಲ್ಲದ್ದರಿಂದ ದೇವತೆಗಳು 'ನಿಜರೂಪ..ಪಡೆದರ್ ತಮ್ಮ ಸ್ವರೂಪ ಸೌಂದರ್ಯಕ್ಕೆ ಅನುಗುಣವಾದ ಪ್ರಯೋಜನ ಪಡೆದರು. 'ಪುರವ.... ಘನಮುಂ'– ಪುರಗಳಿಗೆ ಪ್ರಾಕಾರ ಕಂದಕಗಳನ್ನು ರಚಿಸಿದರು. ಆಯುಧಗಳನ್ನು ಮಸೆದು ಹರಿತಮಾಡಿದರು, ಸೈನ್ಯಕ್ಕೆ ಶೂರರನ್ನು ಸೇರಿಸಿಕೊಂಡರು, ಲೋಹಗಳಿಂದ ಕವಚಗಳನ್ನು ಅಭೇದ್ಯವಾಗಿ ಮಾಡಿಕೊಂಡರು.

೩೭ ಕೇಸರ- ಸಿಂಹದ ಮುಖದಮೇಲೆ ಬೆಳೆವ ಕೂದಲು, ಭಂಗುರತೆ- ಬಳುಕುವಿಕೆ.

೩೮ ಕ್ಷತ....ಭೀಷಣಂ–ಅರಕ್ಷಕವಾದ ಸ್ವರ್ಗವನ್ನು ಹೆದರಿಸುವ, ಅಭಿಧೆ- ನಾಮಧೇಯ.

೩೯ ರಾವಣನು ತ್ರಿಲೋಕಾಧಿಪತ್ಯವನ್ನು ಬಯಸಿ ಶಿವನನ್ನು ಕುರಿತು ಉಗ್ರ ತಪಸ್ಸುಮಾಡಿದನು. ಶಿವನನ್ನು ಮೆಚ್ಚಿಸಲು ಅವನು ತನ್ನ ತಲೆಗಳನ್ನು ಒಂದೊಂದಾಗಿ ಕತ್ತರಿಸಿ ಶಿವನಿಗೆ ಅರ್ಪಿಸತೊಡಗಿದನು. ಅವನು ತನ್ನ ಹತ್ತನೇ ತಲೆಯನ್ನು ಕಡಿಯಲು ಉದ್ಯುಕ್ತನಾದಾಗ ಶಿವನು ಪ್ರತ್ಯಕ್ಷನಾದನು. ಆದರೆ ಉಗ್ರಭಕ್ತ ರಾವಣನು ಶಿವಸಾಕ್ಷಾತ್ಕಾರವನ್ನು ಒಂದು ವಿಘ್ನವೆಂದೇ ಭಾವಿಸಿದನಂತೆ. ಏಕೆಂದರೆ ಶಿವಪ್ರೀತ್ಯರ್ಥವಾಗಿ ತನ್ನ ಹತ್ತನೆಯ ತಲೆ ಕತ್ತರಿಸುವುದೂ ಅವನಿಗೆ ಪ್ರಿಯಕರವಾಗಿತ್ತು.

೫೦ ಪರಿವೃತ್ತಿ ಅಲಂಕಾರ.

೫೧ ಸಮುಚ್ಚಯಾಲಂಕಾರ.

೫೨ ಯುದ್ಧದೊಳಗಿವನಟ್ಟ....' ಸ್ವರ್ಗಗಜ - ಐರಾವತ. ಸುರಪಾಶ್ವ ಉಚ್ಚೈಃಶ್ರವಸ್ ಎಂಬ ಕುದುರೆ. ಇವೆರಡೂ ಸಮುದ್ರಮಥನ ಕಾಲದಲ್ಲಿ ಹುಟ್ಟಿದವುಗಳು. ಬಲರಿಪು–ದೇವೇಂದ್ರ.

೫೩ ಅಸ್ಥಿರದೃಶ-ಚಂಚಲಾಕ್ಷ. ಕೌಶಿಕ–ಇಂದ್ರ ಮತ್ತು ಗೂಬೆ, ರವಿರಶ್ಮಿ-ಸೂರ್ಯಕಿರಣ, ರೂಪಕ ಮತ್ತು ಶ್ಲೇಷಾಲಂಕಾರಗಳು.

೫೫ ಇಲ್ಲಿ ಆನೆ ಮತ್ತು ರಾವಣರಿಗೆ ಶ್ಲೇಷ. ಧನದ- ಕುಭೇರ, ಶಂಖ-ಶಂಖಗಳು ಮತ್ತು ಶಂಖವೆಂಬ ನಿಧಿ, ಗಾಂಭೀರ್ಯ- ಆಳ ಮತ್ತು ಗೌರವ, ಪುಷ್ಪಕ- ಹೂ ಮತ್ತು ಪುಷ್ಪಕವಿಮಾನ, ಕಂಪನ- ಕ್ಷೋಭೆ ಮತ್ತು ಭಯ.

೫೬ ಬಿಟ್ಟವನು–ಪ್ರಯೋಗಿಸಿದವನು, ವಿಷಮಾಲಂಕಾರ.

೫೭ ಶಾಙ್ರ್ಗಧನು–ಶೃಂಗ (ಕೊಂಬು) ದಿಂದಮಾಡಿದ ಬಿಲ್ಲು. ಪ್ರೇತಪತಿ ಕೋಣ–ಯಮನ ಮಹಿಷ. ವಿರೋಧಾಭಾಸ. ಅದರಿಂದ ಅನುಪ್ರಾಣಿತವಾದ ನಾಚಿಕೆಯ ಭಾರತ್ವೋತ್ಪ್ರೇಕ್ಷೆ.

೫೮ ಶುಚಿಯ ಕಾಲದೊಳ್–ಶುಚಿ-ಗ್ರೀಷ್ಮ, ಮತ್ತು ಅನುಪಹತ ಆಚಾರ, 'ಸಂಕುಚಿತ....ಕರ'- ಸ್ಪರ್ಶಿಸಲು ಹಿಂದೆಗೆವ ಕಿರಣ ಮತ್ತು ಹಸ್ತ. ಬೆವರುಹನಿ ಮುತ್ತುಗಳು–ಬೆವರು ಹನಿಗಳೆಂಬ ಮುತ್ತುಗಳು. ಇಲ್ಲಿ ಪ್ರಸ್ತುತ ಸೂರ್ಯ ವಿಶೇಷಣ ಮಾತ್ರ ಸಾಮ್ಯದಿಂದ ಅಪ್ರಸ್ತುತ ಪ್ರಸಾಧನ ಪ್ರತೀತಿಯಾಗುವುದ ರಿಂದ ಸಮಾಸೋಕ್ತಿ.

೫೯ ಉತ್ಸಹಿಪಪಟು- ಉತ್ಸಾಹಗೊಳಿಸುವುದರಲ್ಲಿ ಸಮರ್ಥನಾದ. ನರ್ಮ ಸಚಿವ- ಕ್ರೀಡಾ ಸಂಬಂಧವುಳ್ಳ ಅಧಿಕಾರಿ. ಚಂದ್ರಿಕೆ ಮತ್ತು ಚತುರೋಕ್ತಿಗ ಳಿಂದ ರಾಗಂ- ಪ್ರೀತಿಯನ್ನು, ಇಲ್ಲಿ ಪ್ರಕೃತ ಚಂದ್ರನಿಗೂ ಅಪ್ರಕೃತ ನರ್ಮ ಸಚಿವನಿಗೂ ಶ್ಲೇಷ.

೬೦ ವಿಭ್ರಮ–ವಿಲಾಸಕ್ಕಾಗಿ ಧರಿಸುವ, ದಂತಪತ್ರ-ದಂತಮಯ ಪತ್ರಗಳ ಆಭರಣ, ಮಾನಿ-ಅಭಿಮಾನಿ ಉತ್ಪ್ರೇಕ್ಷಾಲಂಕಾರ.

೬೧ ಅಂತವುರ–ಅಂತಃಪುರ, ಅನಿಲ- ಗಾಳಿ. ಒಬ್ಬನ ಬುದ್ಧಿವಂತಿಕೆ ಯಿಂದ ಬಹುಜನರಿಗೆ ಉಪಕಾರವಾಯಿತೆಂದು ತಾತ್ಪರ್ಯ.

೬೨ ಪರಿಭವ - ಅಪಮಾನ, ಅನಲ - ಅಗ್ನಿ. ಕರ್ಬೊಗೆ– ಕಪ್ಪುಹೊಗೆ. ಅತಿಶಯೋಕ್ತಿ ಅಲಂಕಾರ.

೬೩ ಕ್ರೂರಿಯಾದ ರಾವಣನನ್ನು ಸೇವಿಸುವುದಕ್ಕಾಗಿ ಪರಮರ್ಮ- ಹೃದಯಾದಿ ಜೀವಸ್ಥಾನಗಳು ಮತ್ತು ಕುಲಾಚಾರ ವ್ರತಗಳು, ವೇಧಿಸಲು- ಭೇದಿಸಲು, 'ತನ್ನೆರಡು....ತ್ಯಜಿಪ'–ಎರಡು ನಾಲಗೆ ಇರುವ ಸರ್ಪತ್ವದೋಷ ಎಂದರೆ ದೃಷ್ಟಿವಿಷತ್ವ ಮುಂತಾದುದು ಮತ್ತು ಚಾಡಿ ಹೇಳುವಿಕೆ, ಅದನ್ನು ಬಿಡುವ ಕುಟಿಲಗತಿ ತೊರೆದಿರ್ಪ- ನೇರವಾಗಿ (ಋಜು) ನಡೆಯುವ ಮತ್ತು ಕಪಟವಿಲ್ಲದಿರುವ, ಸಕರ್ಣಕಗಳು– ಕರ್ಣಗಳಿಂದ ಕೂಡಿದವು ಎಂದರೆ ಚಕ್ಷುಶ್ರವಗಳೆನಿಸಿರುವ ಮತ್ತು ಚಕ್ಷುಶ್ರವಗಳು ಎಂದರೆ ಸರ್ಪಗಳಿಗೆ ಕಣ್ಣು ಮತ್ತು ಕಿವಿಗಳಿಗೆ ಒಂದೇ ಇಂದ್ರಿಯವೆಂದು ಭಾವ. ಫಣಿಕುಲ–ಸರ್ಪಸಮೂಹ. ಭುಜಗತ್ವ-ಸರ್ಪತ್ವ ಮತ್ತು ವಿಟತ್ವ, ಇಲ್ಲಿ ಸರ್ಪಗಳು ಮತ್ತು ವಿಟರಪರವಾಗಿ ಅರ್ಥವಿರುವುದರಿಂದ ಎರಡಕ್ಕೂ ಶ್ಲೇಷ. ಅಂದರೆ ರಾವಣನ ಅಧಿಕಾರಾವಧಿಯಲ್ಲಿ ಸರ್ಪಗಳು ಮತ್ತು ಖಲ (ವಿಟ) ರು ವಕ್ರತ್ವವನ್ನು ಬಿಟ್ಟು ಋಜುಗತಿಯುಳ್ಳವರಾಗಿ ವರ್ತಿಸುತ್ತಿದ್ದರೆಂದು ತಾತ್ಪರ್ಯ. ಸಮಾಸೋಕ್ತಿ ಅಲಂಕಾರ. ಪ್ರಸ್ತುತ ಸರ್ಪವಿಶೇಷ ಸಾಮ್ಯದಿಂದ ಅಪ್ರಸ್ತುತ ವ್ಯವಹಾರ ಪ್ರತೀತಿ.

೬೪ ಸ್ಮರತಪ್ತ- ಮನ್ಮಥ ವಿಕಾರದಿಂದ ಬಳಲಿದ, ಸುರಬಂದಿ– ಬಂಧಿತರಾದ ಸುರಸ್ತ್ರೀಯರು, ಇಲ್ಲಿ ತಪ್ತರಾದವರಿಗೆ ಶೈತ್ಯೋಪಚಾರಕ್ಕೆ ಬದಲಾಗಿ ಉಷ್ಣೋಪಚಾರದಿಂದ ಉಪಶಮನವನ್ನು ಹೇಳಿರುವುದರಿಂದ ವಿರುದ್ಧ ಕಾರ್ಯೋತ್ಪತ್ತಿ ರೂಪವಾದ ವಿಷಮಾಲಂಕಾರ.

೬೬ ಒಮ್ಮೆಯೇ ಸರ್ವಋತುಗಳ ಅಸಂಬಂಧವಿರುವಲ್ಲಿ ಸಂಬಂಧವನ್ನು ಹೇಳಿದ್ದರಿಂದ ಅತಿಶಯೋಕ್ತಿ ಅಲಂಕಾರ.

೬೮ ಅಜ- ಹುಟ್ಟಿಲ್ಲದವ. ಅಮಾನವ- ಮನುಷ್ಯನಲ್ಲದ (ಮಹಾನುಭಾವ) ಕಾರಣದಿಂದ ಕಾರ್ಯ ಸಮರ್ಥನರೂಪವಾದ ಅರ್ಥಾಂತರನ್ಯಾಸ, ಅಮಾನವನಾದರೂ ಮನುಕುಲದಲ್ಲಿ ಜನಿಸಿದನೆಂದರೆ ವಿರೋಧ, ಮಾನವ-ರಾಮಾವತಾರ ಧರಿಸಿದನು ಎಂಬುದರಿಂದ ಪರಿಹಾರ. ವಿರೋಧಾಭಾಸಾಲಂಕಾರ.

೬೯ ಭೂಮಿಕೆ–ವೇಷ, ಹೇಗೆ ನಟನು ಬೇರೆ ವೇಷ ಧರಿಸಿ ಆಯಾ ವೇಶ ಭಾಷಾದಿಗಳಿಂದ ತೋರುವನೋ ಅದರಂತೆ ಇವನೂ ಸಹ ಮಾನುಷ ವೇಷ ಧರಿಸಿ ಬೇರೆಯವನಂತೆ ಕಾಣುವನು.

೭೦ 'ನಿಜಕರಾ......ಭೂಭುಜಂ'–ತನ್ನ ಕಪ್ಪಕಾಣಿಕೆಗಳಿಂದ ರಾಜರನ್ನು ವಶಪಡಿಸಿಕೊಂಡು ಮತ್ತು ಕಿರಣಗಳಿಂದ ಪರ್ವತಗಳನ್ನು ವ್ಯಾಪಿಸಿ, ಉಗ್ರ ತೇಜ ಅಧಿಕ ಪರಾಕ್ರಮ ಮತ್ತು ಪ್ರಕಾಶ, ಇಲ್ಲಿ ಶ್ಲೇಷಾನುಪ್ರಾಣಿತ ಉತ್ಪ್ರೇಕ್ಷಾಲಂಕಾರ,

೭೧ 'ಸ್ವೇಚ್ಛೆ-....ಬಲದೆ'- ಸ್ವಸಾಮರ್ಥ್ಯದಿಂದ, ನಿಗ್ರಹಾನುಗ್ರಹ- ಗೆಲ್ಲುವುದು ಅನುಗ್ರಹಿಸುವುದು.

೭೨ ವಿಜಿಗೀಷು- ಗೆಲ್ಲಬಯಸಿದವನು, ನಿಶ್ಚಲ ಪ್ರಕೃತಿ- ಸ್ಥಿರಸ್ವಭಾವ, ಉಪಮೋಪಮೇಯ ಪುರಸ್ಕೃತ ಅರ್ಥಾಂತರನ್ಯಾಸ.

೭೩ 'ಯಮರಾಜನತಿಥಿಯಂ ಮಾಳ್ಪುದು- ಕೊಲ್ಲಬೇಕು. ವಿಪದಕಾರಿ-ವಿಪತ್ತನ್ನುಂಟುಮಾಡುವ, ಸಾಮಾನ್ಯದಿಂದ ವಿಶೇಷ ಸಮರ್ಥನರೂಪ ಅರ್ಥಾಂತರನ್ಯಾಸಾಲಂಕಾರ.

೭೪ ಸಾಂದ್ರತರ- ದಟ್ಟವಾದ. ಮೊದಲು ಮನಸ್ಸು ವಿಕ್ಷೋಭಗೊಂಡಿದ್ದುದರಿಂದ ಇಂದ್ರನು ಎಲ್ಲ ಭೋಗವನ್ನು ಬಿಟ್ಟಿದ್ದನು. ಈಗ ನಿರ್ಭಯವಾಗಿ ನಿನ್ನ ಅನುಗ್ರಹದಿಂದ ತನ್ನ ರಾಜ್ಯವನ್ನು ಭೋಗಿಸುವನು ಎಂದು ಭಾವ.

೭೫ ನಭಕಡರಿ- ಗಗನಕ್ಕೆ ಏರಿ, ಮುಂಚಂದ್ರ ಸಿರಿತಳೆಯೆ–ಎದುರಿನಲ್ಲಿ ಚಂದ್ರಶ್ರೀಯನ್ನು ತಳೆಯಲು ಬಳಿಕ 'ಆಗಲಿ' ಎಂದ, ಚೈದ್ಯಂಗೆ ಕನಲಿ-

ಶಿಶುಪಾಲನ ವಿಷಯವಾಗಿ ಕೋಪಗೊಂಡು, 'ಭ್ರುಕುಟಿಛಲಕೇತು'–ಹುಬ್ಬು ಗಂಟಿಕ್ಕುವ ನೆಪದಿಂದ ಉತ್ಪಾತಸೂಚಕವಾದ ಧೂಮಕೇತು. ಅಪಹ್ನವಾಲಂಕಾರ. ಚಂದ್ರ ಸಿರಿತಳೆಯೆ ಎಂಬಲ್ಲಿ ಮುನಿಗೆ ಚಂದ್ರಶ್ರೀಯ ಯೋಗವಿಲ್ಲದ್ದರಿಂದ ಅದಕ್ಕೆ ಸದೃಶವಾದ ಶ್ರೀಯನ್ನು ಎಂಬ ಸಾದೃಶ್ಯಕ್ಕೆ ಆಕ್ಷೇಪವುಂಟಾಗಿ ಅಸಂಭವದ್ವಸ್ತು ಸಂಬಂಧರೂಪವಾದ ನಿದರ್ಶನಾಲಂಕಾರ. ಇವೆರಡಕ್ಕೂ ಸಂಕರ. ಮಂಗಲಕರ ಅರ್ಥವುಳ್ಳ ಶ್ರೀ - ಸಿರಿ ಶಬ್ದಪ್ರಯೋಗವನ್ನು ಪ್ರತಿಸರ್ಗಾಂತ್ಯದಲ್ಲಿ ಕವಿ ಸೇರಿಸುವ ವಾಡಿಕೆ ಇದೆ.

ಎರಡನೆಯಸರ್ಗ

೧ ಸುರ-ಮಿತ್ರಕಾರ್ಯಂಗಳು– ಸುರಕಾರ್ಯ– ದೇವೇಂದ್ರನು ಸೂಚಿಸಿದ ಶಿಶುಪಾಲನಮೇಲೆ ದಂಡೆತ್ತಿಹೋಗುವ ಕಾರ್ಯ. ಮಿತ್ರಕಾರ್ಯ– ಯುಧಿಷ್ಠಿರನ ಆಹ್ವಾನದಂತೆ ಇಂದ್ರಪ್ರಸ್ಥಪುರಕ್ಕೆ ತೆರಳುವಕಾರ್ಯ.

೨ 'ನಭದಿದಿರೊಳು....ಹರಿಯು'–ಕೃಷ್ಣನು ಉದ್ಧವ ಬಲರಾಮರೊಡನೆ ಮಂತ್ರಭವನಕ್ಕೆ ಹೋದುದು. ನಭಕ್ಕೆ ಎದುರಾಗಿ ಗುರುಶುಕ್ರ ನಕ್ಷತ್ರಗಳ ಜೊತೆಗೆ ಉದಯಿಸುವ ಚಂದ್ರನ ಕಾಂತಿ ತಳೆದಂತಿತ್ತು.

೬ ವಿಪ್ರತಿಷೇಧ– ವಿರೋಧ, ಎಡರು– ತೊಂದರೆ.

೭ ಇಲ್ಲಿ ಸ್ವಾಭಾವಿಕವಾಗಿ ವರ್ಣಶುದ್ಧಿಗೆ ಸ್ನಾನಹೇತುಕತ್ವವನ್ನು ಉತ್ಪ್ರೇಕ್ಷಿಸಿದೆ. ಶ್ರೀಕೃಷ್ಣನು ಸ್ಮಿತಪೂರ್ವಭಾಷಿ ಎಂದು ತಾತ್ಪರ್ಯ.

೮ ಪೂರ್ವರಂಗ– ನಾಟಕಾರಂಭವಾಗುವುದಕ್ಕೆ ಮೊದಲು ರಂಗವಿಘ್ನ ಪರಿಹಾರಕ್ಕಾಗಿ ಮಾಡುವ ಪೂಜಾದಿ ಕಾರ್ಯಗಳು. ಪ್ರತಿವಸ್ತೂಪಮಾಲಂಕಾರ.

೧೦ ಪಥ್ಯ– ಹಿತ, ಮತ್ತು ರೋಗ ನಿವಾರಣಕ್ಕಾಗಿ ವೈದ್ಯರು ಹೇಳುವ ನಿಯಮ. ಉಪಮಾಲಂಕಾರ.

೧೧ ಸಾತ್ವತೀಸೂನು– ಶಿಶುಪಾಲ. ಪಾಂಡವರ ತಾಯಿ ಕುಂತಿ ಮತ್ತು ಶಿಶುಪಾಲನ ತಾಯಿ ಶ್ರುತವ್ರತೆ ಅಥವಾ ಸಾತ್ವತಿ ಇಬ್ಬರೂ ಅಕ್ಕತಂಗಿಯರು.

(ಭಾಗ. ೭–೧, ೯–೨೪) ಶಿಶುಪಾಲನಿಗೆ 'ಸುನೀಥ' ನೆಂದು ನಾಮಾಂತರ. ಶಿಶುಪಾಲನು ಹುಟ್ಟಿದಾಗ ಅವನಿಗೆ ನಾಲ್ಕು ತೋಳುಗಳು ಮೂರು ಕಣ್ಣುಗಳೂ ಇದ್ದವು. ಮಗನನ್ನು ನೋಡಿ ತಂದೆ ತಾಯಿಗಳು ಹೆದರಿದರು. ಆಗ "ಒಬ್ಬ ಮಹಾಪುರುಷನ ಸ್ಪರ್ಶದಿಂದ ಹಣೆಗಣ್ಣು ಮತ್ತು ಎರಡು ತೋಳುಗಳೂ ಇಂಗಿಹೋಗುವುವು, ಆತನೇ ಇವನಿಗೆ ಮೃತ್ಯುವಾಗುವನು" ಎಂದು ಆಕಾಶ ವಾಣಿಯಾಯಿತು. ಇದನ್ನು ಕೇಳಿ ಮಗನನ್ನು ಬಂದ ಬಂದವರ ಕೈಗೆ ಕೊಡ ಲಾರಂಭಿಸಿದರು. ಒಮ್ಮೆ ಕೃಷ್ಣನು ಮಗುವನ್ನು ಎತ್ತಿಕೊಂಡ ಕೂಡಲೇ ಹಣೆ ಗಣ್ಣು ಮತ್ತು ಎರಡು ಕೈಗಳು ಮಾಯವಾದವು. ಆಗ ಸಾತ್ವತಿಯು ಕೃಷ್ಣನೇ ತನ್ನ ಮಗನಿಗೆ ಶತ್ರುವೆಂದು ಹೆದರಿ 'ನನ್ನ ಮಗನು ಒಂದುನೂರು ತಪ್ಪುಗಳನ್ನು ಮಾಡುವವರೆಗೂ ಕ್ಷಮಿಸಬೇಕೆಂದು ಯಾಚಿಸಿದಳು. ಅದಕ್ಕೆ ಕೃಷ್ಣ ಒಪ್ಪಿದನು. (ಭಾರ. ಸಭಾ. ೬೬)

೧೨ ಅರ್ಥಾಂತರನ್ಯಾಸಾಲಂಕಾರ.

೧೩ ಪ್ರಸ್ತಾಪಕನುಗುಣಂ– ಸಂದರ್ಭೋಚಿತವಾಗಿ. ಪ್ರಕೃತಿಯಿಂ– ಸ್ವಭಾವದಿಂದ, ಅರ್ಥಾಂತರನ್ಯಾಸ.

೧೪ ಪ್ರತಿಸಂಹೃತಿಯಪ್ಪೊಂದಿದ– ಬಲರಾಮನು ಮಾತನಾಡಲಿ ಎಂಬ ಉದ್ದೇಶದಿಂದ ತನ್ನ ಮಾತನ್ನು ತಡೆದು, ಸಿದ್ಧಾಂತಪಕ್ಷ– ನಿರ್ಣಯಪಕ್ಷ. ವಾದದಲ್ಲಿ ಪೂರ್ವಪಕ್ಷ ಮತ್ತು ಸಿದ್ಧಾಂತ ಪಕ್ಷಗಳೆಂದು ಎರಡು ಪಕ್ಷಗಳಿರು ತ್ತವೆ. ಪೂರ್ವಪಕ್ಷದವರು ತಮ್ಮ ವಾದವನ್ನು ಸಮರ್ಥಿಸಿದ ಮೇಲೆ ಸಿದ್ಧಾಂತ ಪಕ್ಷದವರು ಪೂರ್ವಪಕ್ಷದ ಕೋಟಿಗಳಿಗೆ ಉತ್ತರವಿತ್ತು ತಮ್ಮ ಮತವನ್ನು ಸಮರ್ಥಿಸುವರು. ಇಲ್ಲಿ ಮೊದಲು ಮಾತನಾಡಿದ ಬಲರಾಮನ ಮಾತುಗಳು ಪೂರ್ವಪಕ್ಷ. ಉದ್ಧವನ ಮಾತು ಸಿದ್ಧಾಂತಪಕ್ಷ.

೧೬ ಮದಲಪಾಟಲದ್ಯುತಿ– ಮದ್ಯಪಾನಮಾಡಿದ್ದರಿಂದ ಕೆಂಪಾದ, ವದನ ದುಚ್ಛಿಷ್ಟ– ಬಾಯ್ದಂಬಲ, ಉಚ್ಛಿಷ್ಟ (ಎಂಜಲು) ವು ಅಪವಿತ್ರವಾದರೂ 'ರತಿಕಾಲೇ ಮುಖಂ ಸ್ತ್ರೀಣಾಂ ಶುದ್ಧಮಾಖೇಟಿಕೇಶುನಾಂ' ಎಂಬ ಉಕ್ತಿಯಂತೆ ರತಿಕಾಲದಲ್ಲಿ ಸ್ತ್ರೀಯರ ಮುಖವು ಶುದ್ಧ. ವಿರೋಧಾಭಾಸಾಲಂಕಾರ.

೧೭ ಮುಖಪವನ– ನಿಶ್ವಾಸಮಾರುತ, ಉಸಿರು. ಮ್ಲಾನಗೊಳಿಪ– ಬಾಡಿಸುವ. ಅತಿಶಯೋಕ್ತಿ.

೧೮ ಕ್ರೋಧಾರುಣಾಂಗ– ಕೋಪದಿಂದ ಕೆಂಪಾದ ಶರೀರ. ಉಪಮಾಲಂಕಾರ.

೧೯ ಮಣಿಶಕಲ– ಮಣಿಯ ಚೂರು. ನೀಲೋತ್ತರೀಯ– ನೀಲಾಂಬರ. ಮಾಂದಳಿರು- ಮಾವಿನ ಚಿಗುರು. ಕೃಷ್ಣಲೋಹಿತ- ಕಪ್ಪು ಮತ್ತು ಕೆಂಪು. ಇಲ್ಲಿ ಅನ್ಯಕಾಂತಿಗೆ ಅನ್ಯದೀಯತ್ವ ಯೋಗವು ಇಲ್ಲದುದರಿಂದ ಸಾದೃಶ್ಯವು ಆಕ್ಷಿಪ್ತವಾಗುವುದರಿಂದ ನಿದರ್ಶನಾಲಂಕಾರ.

೨೦ ಮುಖವಾಸ– ಮುಖಗಂಧ, ಆಮೋದ- ಸುವಾಸನೆ, ಉದ್ವಮನ- ಹೊರಗೆಡಹು (ವಮನಮಾಡು) ತದ್ಗುಣಾಲಂಕಾರ. (ತದ್ಗುಣಸ್ವಗುಣತ್ಯಾಗಾದನ್ಯದೀಯಗುಣಗ್ರಹಃ)

೨೧ ತದ್ಗುಣಾಲಂಕಾರ ಮತ್ತು ಅಪಹ್ನವಾಲಂಕಾರಗಳಿಗೆ ಸಂಕರ.

೨೨ ಇಲ್ಲಿ ಸಮಾನ ಧರ್ಮಗಳಿಗೆ ಬಿಂಬ ಪ್ರತಿಬಿಂಬ ಭಾವವಿರುವುದರಿಂದ ದೃಷ್ಟಾಂತಾಲಂಕಾರ.

೨೩ ಪ್ರತಿಕೂಲವಾದಿ– ವಿರುದ್ಧವಾಗಿ ವಾದಿಸುವವನು. ಅತಿಶಯೋಕ್ತಿ ಮತ್ತು ಶಕ್ಯವಸ್ತುಕಾರಣರೂಪ ವಿಶೇಷಾಲಂಕಾರ. (ವಾಗೀಶರನ್ನು ಮೂಕಗೊಳಿಸುವುದು, ಜಡರನ್ನು ವಕ್ತೃಗಳನ್ನಾಗಿ ಮಾಡುವುದೇ ವಿಶೇಷ.)

೨೪ ಸಂಧ್ಯಾದಿಷಡ್ಗುಣಗಳು– ಸಂಧಿ- ಶತ್ರುವಿನೊಡನೆ ಸಂಧಾನ, ವಿಗ್ರಹ ಯುದ್ಧ, ಯಾನ- ಯುದ್ಧಕ್ಕಾಗಿ ಸೈನ್ಯಸಮೇತ ಪ್ರಯಾಣ, ಆಸನ- ದೇಶಕಾಲಾದಿಗಳನ್ನು ನಿರೀಕ್ಷಿಸಿ ದುರ್ಗಾದಿಗಳನ್ನು ಸಿದ್ಧಪಡಿಸುವುದು, ದ್ವೈಧಂ- ಇಬ್ಬರು ಶತ್ರುಗಳು ದಂಡೆತ್ತಿ ಬರಲು ಒಬ್ಬನೊಡನೆ ಸಂಧಿಮಾಡಿಕೊಂಡು ಮತ್ತೊಬ್ಬನ ಮೇಲೆ ಯುದ್ಧಹೂಡುವುದು, ಆಶ್ರಯ:– ಬಲಿಷ್ಠನನ್ನು ಆಶ್ರಯಿಸುವುದು, ಇವೇ ರಾಜರಿಗೆ ಬೇಕಾದ ಷಡ್ಗುಣಗಳು. ಶಕ್ತಿತ್ರಯ– ಪ್ರಭು, ಮಂತ್ರ, ಉತ್ಸಾಹಶಕ್ತಿಗಳು, ಮೂಬಗೆಯ ಸಿದ್ಧಿಗಳು–ಶಕ್ತಿತ್ರಯದಿಂದ

ಫಲಿಸಿದ ಸಿದ್ಧಿಗಳು ಪ್ರಭುಸಿದ್ಧಿ, ಮಂತ್ರಸಿದ್ಧಿ, ಉತ್ಸಾಹಸಿದ್ಧಿ ಪ್ರದ್ಯ್ರ
ಉದಯಗಳು- ವೃದ್ಧಿ, ಕ್ಷಯ, ಸ್ಥಾನಗಳು,

೨೮ 'ಸ್ಕಂದ..ಬೌದ್ಧರಲ್ಲಿ'- ರೂಪ, ವೇದನಾ, ವಿಜ್ಞಾನ, ಸಂಜ್ಞಾ ಮತ್ತು ಸಂಸ್ಕಾರ ಎಂಬ ಪಂಚಸ್ಕಂದಗಳ ಹೊರತು ಜೇರೆ ಆತ್ಮನನ್ನು ಬೌದ್ಧರು ಒಪ್ಪು ವುದಿಲ್ಲ. ರೂಪ- ವಿಷಯಪ್ರಪಂಚ, ವೇದನಾ- ಆ ವಿಷಯ ಪರಿಜ್ಞಾನ ವಿಜ್ಞಾನ- ಆಲಯ ವಿಜ್ಞಾನಸಂತಾನ, ಸಂಜ್ಞಾ- ನಾಮಪ್ರಪಂಚ, ಸಂಸ್ಕಾರ- ವಾಸನಾಪ್ರಪಂಚ, 'ಸಂಧ್ಯಾದಿ....ದಲ್ತೆ'- ಆದರಂತೆ ರಾಜರಿಗೆ ಸಹಾಯ- ಕಾರ್ಯಾರಂಭೋಪಾಯ, ಸಾಧನೋಪಾಯ, (ಪುರುಷ, ದ್ರವ್ಯ, ಸಂಪತ್, ಎಂಬ ಸಾಧನಗಳು,) ದೇಶಕಾಲವಿಭಾಗ, ವಿಪತ್ತಿಗೆ ಪ್ರತೀಕಾರ, ಮತ್ತು ಸಿದ್ಧಿ ಎಂಬ ಪಂಚಾಂಗಗಳ ಹೊರತು ಜೇರೆ ಮಂತ್ರವಿಲ್ಲ. ಉಪಮಾಲಂಕಾರ.

೨೯ ಸಂವರಣ- ಮುಚ್ಚಿರುವಿಕೆ. ದೃಢಗುಪ್ತ- ಬಲವಾಗಿ ಮರೆಮಾಚಿದ, ಪರಭೇನಶಂಕೆ- ಶತ್ರುಗಳು ಪಿತೂರಿಮಾಡುವರೆಂಬ ಸಂದೇಹ,

೩೧ ತೃಪ್ತಿಯೋಗ- ಯಥಾಲಾಭ ಸಂತುಷ್ಟಿ. ಉಪಮಾ ಮತ್ತು ಏಕಾ ವಲಿ ಅಲಂಕಾರ.

೩೨ ಕೃತಕೃತ್ಯದೈವ- ಅಷ್ಟರಿಂದಲೇ ತಾನು ಕೃತಾರ್ಥನಾದೆನೆಂದು ಭಾವಿ ಸಿರುವ ವಿಧಿ.

೩೩ ಉದಯಿಸು- ಹುಟ್ಟು, ಉಪಮಾಲಂಕಾರ.

೩೩ ಅಸುರದ್ರುಹರು- ದೇವತೆಗಳು, ಸೈಂಹಿಕೇಯ- ಸಿಂಹಿಕೆ ಎಂಬುವಳ ಮಗ ರಾಹು, ಅರ್ಥಾಂತರನ್ಯಾಸ.

೩೬ 'ಉಪಕಾರ......ನೆನಿಕುಂ'- ಉಪಕಾರಮಾಡಿದವನು ಕೃತ್ರಿಮಮಿತ್ರ, ಅಪಕಾರಮಾಡಿದವನು ಕೃತ್ರಿಮಶತ್ರು, ಇವರು ಶ್ರೇಷ್ಠ. 'ಕಾರ್ಯ....ರಲ್ತೆ'- ಸಹಜರು ಮಿತ್ರರು- ತಾಯಿಯಕಡೆಯವರು, ಪಿತೃಷ್ವಸೇಯರು, ಸಹಜಶತ್ರು- ದಾಯಾದಿಗಳು, ಪ್ರಾಕೃತರು- ಪ್ರಕೃತಿಯಿಂದ ಸಿದ್ಧರಾದವರು. ಹಿಂದೆ ಹೇಳಿದ

ಸಹಜಕೃತ್ರಿಮರಲ್ಲದವರು ಎಂದರ್ಥ. (ತನ್ನದೇಶದ ಪಕ್ಕದರಾಜ ಪ್ರಾಕೃತಶತ್ರು, ಆ ರಾಜ್ಯದ ಆಚೆ ರಾಜ್ಯದ ರಾಜ ಪ್ರಾಕೃತಮಿತ್ರ) ಈ ಸಹಜ ಮತ್ತು ಪ್ರಾಕೃತ ಶತ್ರುಮಿತ್ರರು ಕಾರ್ಯವಶದಿಂದ ಮಿತ್ರರೂ ಆಗಬಹುದು, ಶತ್ರುಗಳೂ ಆಗ ಬಹುದು. ಪ್ರಕೃತದಲ್ಲಿ ಶಿಶುಪಾಲನು ನಮಗೆ ಪೈತೃಷ್ವಸೇಯನಾದ್ದರಿಂದ ಸಹಜಮಿತ್ರನಾಗಿದ್ದಾನೆ. ಅವನಲ್ಲಿ ಸಂಧಾನಮಾಡಬೇಕೇ ಹೊರತು ಯುದ್ಧ ಹೂಡಬಾರದು ಎಂದರೆ ಮುಂದಿನಪದ್ಯ ಹೊರಟಿದೆ.

೩೭ ಸಂಧಿಮಾಡಲುಬಹುದು.

೩೮ ರಾಕ್ಷಸಾತ್ಮಕಕ್ರಮ– ರಾಕ್ಷಸ, ಗಾಂಧರ್ವ ಎಂಬ ವಿಧಿಗಳು ಕ್ಷತ್ರಿಯ ರಿಗೆ ಉಕ್ತವಾಗಿವೆ. ವಿಪ್ರಿಯ- ವಿರೋಧ, ಅರ್ಥಾಂತರನ್ಯಾಸ.

೪೦ ಬಭ್ರು- ಅಕ್ರೂರ, ಅರ್ಥಾಂತರನ್ಯಾಸಾಲಂಕಾರ.

೪೧ ಶ್ರುತಶ್ರವಾಸುತ-ಸಾತ್ವತಿಯ ಮಗನಾದ ಶಿಶುಪಾಲ. ಕೃತ್ರಿಮಾರಿತ್ವ-ಕೃತ್ರಿಮಶತ್ರುತ್ವ.

೪೨ ಸಾಮರ್ಷ- ಸರೋಷ, ಎಲರ್- ಗಾಳಿ, ನಿದರ್ಶನಾಪ್ರಭೇದ.

೪೭ ಜಾತಿ- ಬ್ರಾಹ್ಮಣಾದಿ ಜಾತಿ, ಗುಣ- ಶೌರ್ಯಾದಿ ಗುಣಗಳು, ಕ್ರಿಯೆ-ಯಾಗ ಅಧ್ಯಯನ ಮೊದಲಾದವು, ಸುಪ್ರಯೋಜನ- ಸುಕೃತಾದಿ ಪುರುಷಾರ್ಥ ಮತ್ತು ವ್ಯವಹಾರ ಯೋಗ್ಯತ್ವ, ಎರಡನೆಯ ಅರ್ಥ:— ಗೋತ್ವಾದಿ ಜಾತಿ, ಶುಕ್ಲತ್ವಾದಿ ಗುಣ, ಪಾಚಕತ್ವಾದಿ ಕ್ರಿಯೆ. ಡಿತ್ಥಾದಿಶಬ್ದ - ಸ್ವೇಚ್ಛೆಯಿಂದ ಉಚ್ಚರಿಸುವ ಪದ, ಜಾತ್ಯಾದಿಗಳಿಲ್ಲದ ನಿರರ್ಥಕ ಶಬ್ದವೆಂದು ಅರ್ಥ.

೪೮ ಉಪಮಾನೋಪಮೇಯಗಳಿಗೆ ವಿಶೇಷವಿರುವುದರಿಂದ ವ್ಯತಿರೇಕಾ ಲಂಕಾರ.

೪೯ ಸ್ವರ್ಭಾನು- ರಾಹು, ಅಪ್ರಸ್ತುತಪ್ರಶಂಸಾಲಂಕಾರ.

೫೨ ಇಲ್ಲಿ ಪ್ರಸ್ತುತ ಕೀರ್ತಿವಿಷಯಕ ಮಹಿಮೆಯಿಂದ ಅಪ್ರಸ್ತುತ ಪ್ರಾಸಾದಾರೋಹಣಮಾಡುವ ಸ್ತ್ರೀವ್ಯವಹಾರ ಪ್ರತೀತಿಯಿಂದ ಸಮಾಸೋಕ್ತಿ.

೫೩ ಇಲ್ಲಿ ಅಪ್ರಸ್ತುತ ಕಥನದಿಂದ ಪ್ರಸ್ತುತಾರ್ಥಪ್ರತೀತಿಯಿರುವುದರಿಂದ ಅಪ್ರಸ್ತುತಪ್ರಶಂಸಾಲಂಕಾರ.

೫೪ ಸಾಂತ್ವನೆ- ಸಾಮೋಪಾಯ, ಆಮಜ್ವರ- ವಿಷಮಶೀತಜ್ವರ, ದೃಷ್ಟಾಂತಾಲಂಕಾರ.

೫೬ ಗುಣಗಳು- ಸಂಧಿವಿಗ್ರಹಮುಂತಾದ ಗುಣಗಳು (ಶ್ಲೋ. ೨-೨೬)

೫೭ ಉಪಚಯ– ಅಭಿವೃದ್ಧಿ, ಯಾನ– ಶತ್ರುವಿನಮೇಲೆ ದಂಡೆತ್ತಿ ಹೋಗುವುದು.

೫೯ ಸಾಂಖ್ಯದರ್ಶನದಲ್ಲಿ ಮೂಲಪ್ರಕೃತಿಯ ಮೊದಲವಿಕಾರವಾದ ಮಹತ್ (ಬುದ್ಧಿ) ತತ್ತ್ವದ ಸುಖದುಃಖಾನುಭವರೂಪವಾದ ಭೋಗವು ಸಾಕ್ಷಿಮಾತ್ರನಾದ ಪುರುಷ (ಆತ್ಮ) ನಲ್ಲಿರುವುದು. ಭೃತ್ಯನ ಜಯಾಪಜಯಗಳೆಲ್ಲ ಸ್ವಾಮಿಯನ್ನೇ ಹೊಂದುವುವೆಂದು ಭಾವ.

೬೦ ದ್ವೈಮಾತುರ- (ದ್ವಯೋರ್ಮಾತ್ರೋರಪತ್ಯಂ ಪುಮಾನ್ ದ್ವೈಮಾತುರಃ) ಇಬ್ಬರು ತಾಯಿಯರಿಗೆ ಮಗನಾದ ಜರಾಸಂಧ, ಮಗಧದೇಶಾಧಿಪತಿ ಬೃಹದ್ರಥನಿಗೆ ಮಕ್ಕಳಿರಲಿಲ್ಲ. ಅವನು ಒಂದು ಮಾವಿನಮರದ ಕೆಳಗೆ ತಪಸ್ಸು ಮಾಡುತ್ತಿದ್ದ ಚಂಡಕೌಶಿಕನ ಮೊರೆಹೊಕ್ಕನು. ಆಗ ಮರದಿಂದ ಹಣ್ಣು ಬಿತ್ತು. ಋಷಿಯು ಅದನ್ನೇ ಅಭಿಮಂತ್ರಿಸಿ ಕೊಟ್ಟನು. ರಾಜನು ಆ ಹಣ್ಣನ್ನು ಅರ್ಧ ಸೀಳಿ ತನ್ನ ಇಬ್ಬರು ಪತ್ನಿಯರಿಗೆ ಕೊಟ್ಟನು. ಅವರು ಅರ್ಧಹೋಳಾದ ಇಬ್ಬರು ಮಕ್ಕಳನ್ನು ಹೆತ್ತರು. ಅದಕ್ಕೆ ಹೇಸಿ ಮಕ್ಕಳನ್ನು ತಿಪ್ಪೆಗೆಸೆದರು. ಆಗ ಜರಾ ಎಂಬ ರಕ್ಕಸಿ ಆ ಹೋಳುಗಳನ್ನು ಕೂಡಿಸಲು ಮಗು ಬದುಕಿತು. ಅವನೇ ಜರಾಸಂಧ (ಭಾರ. ಸಭಾ.೧೭. ಭಾಗ. ೯-೨೨) ಹಿಡಿಂಬಾರಿ– ಭೀಮ, ದಮಘೋಷಜ– ದಮಘೋಷನೆಂಬುವನ ಮಗ, ಶಿಶುಪಾಲ.

೬೩ ಪರ್ಯಾಯೋಕ್ತಿ ಅಲಂಕಾರ.

೬೪ ವೀವಧಾಸಾರಪ್ರಸಾರಗಳ- ಮಾಹಿಷ್ಮತೀನಗರಪಕ್ಷದಲ್ಲಿ:– ವೀವಧ- ಧಾನ್ಯಾದಿಪ್ರಾಪ್ತಿ. ಆಸಾರ– ಮಿತ್ರಬಲ, ಪ್ರಸಾರ- ಹುಲ್ಲು ಸೌದೆ ಮೊದಲಾದವುಗಳ ಪ್ರವೇಶ, ಗೋವುಗಳ ಪಕ್ಷದಲ್ಲಿ:– ವೀವಧ- ಭುಜಗಳಮೇಲೆ ಹೊರುವ ಅಡ್ಡೆಗಳ ಪ್ರವೇಶ ಮತ್ತು ನಿರ್ಗಮನಗಳು.

೬೫ ಅರ್ಥಾಂತರನ್ಯಾಸ.

೬೬ ನಿದರ್ಶನಾಲಂಕಾರ.

೬೮ ಶೇಷಾವತಾರ- ಆದಿಶೇಷನ ಅವತಾರವಾದ ಬಲರಾಮ.

೭೦ ಮುಸಲಪಾಣಿ- ಒನಕೆಯೇ ಆಯುಧವಾಗುಳ್ಳ ಬಲರಾಮ. ವಕ್ತವ್ಯ- ಹೇಳಬೇಕಾದದ್ದು. ವ್ಯಾಜಸ್ತುತಿ.

೭೪ ಮೃದುವಾದರುಂ- ಕೋಮಲ ಮತ್ತು ನುಣುಪಾದ, ಘನತರಾತ್ಮಕ- ಅರ್ಥಗೌರವವುಳ್ಳ ಮತ್ತು ದಟ್ಟವಾದ, ಬಹುಗುಣಗಳು- ಶ್ಲೇಷಾದಿಗುಣಗಳು ಮತ್ತು ಎಳೆಗಳು' ಪಟ- ವಸ್ತ್ರ, ಬಹುಚಿತ್ರ- ಶಬ್ದಚಿತ್ರ ಮತ್ತು ವಿಚಿತ್ರ. ಇಲ್ಲಿ ವಾಙ್ಮಯ (ಮಾತು) ಕ್ಕೂ, ಪಟಕ್ಕೂ ಶ್ಲೇಷಾಲಂಕಾರ.

೭೫ 'ವಕ್ತೃ...ಸ್ಥಿರಪಡಿಸೆ'- ಹೇಳುವವನಿಗೆ ಪರಿಚಿತವಾದ ವಿಷಯವನ್ನು ಧೃಡಪಡಿಸಿಕೊಳ್ಳಲು ಆವೃತ್ತಿಯಭ್ಯಾಸ'-ಮತ್ತೆಮತ್ತೆ ಆವೃತ್ತಿಮಾಡಿ ಅಭ್ಯಾಸ ಮಾಡುವುದು.

೭೭ ಉಪಧಾನ- ಯುಕ್ತಿಯುಕ್ತವಾದ ಮತ್ತು ತಲೆದಿಂಬು, ಸ್ಥಿರ- ಚಂಚಲವಿಲ್ಲದ ಮತ್ತು ದೃಢ, ಪರಿಣಾಮಾಲಂಕಾರ.

೮೦ ಅನವಧಾನತೆ- ಅಜಾಗರೂಕತೆ, ಅರ್ಥಾಂತರನ್ಯಾಸ.

೮೧ 'ದ್ವಾದಶಾದಿತ್ಯರಲಿ'-ದ್ವಾದಶಾತ್ಮಾದಿವಾಕರಃ'ಎಂಬಂತೆ ಸೂರ್ಯನು ಮಾಸಭೇದದಿಂದ ಮಿತ್ರ, ಅರ್ಯಮಾ, ತ್ವಷ್ಟೃ, ಧಾತೃ, ವಿವಸ್ವತ್, ಅರುಣ

ಭಗ, ಅಂಶುಮತ್, ಇಂದ್ರ, ಪರ್ಜನ್ಯ, ವಿಷ್ಣು, ಪೂಷಾ, ಎಂಬ ಹನ್ನೆರಡು ಹೆಸರು ತಳೆಯುತ್ತಾನೆ. 'ಹನ್ನೆರಡು ನೃಪತಿಗಳು'- ಅರಿ, ಮಿತ್ರ, ಅರಿಯ ಮಿತ್ರ, ಮಿತ್ರನಮಿತ್ರ, ಅರಿಮಿತ್ರಮಿತ್ರ ಈ ಐವರು ವಿಜಿಗೀಷುವಿನಮುಂದೆ ಇರುವರು. ಇನ್ನು ಆ ವಿಜಿಗೀಷುವಿನ ಹಿಂದೆ ಪಾರ್ಷ್ಣಿಗ್ರಾಹ, ಆಕ್ರಂದ, ಪಾರ್ಷ್ಣಿಗ್ರಾಹಾಸಾರ, ಆಕ್ರಂದಾಸಾರ ಎಂಬುವರು ನಾಲ್ವರು. ಇವರ ಜೊತೆಗೆ ವಿಜಿಗೀಷು ಹತ್ತನೆಯವನು. ೧೧ ಮಧ್ಯಮ- ಶತ್ರುವಿಗೂ ವಿಜಿಗೀಷುವಿಗೂ ಮಧ್ಯದ ಭೂಮಿಯವನು, ಮತ್ತು ೧೨. ಉದಾಶೀನ. ಹೀಗೆ ವಿಜಿಗೀಷುವು ತನ್ನ ಹಿಂದಿರುವ ಮತ್ತು ಮುಂದಿರುವ ಹನ್ನೆರಡು ರಾಜರ ಮಧ್ಯದಲ್ಲಿ ಹನ್ನೆರಡು ಸೂರ್ಯರ ಮಧ್ಯದಲ್ಲಿ ರವಿಯಂತೆ ಉದಯ- ಅಭ್ಯುದಯಪಡೆಯಬಹುದು.

೮೨ ಪ್ರಕೃತಿಯಂಗ- ಸ್ವಾಮಿ, ಅಮಾತ್ಯ, ಸ್ನೇಹಿತ, ಕೋಶ, ರಾಷ್ಟ್ರ, ದುರ್ಗ, ಬಲ, ವೆಂಬ ರಾಜ್ಯದ ಸಂಪ್ತಾಂಗಗಳು. ಘನಸುಸಂವೃತಕವಚ– ದುರ್ಭೇದ್ಯವಾದ ಮಂತ್ರಗುಪ್ತಿ ಎಂಬ ಕವಚ. ಚಾರನೇತ್ರ- ಗುಪ್ತಚಾರರೇ ಕಣ್ಣಾಗಿರುವವನು. ರೂಪಕಾತಿಶಯೋಕ್ತಿ ಮತ್ತು ರೂಪಕಾಲಂಕಾರಗಳಿಗೆ ಸಂಕರ.

೮೩ ರಸ- ಶೃಂಗಾರಾದಿ ರಸಗಳು, ಭಾವ- ನಿರ್ವೇದಾದಿ ಭಾವಗಳು, ದೃಷ್ಟಾಂತಾಲಂಕಾರ.

೮೫ ವರ್ತಿ- ಬತ್ತಿ. ವಿಶೇಷದಿಂದ ಸಾಮಾನ್ಯ ಸಮರ್ಥರೂಪವಾದ ಅರ್ಥಾಂತರನ್ಯಾಸ.

೮೭ ಸಂಚಾರಿಭಾವಗಳು- ನಿರ್ವೇದ ಮೊದಲಾದ ವ್ಯಭಿಚಾರಿಭಾವಗಳು ಉಪಮಾಲಂಕಾರ.

೮೮ ತಂತ್ರಮಾವಾಪ (ತಂತ್ರಾವಾಪ) - ತನ್ನ ಮತ್ತು ಪರರಾಷ್ಟ್ರಗಳ ಚಿಂತನೆ, ಮತ್ತು ಶಾಸ್ತ್ರೌಷಧಪ್ರಯೋಗ, ಯೋಗ- ಸಾಮಾದಿ ಉಪಾಯಗಳು. ಮತ್ತು ದೇವತಾಧ್ಯಾನಗಳು, ಮಂಡಲವ- ಸ್ವಪರರಾಷ್ಟ್ರಗಳನ್ನು ಮತ್ತು

ಮಾಹೇಂದ್ರಾದಿ ದೇವತಾಯತನಗಳನ್ನು, ನರೇಂದ್ರ- ರಾಜ ಮತ್ತು ವಿಷವೈದ್ಯ ಶ್ಲೇಷಾಲಂಕಾರ.

೮೯ ಕರ- ಕಂದಾಯ ಮತ್ತು ಹಸ್ತ, ಉತ್ಸಾಹಪಾದಪ- ಉತ್ಸಾಹಶಕ್ತಿ ಎಂಬವೃಕ್ಷ, ರೂಪಕಾಲಂಕಾರ.

೯೦ ಅಧಿಕವಾದುದರಿಂದೆ- ಪ್ರಜ್ಞೆ ಮತ್ತು ಉತ್ಸಾಹಗಳು ಹೆಚ್ಚಿದ್ದರಿಂದ ಪ್ರಾಧಾನ್ಯಗುಣದಿಂದೆ- ಮಂಡಲಾಭಿಜ್ಞತ್ವಳ್ಳವನಾದುದರಿಂದ ಮತ್ತು ಉಚ್ಚ ಸ್ವರವಾದುದರಿಂದ.

೯೧ ಪ್ರಭು-ರಾಜ ಮತ್ತು ವಿಭು (ವ್ಯಾಪಕ) 'ಪರರೆಸಗುತಿರುವರ್ಥ ಜಾತ, ಪರ-ಅನ್ಯರಾಜರು ಮತ್ತು ಶಂಖಭೇರ್ಯಾದಿಗಳು, ಎಸಗುವ- ಹುಟ್ಟಿಸುವ ಮತ್ತು ಸಂಪಾದಿಸುವ, ಅರ್ಥಜಾತ- ಪ್ರಯೋಗಗಳು, ಗೌಣತ್ವ- ಅಪ್ರಾಧಾನ್ಯ, ಶಕ್ತನಾದ ರಾಜನು ಉದಾಸೀನನಾಗಿದ್ದರೂ ಆಕಾಶದಂತೆ ತನ್ನ ಮಹಿಮೆ ಯಿಂದಲೇ ಕಾರ್ಯದೇಶವನ್ನು ವ್ಯಾಪಿಸಿ ಶಬ್ದಗಳಂತೆ ಎಲ್ಲ ಅರ್ಥಗಳನ್ನೂ ತನ್ನ ವನ್ನಾಗಿ ಮಾಡಿಕೊಳ್ಳುವನು ಎಂದು ತಾತ್ಪರ್ಯ.

೯೨ ನಾಯಕ– ಯಜಮಾನ ಮತ್ತು ನಾಯಕಮಣಿ. ರೂಪಕಾಲಂಕಾರ.

೯೩ ಷಾಡ್ಗುಣ್ಯರಸ–ಸಂಧಿವಿಗ್ರಹ ಮೊದಲಾದ ಗುಣಗಳು (ಶ್ಲೋಕ ೨೬)

೯೪ ಶಮಯುತಾಂಗಿಗೆ– ಕ್ಷಮಾಶೀಲನಾದ ಸ್ವಾಮ್ಯಾದಿ ಸಪ್ತಾಂಗಗಳು ಳ್ಳವನಿಗೆ (ಶ್ಲೋ. ೮೨) ಮತ್ತು ದೇಹಿಗಳಿಗೆ, ಶಕ್ತಿಯಿಂ– ಪ್ರಭಾವಾದ್ಯನುಸಾರ ವಾಗಿ ಮತ್ತು ಬಲದಿಂದ, ವ್ಯಾಯಾಮ– ಷಾಡ್ಗುಣ್ಯಾದಿ ಪ್ರಯೋಗ ಮತ್ತು ಗಮನಾದಿಗಳು, ವೃದ್ಧಿ- ರಾಜ್ಯದ ಬೆಳವಣಿಗೆ ಮತ್ತು ಶರೀರದ ಬೆಳವಣಿಗೆ. ಕ್ಷಯಸಂಪತ್- ಹಾನಿ, ಶ್ಲೇಷಾಲಂಕಾರ

೯೬ ರಾಜಯಕ್ಷ್ಮ- ಕ್ಷಯರೋಗ.

೯೭ ಫಲ- ಲಾಭ ಮತ್ತು ಬಾಣಾಗ್ರ, ಸಪಕ್ಷ- ಮಿತ್ರಸಹಿತ ಮತ್ತು ಕಂಕ ಪತ್ರಯುತ, 'ಪರಭೇ. ನೀಗ'–ರಿಪುಭೇದಕನಾದ ಬಾಣಾಸುರ ಮತ್ತು ಬಾಣ,

ಗುಣಯುತ–ಶೌರ್ಯಾದಿ ಗುಣಯುಕ್ತ ಮತ್ತು ಶಿಂಜಿನಿಯಿಂದ ಕೂಡಿದ, ಕಾರ್ಮುಕ-ಚೈದ್ಯನ ಕರ್ಮಕ್ಕೆ ಸಹಾಯಕ ಮತ್ತು ಧನುಸ್ಸು, ಶ್ಲೇಷಾಲಂಕಾರ.

೯೮ ಪ್ರದೋಷಾತ್ಮಕ- ಪ್ರಕೃಷ್ಟ ದೋಷವುಳ್ಳ ಮತ್ತು ಸಂಜೆ.

೯೯ ಉಪಜಾಪ- ಪಿತೂರಿ, ಇಂಧನ- ಸೌದೆ.

೧೦೦ ಅರ್ಥಾಂತರನ್ಯಾಸಾಲಂಕಾರ.

೧೦೨ ಅತಿಭಾರಸ್ಕಂಧ–ಅಧಿಕಭಾರವನ್ನು ಹೊರುವ ಹೆಗಲುಳ್ಳ, ಸಮಾನಸ್ಕಂಧ,

೧೦೬ ಪುರೋಡಾಶ- ಹವಿಸ್ಸು. ವಿಶೇಷಣ ಸಾಮ್ಯದಿಂದ ಪ್ರಸ್ತುತ ಯಾಗ ಧರ್ಮಪ್ರತೀತಿಯಿರುವುದರಿಂದ ಸಮಾಸೋಕ್ತಿ.

೧೦೭ ಮಂತ್ರಜಿಹ್ವೆ– ಮಂತ್ರಗಳೇ ಜಿಹ್ವೆಯಾಗಿರುವ ಅಗ್ನಿ, ಕಾವ್ಯಲಿಂಗಾಲಂಕಾರ.

೧೦೯ ಗರ್ವೋಷ್ಮ- ಗರ್ವವೆಂಬ ಹಬೆ, ಇಲ್ಲಿ ಪ್ರಕೃತವಾದ ಮಾತುಗಳಿಗೂ ಅಪ್ರಕೃತ ವೃದ್ಧಿಕರ್ಮ ಮನಸ್ಸುಗಳಿಗೂ ತುಲ್ಯಧರ್ಮೌಪಮ್ಯವಿರುವುದರಿಂದ ದೀಪಕಾಲಂಕಾರ.

೧೧೧ ಕೃತ್ಯವಿದರು– ಕಾರ್ಯಜ್ಞರು ಮತ್ತು ವಿಧಿಜ್ಞರು, ಪ್ರಣಿಧಿಗಳು– ಗೂಢಚಾರರು, ತೀರ್ಥಗಳು- ಮಂತ್ರ ಮೊದಲಾದ ಅಷ್ಟಾದಶ ಸ್ಥಾನಗಳು ಮತ್ತು ಜಲಾವತಾರಗಳು, ಪದ ಸ್ಥಾನ ಮತ್ತು ಅಡಿಯಿಡುವಿಕೆ, ಮಹಿತಾತ್ಮ– ಪ್ರವೇಶಿಸಲಾಗದ ಮತ್ತು ಪೂಜ್ಯವಾದ, ಶತ್ರುಸಾಗರ– ರಿಪುವೆಂಬ ಸಮುದ್ರ ಶ್ಲೇಷಪರಂಪರಿತ ರೂಪಕಾಲಂಕಾರ.

೧೧೨ 'ಅನುತ್ಸೂತ್ರ..ನ್ಯಾಸಾ' - ನೀತಿಶಾಸ್ತ್ರವಿರುದ್ಧವಲ್ಲದ ಸರ್ವವ್ಯವಹಾರವುಳ್ಳ ಮತ್ತು ಒಂದು ಪದವನ್ನೂ ಬಿಡದೆ ಸೂತ್ರಾರ್ಥಗಳಿಂದಲೇ ಎಲ್ಲ

ಅರ್ಥವನ್ನೂ ಪ್ರತಿಪಾದಿಸುವ 'ನ್ಯಾಸ' ಎಂಬ ವೃತ್ತಿ- ವ್ಯಾಖ್ಯಾನ ಗ್ರಂಥವುಳ್ಳ, ಸದ್ವೃತ್ತಿ- ಒಳ್ಳೆಯ ಸಂಬಳದ ಭೃತ್ಯರುಳ್ಳ ಮತ್ತು 'ಕಾಶಿಕಾ, ಎಂಬ ಸೂತ್ರ ವ್ಯಾಖ್ಯಾನಗ್ರಂಥವುಳ್ಳ, ಸನ್ನಿಬಂಧನ-ಸೇವಕರುವಿಶ್ರಾಂತರಾದಮೇಲೆ ಕೊಡುವ ಒಳ್ಳೆ ಪಾರಿತೋಷಿಕ ಮತ್ತು ಭಾಷ್ಯಗ್ರಂಥವುಳ್ಳ, ಪಸ್ಪಶ- ಗೂಢಚಾರರು ಮತ್ತು ಪಸ್ಪಶವೆಂಬ ಉಪೋದ್ಘಾತವುಳ್ಳ, ಶಬ್ದವಿದ್ಯೆ- ವ್ಯಾಕರಣ ಶಾಸ್ತ್ರದಂತೆ, ಶ್ಲೇಷಾಲಂಕಾರ.

೧೧೩ ಅಜ್ಞಾತದೋಷಿಗಳು–ತಮ್ಮ ಕೆಲಸಗಳ ಗುಟ್ಟನ್ನು ಇತರರಿಗೆ ತಿಳಿಸ ದವರು, ದೋಷಜ್ಞರು– ಶತ್ರುರಹಸ್ಯವನ್ನು ಅರಿಯುವವರು, ವ್ಯಕ್ತಶಾಸನ ಗಳು-ಆಯಾ ಅಮಾತ್ಯರ ವಿಷಯದಲ್ಲಿ ಅವಿಶ್ವಾಸ ಬರುವಂತೆ ಬರೆದ ಕೃತ್ರಿಮ ಲೇಖನಗಳು, ಉಭಯವೇತನರು– ಸ್ವಪರಪಕ್ಷಗಳೆರಡರಲ್ಲಿಯೂ ವೇತನ ಪಡೆ ಯುವ, ಶತ್ರುಸಚಿವರಂದೂಷಿಸುತೆ– ಶತ್ರುಗಳ ಮಂತ್ರಿಗಳಮೇಲೆ ಅಪರಾಧ ವನ್ನು ಹಬ್ಬಿಸಿ,

೧೧೪ ಅಜಾತಶತ್ರು-ಶತ್ರುಗಳೇ ಇಲ್ಲದಿರುವ (ಅಜಾತಃ ಶತ್ರುಃ ಯಸ್ಯ ಸಃ) ಯುಧಿಷ್ಟಿರ.

೧೧೬ ವಿಶಕಲಿತಾರ್ಥ- ವಿಮರ್ಶಿಸಿದ ಅರ್ಥವುಳ್ಳ, ನಯಪಥ– ರಾಜ ನೀತಿಗೆ ಅನುಸಾರವಾಗಿರುವ, ರೂಪಕಾಲಂಕಾರ.

ಮೂರನೆಯ ಸರ್ಗ

೨ ಪಾದ- ಚರಣ ಮತ್ತು ಕಿರಣ. ಉಪಮಾಲಂಕಾರ.

೩ ನಿದರ್ಶನ ಮತ್ತು ಅತಿಶಯೋಕ್ತಿ ಗಳಿಗೆ ಸಂಕರ.

೪. ಬಹುಧಾತುರಾಗ–ಅನೇಕಗೈರಿಕಾದಿಧಾತುಗಳ ಬಣ್ಣಗಳು, ಪೂರ್ಣೋ ಪಮೆ.

೫ ಶ್ರೀಕೃಷ್ಣನ ಸ್ವರ್ಣಮಯ ಕರ್ಣಕುಂಡಲಗಳಲ್ಲಿ ಮರಕತ (ಪಚ್ಚೆ) ಮಣಿಗಳಿದ್ದವು. ಅವುಗಳ ಕಾಂತಿ ಕೃಷ್ಣನ ಎದೆಯ ಎರಡೂಕಡೆ ಬಿದ್ದಿತ್ತು ಅದು ಬಾಲ್ಯದಲ್ಲಿ ನವಿಲುಗರಿಯ ಮಾಲೆಯನ್ನು ಹಾಕಿಕೊಂಡಂತಿತ್ತು.
ಉತ್ಪ್ರೇಕ್ಷಾಲಂಕಾರ'

೬ ಸಮುದ್ರಮಥನಕಾಲದಲ್ಲಿ ಮಂದರಾಚಲಶಿಖರಾಗ್ರ ಘರ್ಷಣದಿಂದ ಕೂರ್ಮರೂಪದಿಂದ ಆ ಪರ್ವತದ ಕೆಳಗಿದ್ದ ವಿಷ್ಣುವಿನ ಭುಜಕೀರ್ತಿಯ ಮಣಿಗಳು ಶಾಣದಿಂದ ಉಜ್ಜುವೆಯೋ ಎಂಬಂತಿತ್ತು. ಉತ್ಪ್ರೇಕ್ಷೆ ಅತಿಶಯೋಕ್ತಿಗಳಿಗೆ ಸಂಕರ.

೧೨ ಲಕ್ಷ್ಮಿ– ಶೋಭೆ (ಪ್ರಸಾಧನರೂಪವಾದ ಲಕ್ಷ್ಮಿ) ಮತ್ತು ಲಕ್ಷ್ಮೀದೇವಿ, ಶೋಭೆ ಎಂಬ ಲಕ್ಷ್ಮಿ ಶರೀರದಲ್ಲೆಲ್ಲ ಪ್ರಕಾಶಿಸುತ್ತಾ 'ಸಕಲ ಲೋಕಕಾಂತೆ' ಎನಿಸಿರುವಳು, ಎದೆಯಮೇಲಿರುವ ಪ್ರಸಿದ್ಧ ಲಕ್ಷ್ಮಿಯಾದರೊ 'ಅನನ್ಯಕಾಂತಾ' ಎಂದರೆ ಕೃಷ್ಣನಿಗೆಮಾತ್ರ ಕಾಂತೆಯಾಗಿರುವಳು
ಅತಿಶಯೋಕ್ತ್ಯಲಂಕಾರ.

೧೪ ಭೂಷಣತೆಯಂ- ಕೃಷ್ಣನ ನಖಗಳು ಭೂಷಣವಾಗಿದ್ದವೇ ಹೊರತು ಪ್ರಹಾರಕವಾಗಿರಲಿಲ್ಲ. ಹಿರಣ್ಯಕಶಿಪುವನ್ನು ಸೀಳಿ ಪ್ರಕಾಶಿಸುವ ನಖಕ್ಷತಗಳಿಂದ ವ್ರಣರೂಪವಾದ ಕಾಂತಿ ಮತ್ತು ಕಾಠಿನ್ಯವುಳ್ಳ, ಉರೋಜ- ಸ್ತನ, ಕಂಗೊಳಿಪ ನಖಕ್ಷತಗಳಕ್ಷತ– ಪ್ರಕಾಶಿಸುವ ಉಗುರುಗಳಿಂದಗಿಚ್ಚುವಿಕೆ.
ಅತಿಶಯೋಕ್ತ್ಯಲಂಕಾರ.

೧೫ ಕಾಮಿನಿಯರ ಕುಚಗಳು ತುಂಬ ಎತ್ತರವಾಗಿದ್ದುದರಿಂದ ಅವು ಅವರ ಮಧ್ಯ (ನಡು) ವನ್ನು ಮೇಲೆತ್ತುವುವೋ ಎಂಬತ್ತಿದ್ದವು. ಇಲ್ಲಿ ಮಧ್ಯ ಮತ್ತು ಕುಚಮಂಡಲಗಳಿಗೆ ವಿಶೇಷಣ ಸಾಮ್ಯವಿರುವುದರಿಂದ ಅರಿವಿಜಿಗೀಷು ರಾಜಪ್ರತೀತಿರೂಪ ಸಮಾಸೋಕ್ತಿ.

೧೭ ಮಾಸುಳಿ- ಮಹಾವರ್ತ, ದೊಡ್ಡಸುಳಿ.

೧೯ ನಂದಕ- ನಂದಕವೆಂಬ ಖಡ್ಗ ಮತ್ತು ಆನಂದಜನಕ, ಕಾವ್ಯಲಿಂಗಾಲಂಕಾರ.

೨೦ ನತಿ- ಬಾಗುವಿಕೆ ಮತ್ತು ಭೇದದಿಂದ ತನಗನುಕೂಲವಾಗುವಿಕೆ, ಕ್ರಿಯೆಗಳೊಳು– ರಣಕರ್ಮಗಳಲ್ಲಿ ಮತ್ತು ಹಿತಾಹಿತಕೃತ್ಯಗಳಲ್ಲಿ, ಕರ್ಣಾಂತ ಪ್ರಾಪ್ತಗುಣ– ಕಿವಿಯವರೆಗೆ ಎಳೆದ ಪೌರ್ವಿ ಮತ್ತು ಆಪ್ತಧರ್ಮ,

೨೧ ಅಂಬು–ದ= ಮೇಘ, ಕೃಷ್ಣಸಾಗರ- ಕೃಷ್ಣ ಎಂಬ ಸಮುದ್ರ.

೨೨ ಮಹಾರಥಿ- ತನ್ನನ್ನು ಸಾರಥಿಯನ್ನು ಮತ್ತು ಅಶ್ವಗಳನ್ನು ರಕ್ಷಿಸಿಕೊಂಡು ಯುದ್ಧಮಾಡುವವನು. ಕ್ಷಿಪ್ರರಥ–ವೇಗವಾಗಿಹೋಗುವ ಮತ್ತು ಕ್ಷಿಪ್ರವೆಂಬ ಹೆಸರಿನ, ಪುಷ್ಯರಥ–ಕ್ರೀಡಾರಥ (ಪುಷ್ಯಃ ಸರ್ವಾರ್ಥಸಾಧಕಃ)ಇರುಳೆರೆಯ–ಚಂದ್ರ (ಇರುಳು–ಎರೆಯ)

೨೩ ಉತ್ಪ್ರೇಕ್ಷೆ.

೨೪ ಅತಿಶಯೋಕ್ತಿ.

೨೫ ಅತಿಶಯೋಕ್ತಿ.

೨೯ ಪೇರಾನೆ– ಪಿರಿದು–ಆನೆ. ಸನ್ಮಾರ್ಗವನ್ನು ತಡೆಯುವವರು, ಗುರು (ದೊಡ್ಡವು) ಗಳಾದರೂ ಪರರಿಂದ ಉಲ್ಲಂಘಿಸಲ್ಪಡುವರು ಎಂದು ಉತ್ಪ್ರೇಕ್ಷಾಲಂಕಾರಧ್ವನಿ.

೩೩ ವಾಡವಮುಖ– ಬಡಬಾಗ್ನಿ, ಸೀಳ್ದು– ಎಳ್ದುದು– ಕಡಲನ್ನು ಸೀಳಿ ಮೇಲಕ್ಕೆದ್ದಿತೋ- ಉತ್ಪ್ರೇಕ್ಷೆ.

೩೪ ಭೂಮಿಭೃತ್- ರಾಜ ಮತ್ತು ಗಿರಿ, ಖಿನ್ನತೆಯನ್ನೈದದಿಹ- ಖಿನ್ನವಾಗದ, ಪ್ರತಿಕೃತಿ- ಪ್ರತಿಬಿಂಬ, ಉತ್ಪ್ರೇಕ್ಷಾದಿಂದ ಪುರವಿಸ್ತಾರ ಮತ್ತು ವೈಚಿತ್ರ್ಯವೆಂಬ ವಸ್ತುಧ್ವನಿ.

೩೬ ಉಪಕಂಠ– ಸಮೀಪ ಮತ್ತು ಕುತ್ತಿಗೆ, ಅಂತ- ಹತ್ತಿರ ಮತ್ತು ತೊಡೆ, ಶ್ಲೇಷಾನುಪ್ರಾಣಿತ ಉಪಮಾಲಂಕಾರ.

೩೭ ಆಳ್ವರಿ- ಪ್ರಾಕಾರ. ಬಳಿಯೊಳೇ– ಸಮೀಪದಲ್ಲಿಯೇ.

೪೫ ವಿಷಮಪ್ರಭೇದ– "ವಿರುದ್ಧಕಾರ್ಯಸ್ಯೋತ್ಪತ್ತಿರ್ಯತ್ರಾನರ್ಥಸ್ಯ ವಾ ಭವೇತ್ । ವಿರೂಪಘಟನಾ ಯಾ ಸ್ಯಾತ್ ವಿಷಮಾಲಂಕೃತಿರ್ಮತಾ" ॥

೪೭ ನಿದರ್ಶನಾ ಮತ್ತು ಸಾಮಾನ್ಯಾಲಂಕಾರಗಳು, 'ಸಾಮಾನ್ಯ ಗುಣ ಸಾಮ್ಯೇನ ಯತ್ರ ವಸ್ತ್ವಂತರೈಕತಾ"

೪೮ ಶುಕದೇಹನೀಲಮಣಿ- ಗಿಳಿಯಮೈಯಂತೆ ಹಚ್ಚಗಿರುವ ನೀಲಮಣಿ, ದೇಹಳಿ- ಹೊಸ್ತಿಲು,

೪೯ ವಲಭಿ– ಸೂರುಪಟ್ಟಿ, ಬರ್ಹ- ನವಿಲುಪಿಂಛ, ಉತ್ಪ್ರೇಕ್ಷೆ.

೫೦ ಅತುಲಮದು ಪೆರ್ಮೊಲೆಗಳಿರ್ದಡುಂ-ಅತುಲ-ತೊಲೆಗಳಿಲ್ಲದ್ದು ಮತ್ತು ಅನುಪಮ. ವಿತಾನ- ಮೇಲ್ಕಟ್ಟುವ ವಸ್ತ್ರ, ಅವಿತಾನ- ಮೇಲ್ಕಟ್ಟುವಿಲ್ಲದ್ದು ಮತ್ತು ಸಮಸ್ತ ವಸ್ತುಸಮೃದ್ಧ, ಸುವಿಚಿತ್ರ– ಚಿತ್ರಗಳಿಲ್ಲದಿದ್ದರೂ ಅದ್ಭುತ, ವಿಶಾಲ– ವಿಗತಶಾಲಾ ಎಂದರೆ ಗೃಹದ ಏಕದೇಶ ಮತ್ತು ವಿಸ್ತಾರ, ಬಹುಶಾಲ– ಅನೇಕಮನೆಗಳುಳ್ಳದ್ದು. ವಿರೋಧಾಭಾಸಾಲಂಕಾರ. (ವಿರೋಧ ತೋರಿಸಿ ತರುವಾಯ ಪರಿಹಾರ ಮಾಡುವುದು)

೫೧ ಭ್ರಾಂತಿಮದಲಂಕಾರ.

೫೨ ಶ್ಲೇಷವಿರೋಧೋಪಜೀವ್ಯ ವೈಯರ್ಥ್ಯಹೇತುತ್ವ ಸಂಕೀರ್ಣ ಕಾವ್ಯ ಲಿಂಗಾಲಂಕಾರ.

೫೩ ಸುಪತಾಕೆ– ಧ್ವಜ– ಪ್ರಸಿದ್ಧಿ, ವಿವಿಕ್ತ– ವಿಜನ ಮತ್ತು ವಿಮಲ, ನತವಲೀಕಮುಮೆನಿಪ- ಬಾಗಿರುವ ಛಾವಣಿ ಮತ್ತು ತ್ರಿವಳಿಗಳು, ವಲಭಿ- ಕೂಟಾಗಾರ, ತುಲ್ಯಯೋಗಿತಾಲಂಕಾರ ಮತ್ತು ಶ್ಲೇಷ.

೫೪ ನಿರ್ಜಿಹ್ಮ- ಅವಕ್ರ ಮತ್ತು ಕಪಟವಿಲ್ಲದ, ನಿಷ್ಪಂಕ- ಕೆಸರಿಲ್ಲದೆ ಮತ್ತು ಪಾಪರಹಿತ, ಮಹಿತಸೀಮೆ- ರಾಜಕಲ್ಪಿತಕ್ಷೇತ್ರ, ಮಾನಮರ್ಯಾದೆ ಮತ್ತು ಕುಲಾಚಾರ ಪದ್ಧತಿ, ಅತ್ಯಾಯತಿ- ಅಧಿಕ ಉತ್ತರಕಾಲವುಳ್ಳ, ಇರ್ತೆರದ ಸುವಿನೀತಮಾರ್ಗಗಳು- ಸುರಚಿತ ಪುರವೀಥಿಗಳು ಮತ್ತು ಸುಶಿಕ್ಷಿತ ಆಚಾರ ಪದ್ಧತಿಗಳು, ಅಸ್ಖಲಿತ ಸುಜನರು- ಕಲ್ಲು ಎಡವಿಕೆಯಿಲ್ಲದ ಮತ್ತು ವಿರುದ್ಧಾಚರಣೆಯಿಲ್ಲದ, ಶ್ಲೇಷಮೂಲಕ ತುಲ್ಯಯೋಗಿತಾಲಂಕಾರ.

೫೮ ಘುಣಾಕ್ಷರನ್ಯಾಯ-ಹುಳು ಮರವನ್ನು ಕೊರೆಯುವಾಗ ಅಕಸ್ಮಾತ್ ಅಕ್ಷರದಂತೆ ಕಾಣುತ್ತದೆ. ಆದರೆ ಅದು ಅಕ್ಷರವಾಗಲೆಂಬ ಉದ್ದೇಶದಿಂದ ಕೊರೆದದ್ದಲ್ಲ. ಅಕಸ್ಮಾತ್ ಆಗುವುದಕ್ಕೆ ಈ ನ್ಯಾಯವನ್ನು ಹೇಳುವುದುಂಟು.

೬೦ ಸಕಲಕಲೆಗಳು- ೬೪ ವಿದ್ಯೆಗಳು ಮತ್ತು ಷೋಡಶ ಕಲೆಗಳು, ಸೌಧ-'ಸುಧ ಯಾ ಧವಲಂ ಸೌಧಂ'; ಸುಣ್ಣದಂತೆ ಬೆಳ್ಳಗಿರುವ, ತುಲ್ಯಯೋಗಿತಾಲಂಕಾರ.

೬೧ ಬಾಣದನುಜ- ಬಾಣಾಸುರ, ಆಹವ- ಯುದ್ಧ, ಕಾವ್ಯಲಿಂಗಾಲಂಕಾರ.

೬೨ ಶಿವಮಾರುತ- ಮಂದಮಾರುತ, ಮತ್ತು ಮರುದ್ಗಣಗಳು, ಹರಿ- ಕೃಷ್ಣ ಮತ್ತು ಇಂದ್ರ, ಉದ್ರಶ್ಮಿರತ್ನನಿಧಿ- ಮೇಲ್ಮುಖ ಕಿರಣಗಳ ರತ್ನಗಳುಳ್ಳ ಸಮುದ್ರ ಮತ್ತು ರತ್ನಮಯ ಸಾನುಗಳ ಮೇರು. ಶ್ಲೇಷಾನುಪ್ರಾಣಿತ ಉಪಮಾಲಂಕಾರ.

೬೩ ಸ್ನಿಗ್ಧಾಂಜನಶ್ಯಾಮ - ನುಣುಪಾದ ಅಂಜನದಂತೆ ಕಪ್ಪಾದ, ಸದ್ವೃತ್ತ- ಸದಾಚಾರ ಮತ್ತು ದುಂಡಾದ, ವಿಶೇಷಕ- ತಿಲಕ. ಶ್ಲೇಷಾಲಂಕಾರ.

೬೪ ದ್ವಿಪ- ಆನೆ (ದ್ವಾಭ್ಯಾಂ ಪಿಬತೀತಿ ದ್ವಿಪಃ)

೬೯ ಪಡೆತೆರೆಯ ಕಟಕ- ಕಡಗಗಳಂತಿರುವ ಸೈನ್ಯವೆಂಬ ಅಲೆಗಳು. ಸರಿಯುತಿರೆ- ದೂರ ಸರಿಯುತ್ತಲು ಉಪಮಾನುಪ್ರಾಣಿತ ಉತ್ಪ್ರೇಕ್ಷೆ.

೭೦ ಊರ್ಮಿ– ಅಲೆ, ಶೈವಲೆ- ಪಾಚಿ, ಉತ್ಪ್ರೇಕ್ಷಾಲಂಕಾರ.

೭೧ ಶ್ಲೇಷಸಂಕೀರ್ಣೋತ್ಪ್ರೇಕ್ಷಾಲಂಕಾರ.

೮೨ ಮಥಿತಭೂಭೃತ್- ಮಥಿತರಾದ ರಾಜರು ಮತ್ತು ಗಿರಿಗಳು, ಧೃತಸಿರಿ– ಧರಿಸಿರುವ ಶೋಭೆ ಮತ್ತು ಲಕ್ಷ್ಮಿ, 'ಏಕಾಶ್ವ..ಕಡಲು'- ಮಂದರ ಪರ್ವತ ಮತ್ತು ರಾಜ, ಮಥಿತ- ಕಡೆಯಲ್ಪಟ್ಟ 'ಉಚ್ಚೈಃಶ್ರವಸ್' ಎಂಬ ಕುದುರೆ, ವಿಗತಸಿರಿ– ಲಕ್ಷ್ಮಿಯಿಲ್ಲದ, ವ್ಯತಿರೇಕಾಲಂಕಾರ.

ಸಂಕೀರ್ಣಸರ್ಗ

೨ 'ವಿಂಧ್ಯತ್ವಮಾಂತುದೆನೆ'- ಸೂರ್ಯನ ಮಾರ್ಗವನ್ನು ತಡೆಯುವುದಕ್ಕಾಗಿ ವಿಂಧ್ಯಪರ್ವತವು ಬಹಳವಾಗಿ ಬೆಳೆಯುತ್ತಿತ್ತು. ಇದರಿಂದ ಹನ್ನೆರಡು ವರ್ಷಗಳವರೆಗೆ ದಕ್ಷಿಣಭಾರತವರ್ಷಕ್ಕೆ ಸೂರ್ಯದರ್ಶನವಾಗಲಿಲ್ಲ. ಆಗ (ಅಗ-ಸ್ತ್ಯ) ಅಗಸ್ತ್ಯ ಮಹರ್ಷಿ ಆ ಪರ್ವತವನ್ನು ಪಾದದಿಂದ ತುಳಿದು ದಕ್ಷಿಣಾಪಥಕ್ಕೆ ಬಂದನು. (ಪದ್ಮ. ೫–೨೨. ಭಾರ. ಸಭಾ ೧೧–ಶಾಂತಿ ೨೦೬, ಮತ್ಸ್ಯ–೬೧) ಇದರಿಂದ ಉತ್ತರಭಾರತಕ್ಕೂ ದಕ್ಷಿಣ ಭಾರತಕ್ಕೂ ಹನ್ನೆರಡು ವರ್ಷ ಅಂತರವಿದೆ. ಪ್ರಕೃತ ರೈವತಕ ಪರ್ವತದ ಔನ್ನತ್ಯವನ್ನು ನೋಡಿದರೆ ಅದು ಮತ್ತೆ ವಿಂಧ್ಯತ್ವವನ್ನು ಧರಿಸಿದೆಯೋ ಎಂಬಂತಿತ್ತು. ಉತ್ಪ್ರೇಕ್ಷೆ.

೩ ರೈವತಕಪರ್ವತಕ್ಕೂ ಹಿರಣ್ಯಗರ್ಭನಿಗೂ ಹೋಲಿಕೆ. ತಲೆ- ಶಿರಸ್ಸು ಶಿಖರ; ಕಾಲು- ಪಾದಗಳು ಮತ್ತು ಪ್ರತ್ಯಂತ ಪರ್ವತಳು ಉತ್ಪ್ರೇಕ್ಷೆ.

೪ ಗಿರಿಜಾಂಗಸಂಗ- ಅರ್ಧನಾರೀಶ್ವರತ್ವ.

೫ ಸ್ಕಂಧ – ಬುಡ ಮತ್ತು ಹೆಗಲು, ನೀಲಕಂಠ- ನವಿಲು ಮತ್ತು ಕರೆಗೊರಳು, 'ಉರಗೇಂದ್ರ .ನೊಳಗೆ'– ಸರ್ಪಗಳಿಗೆ ಆವಾಸವಾಗಿರುವ ಮತ್ತು

ಸರ್ಪಗಳನ್ನು ಧರಿಸಿರುವ, ಬಳ್ಳಿತೋಳ್ಗಳ್- ಬಳ್ಳಿಗಳೆಂಬಭುಜಗಳು, ಉತ್ಪ್ರೇಕ್ಷಾಲಂಕಾರ.

೬ ನೈದಿಲೆಯ ಕರ್ಣಾವತಂಸ- ನೈದಿಲೆಯೇ ಕರ್ಣಾವತಂಸ (ಕರ್ಣಾಭರಣ). 'ಲೋಧ್ರ..ಕಪೋಲ'- ಲೋಧ್ರಸುಮಗಳಿಂದ ಧವಲವಾದ ಕಪೋಲ. ನೊಸೆ- ಉಲಪಾ, ಬಲ್ಬಜತೃಣ,

೭ ಅಕ್ಷೋಭ- ನಿರ್ಭಯ.

೯ ಸುಮನೇತ್ರ- ಹೂಪಿನಂತಿರುವ ಕಣ್ಣು, ನಿದರ್ಶನಾಲಂಕಾರ.

೧೦ ರವಿಯ ರಥಾಶ್ವಗಳು ಮೊದಲು ಹಸಿರುಬಣ್ಣವಾಗಿದ್ದವು. ಆಮೇಲೆ ಅವು ಅರುಣನ ಕಿರಣಗಳು ಬಿದ್ದು ಕೆಂಪಾದವು. ಮತ್ತೆ ಈ ಪರ್ವತದಮೇಲೆ ಬಂದಾಗ ಬಿದಿರು ಮೆಳೆಯಂತೆ ನೀಲವಾದ ರತ್ನಪ್ರಭೆಗಳು ಬಿದ್ದು ಅವು ತಮ್ಮ ಮೊದಲನೆಯ ಕಾಂತಿಯನ್ನೇ ತಳೆದವು. ತದ್ಗುಣಾಲಂಕಾರ. (ತದ್ಗುಣಸ್ವಗುಣತ್ಯಾಗಾತ್ ಅನ್ಯದೀಯ ಗುಣಗ್ರಹಃ)

೧೧ ಎನಿತು ಸಲ ನೋಡಿದರು- ಎಷ್ಟುಸಲ ಕಂಡರೂಕೂಡ, ಕಾವ್ಯಲಿಂಗಾಲಂಕಾರ.

೧೨ ನಿದರ್ಶನಾಲಂಕಾರ. (೪—೨೦)

೧೩ (೪—೬೧)

೧೪ ವ್ಯತಿರೇಕಾಲಂಕಾರ.

೧೫ ನಿದರ್ಶನಾಲಂಕಾರ.

೧೬ ಹಲಧರಾಂಬರಶ್ಯಾಮ- ಬಲರಾಮನ ವಸ್ತ್ರದಂತೆ ನೀಲವಾದ. (ಹಲಧರ) ನೇಗಿಲ ಆಯುಧವುಳ್ಳವನು.

೧೭ ದಾರುಕ- ಶ್ರೀಕೃಷ್ಣನ ಸಾರಥಿ, ಈತನಿಗೆ ಕಾಶ್ಯಪೇಯ ಎಂಬುದು ನಾಮಾಂತರ (ವನ. ೨೨. ದ್ರೋಣ ೭೯-೧೪೫)

೧೮ ಕೂರುಗುರ್- ಕಠಿವಾದ ಉಗುರು.

೨೦ ಕಾವ್ಯಲಿಂಗಾಲಂಕಾರ.

೨೧ ಭ್ರಾಂತಿಮದಲಂಕಾರ ನಿಬಂಧನ ಉತ್ಪ್ರೇಕ್ಷೆ

೨೨ ಕಾವ್ಯಲಿಂಗ. (೫—೫೦)

೨೩ 'ಅರುಣತೆಯ ಧೂಲಿನಿಕರ'-ಕೆಂಪುಧೂಲಿಯಸಮೂಹ, ಉತ್ಪ್ರೇಕ್ಷೆ.

೨೭ 'ಪಿಂದೆ....ಹೊರಗುಗಿದುದು'- ಹಿಂದೆ ಒಮ್ಮೆ ಗರುಡನು ಮ್ಲೇಚ್ಛರ ಜೊತೆಗೆ ಒಬ್ಬ ಬ್ರಾಹ್ಮಣನನ್ನು ನುಂಗಿದನು. ಆದರೆ ಆ ವಿಪ್ರನು ಗಂಟಲಿನ ಭಾಗವನ್ನು ಸುಡಹತ್ತಿದನು. ಕೂಡಲೇ ಗರುಡನು ಅವನನ್ನು ವಮನ ಮಾಡಿದನು.

೩೦ ವಿಪದಂತಕಾರ– ವಿಪತ್ತುಗಳನ್ನು ನಾಶಮಾಡುವವನು. ನಿಜವೃಕ್ಷ ಪ್ರಸವಸಿರಿ- ತನ್ನಮರಳಿಂದುಂಟಾದ ಶೋಭೆ.

೩೪ ನಿದರ್ಶನಾಲಂಕಾರ.

೩೯ 'ಪೊಳೆವ....ನಯನದಿಂ'- ಹೊಳೆವ ನಯನದಂತಿರುವ ವಿದ್ಯುತ್ತು ಗಳಿಂದ ಮತ್ತು ವಿದ್ಯುತ್ತಿನಂತಿರುವ ಕಣ್ಣುಗಳಿಂದ, 'ಅಗಲಿತೋರು..ಧರಿಸಿ'– ಗಳಿತವಲ್ಲದ ದೊಡ್ಡ ಮೇಘಗಳು ಮತ್ತು ಜೋತಾಡುತ್ತಿರುವ ದಪ್ಪ ಮೊಲೆ ಗಳು, ಇಲ್ಲಿ ಮೇಘಪಂಕ್ತಿಯಲ್ಲಿ ನಾಯಿಕಾಪ್ರತೀತಿಯಾಗುವುದರಿಂದ ಸಮಾ ಸೋಕ್ತಿ. ಇದಕ್ಕೆ 'ಕಾಂತನೊಲು' ಎಂಬ ಉಪಮೆ ಅಂಗ.

೩೮ ಅರ್ಥಾಂತರನ್ಯಾಸ.

೪೧ ಇಲ್ಲಿ ಅಚೇತನದಲ್ಲಿ ಚೇತನಧರ್ಮವೆನಿಸುವ ಗದರಿಸುವಿಕೆ ಎಂಬ ರೂಪಕೋಜ್ಜೀವಿತ ಉತ್ಪ್ರೇಕ್ಷೆ. ಕಾದಲ- ಪ್ರಿಯ, ಕಾತರಿಸು- ಬಯಸು,

೪೩ ತಪ್ಪಲಲಿಋತುಸಿರಿಯ- ಸಾನುಪ್ರದೇಶದಲ್ಲಿ ಋತುಸೌಂದರ್ಯವನು

೪೯ ಪರಿಣತಿ– ಬದಲಾವಣೆ ಮತ್ತು ಮುದಿತನ, ಆದ್ದರಿಂದಲೇ 'ವಿರಲ ತಾಪಚ್ಛವಿ'– ವಿರಲ- ಅಲ್ಪವಾದ, ಆತಪಚ್ಛವಿ– ಬಿಸಿಲಿನ ಕಾಂತಿ ಮತ್ತು ಕುಂದಿದ ಕಾಂತಿ, ನಸುಬಿಸಿಯ ದೇಹ- ಅನುಷ್ಣವಪು ಮತ್ತು ಶ್ಲೇಷ್ಮೋದಯ ವಾಗಿರುವುದರಿಂದ ತುಸು ಮೈ ಬೆಚ್ಚಗಿರುವ, ಸುತ್ತಲುಂ ಬಿಳುಪುತಳೆದಭ್ರ ಶರದಿಂ– ಬಿಳಿಯ ಮೋಡಗಳ ಸಮೂಹದಿಂದ ಮುಚ್ಚಿರುವುದರಿಂದ ಮತ್ತು ನರೆತು ಬೆಳ್ಳಗಾದ ಆಕಾಶವೆಂಬ ಶಿರವನ್ನು ಧರಿಸಿರುವುದರಿಂದ, ಪರಿಶಾಂತ– ಪ್ರಶಾಂತವಾದ ಮತ್ತು ಗ್ರಹಣಮಾಡಲು ಅಸಮರ್ಥವಾದ, ರವಿನಯನ– ಸೂರ್ಯನೆಂಬ ಕಣ್ಣುಳ್ಳ. ಶ್ಲೇಷಾನುಪ್ರಾಣಿತ ರೂಪಕ.

೫೦ ಇಲ್ಲಿ 'ಕಮಲನಯನಗಳ್' ಮುಂತಾದ ಅವಯುವರೂಪಣದಿಂದ ಅವಯುವಿಗಳೆನಿಸಿರುವ ಬೆಂಗದಿರ ಮತ್ತು ನಲಿನಿಗಳಿಗೆ ನಾಯಕ ನಾಯಿಕಾತ್ವ ಸಿದ್ಧಿಸುವುದರಿಂದ ಏಕದೇಶವಿವರ್ತಿ ರೂಪಕಾಲಂಕಾರ.

೫೧ ರುಚಿಧಾಮ– ರವಿ, ಪರಲೋಕಮಂ ಪೊಂದು- ದೇಶಾಂತರಹೋಗು ಮತ್ತು ಸಾಯುಲು, ಕಾವ್ಯಲಿಂಗಾಲಂಕಾರ.

೫೨ ರೂಪಕಾನುಪ್ರಾಣಿತ ಉತ್ಪ್ರೇಕ್ಷೆ.

೫೪ ಅಪ್ರಕಾಶಿತದಶನಶಕ್ರದಿಶೆ– ಸವಿಲಾಸಸ್ಮಿತವುಳ್ಳ ಪೂರ್ವದಿಕ್ಕು.

೫೫ ತಿಮಿರೌಘಜಟೆ- ಕತ್ತಲ ಸಮೂಹವೆಂಬ ಜಡೆಗಳು, ಗಣಪತಿ– ಪ್ರಮಥಗಣಗಳ ಪತಿ, ಶಿವ, ರೂಪಕಾಲಂಕಾರ.

೫೬ 'ನವಚಂದ್ರಿಕಾ ಕುಸುಮ' ವೆಂಬ ಏಕದೇಶ ವಿವರ್ತಿರೂಪಕ ಮಹಿ ಮೆಯಿಂದ ಹರಿವಧೂತ್ವಪ್ರತೀತಿ. ಉತ್ಪ್ರೇಕ್ಷೆ.

೫೮ ನೇತ್ರವಿಷಯವೊಂದು- ಕಣ್ಣಿಗೆಕಾಣು. ಅರ್ಥಾಂತರನ್ಯಾಸ.

೫೯ ಗೃಹಗಳಲಿ– ಮನೆಗಳಲ್ಲಿ, ಸ್ಥಿರವಾಗಿ– ಧೃಢವಾಗಿ, ಅತಿಶಯೋಕ್ತ್ಯಲಂಕಾರ.

೬೦ ಚಾಚಿರ್ಪ- ಪ್ರಸರಿಸಿರುವ, ಇಲ್ಲಿ ಹುರಿಗಳಂತಿರುವ ಕಿರಣಗಳು, ಕೊಡದಂತಿರುವ ಸೂರ್ಯ ಈ ಎರಡು ಉಪಮೆಗಳಿಂದ ಪಕ್ಷಿಗಳ ಕಲಸಿನದ ವೆಂಬ ರೂಪಕಾಲಂಕಾರ. ಅದರಿಂದ ಉಜ್ಜೀವಿತವಾದ ದಿಕ್ಕರ್ತೃಕ ಸೂರ್ಯೋತ್ತರಣರೂಪ ಗಮ್ಯೋತ್ಪ್ರೇಕ್ಷೆ. ಸೇದು- ಎಳೆಯುವುದು.

೬೧- ಶ್ಲೇಷಮೂಲಕಾತಿಶಯೋಕ್ತಿಯಿಂದ ಅನುಗ್ರಹೀತ ರೂಪಕಾಲಂಕಾರ.

೬೪ ಇಲ್ಲಿ ಪ್ರಕೃತ ರವಿ ವಿಶೇಷಣವೈಭವದಿಂದ ಅಪ್ರಕೃತ ಮಹಾರಾಜ ಪ್ರತೀತಿ. ಸಮಾಸೋಕ್ತಿ.

೬೩ ತೋರಣ- ಹೊರಬಾಗಿಲು, ಪ್ರಸ್ಥಾನ- ಪ್ರಯಾಣ.

೬೪ ಸ್ವಕ್ಷಂ- ಚಕ್ರಧರಿಸಿದ ಮತ್ತು ಶೋಭನೇಂದ್ರಿಯವುಳ್ಳ, ಸುಪತ್ರಂ- ಒಳ್ಳೆಯವಾಹನ ಮತ್ತು ಒಳ್ಳೆಯ ರೆಕ್ಕೆಗಳುಳ್ಳ, ಕನಕೋಜ್ವಲದ್ಯುತಿ- ಕನಕ ರಚನೆಯುಳ್ಳ ಮತ್ತು ಕನಕ ವರ್ಣವಾದ, ನಾಗ- ಆನೆ ಮತ್ತು ಸರ್ಪ, ತಾರ್ಕ್ಷ್ಯ- ಗರುಡ ಮತ್ತು ರಥ. ಶ್ಲೇಷಸಂಕೀರ್ಣೋಪಮಾ.

೬೫ 'ಕರದೊಳೆಸೆ..ಶಾಲಿಯಂ'- ಕೈಯಲ್ಲಿರುವ ಚಕ್ರರೇಖೆಗಳಿಂದ ಕೂಡಿರುವ ಮತ್ತು ಸುದರ್ಶನಚಕ್ರ ಧರಿಸಿರುವ, ದ್ವಿಜೇಂದ್ರಕಾಂತ- ಬ್ರಾಹ್ಮಣೋತ್ತಮಪ್ರಿಯ ಮತ್ತು ಚಂದ್ರನಂತೆ ಸುಂದರನಾದ, ಸಿರಿವಕ್ಷ- ಶೋಭೆಯಿಂದ ಮತ್ತು ಲಕ್ಷ್ಮಿಯಿಂದ ಕೂಡಿದ ವಕ್ಷವುಳ್ಳ, ಸತ್ಯಾನುರಕ್ತ- ಸತ್ಯವಚನದಲ್ಲಿ ಅನುರಕ್ತ ಮತ್ತು ಸತ್ಯಭಾಮಾಪ್ರಿಯ; ನರಕರಿಪು- ನರಕವನ್ನು ಗೆದ್ದವನು ಮತ್ತು ನರಕಾಸುರನನ್ನು ಗೆದ್ದವನು. ಮೇಲೆಕಂಡ ವಿಶೇಷಣಗಳಿಂದ ಕೂಡಿದ ನೃಪರು ಮತ್ತು ಶಾರ್ಙ್ಗಿ (ಕೃಷ್ಣ) ಗಳು ಇಲ್ಲಿ ಕೃಷ್ಣ ಮತ್ತು ನೃಪರಿಬ್ಬರೂ ಪ್ರಕೃತವಾದುದರಿಂದ ಶಬ್ದಮಾತ್ರ ಸಾಮ್ಯ ಪ್ರಕೃತ ವಿಷಯಕ ಶಬ್ದಶ್ಲೇಷ.

೬೬ ಕಲ್ಹಾರ- ನೈದಿಲೆ, ಶ್ಲೇಷ ಮತ್ತು ವಿರೋಧಾಭಾಸ.

೬೮ ಪೆರ್ಬಲಾಂಬುಧಿ- ದೊಡ್ಡಸೈನ್ಯಸಾಗರ.

೬೯ ಲಂಗರಿನಸಾದ– ದೋಣಿಯ ಹುಟ್ಟು ಹಾಕುವ ದಂಡಗಳು. ಉತ್ಪ್ರೇಕ್ಷಾಲಂಕಾರ.

೭೦ ಪಂಥ– ಪ್ರತಿಜ್ಞೆ, ಸ್ವಭಾವೋಕ್ತ್ಯಲಂಕಾರ.

೭೧ ತರಿಪ– ದಾಂಟುವ, ಸಿಂಧೂರಿತಾನೆಗಳ– ಕುಂಕುಮ ಧರಿಸಿದ ಆನೆಗಳ, ಉತ್ಪ್ರೇಕ್ಷಾಲಂಕಾರ.

ಐದನೆಯ ಸರ್ಗ

೨ ಉತ್ಪ್ರೇಕ್ಷೆ.

೩ ಕಾವ್ಯಲಿಂಗ.

೪ ತುಲ್ಯಯೋಗಿತಾ ಮತ್ತು ಸಂಶಯಾಲಂಕಾರಗಳು.

೬ ಅರ್ಥಾಂತರನ್ಯಾಸ.

೮ ಕೃಷ್ಣನು ಭುವನೈಕವಂದ್ಯನಾದರೂ ಲೋಕಾಚಾರವನ್ನು ಅನುಸರಿಸಿ ತಾನೇ ವಂದಿಸಿದನು. ವಿರೋಧಾಭಾಸಾಲಂಕಾರ.

೯ ಕ್ರಮನಿಯಮ ಲೆಕ್ಕಿಸದೆ- ನಮಸ್ಕಾರಕ್ರಿಯೆ ಮುಗಿಯುವ ಮೊದಲೆ ಎತ್ತಿ ಆಲಿಂಗಿಸಿದನೆಂದು ಅರ್ಥ.

೧೦ ಅತಿಶಯೋಕ್ತಿ.

೧೧ ಶ್ಲೇಷಮೂಲಕಾತಿಶಯೋಕ್ತಿಯಿಂದ ಉತ್ಥಾಪಿತವಾದ ಪರ್ಯಾಯ ಭೇದ. ಉತ್ಪ್ರೇಕ್ಷೆಗಳಿಗೆ ಸಂಕರ.

೧೨ ಗಾಢಾಲಿಂಗನ- ದೃಢಾಶ್ಲೇಷ, ಬಲಿಬಂಧನ- ಬಲಿಚಕ್ರವರ್ತಿಯನ್ನು ಬಂಧಿಸುವಾಗ ಛಲವಾಮನ- ಕಪಟವಾಮನ, ವಿನಯವಾಮನ- ವಿನಯದಿಂದ ನಮ್ರನಾದವನು, 'ವೀರ್ಯದಿಂ....ಯಶ'- ತನ್ನ ಪರಾಕ್ರಮದಿಂದ ಗೆದ್ದ ಪಾರಿಜಾತ ಕುಸುಮದಿಂದುಂಟಾದ ಕೀರ್ತಿಯಿಂದಲೋ, ಹಿಂದೆ ಸತ್ಯಭಾಮೆಯನ್ನು ಸಂತೋಷಪಡಿಸಲು ಇಂದ್ರಲೋಕದಿಂದ ಪಾರಿಜಾತವನ್ನು ಅಪಹರಿಸಿ ತಂದು ತನ್ನ ಗೃಹದಲ್ಲಿ ನೆಟ್ಟನೆಂದು ಪೂರ್ವಕತೆ.

೧೫ ಶಿಲಾಘನರ್- ಶಿಲೆಯಂತೆ ಮತ್ತು ಶಿಲೆಗಳಿಂದ ಘನವಾದ, ಪಕ್ಷರು- ಪಕ್ಷಗಳಂತಿರುವ ಬಾಹುಗಳುಳ್ಳ ಮತ್ತು ಬಾಹುಗಳೆಂಬ ಪಕ್ಷಗಳುಳ್ಳ, ವಜ್ರ ಘಾತಕೆ ಮೊದಲು- ಹಿಂದೆ ಪರ್ವತಗಳಿಗೆ ರೆಕ್ಕೆಗಳಿದ್ದವು. ಇಂದ್ರನು ವಜ್ರಾಯುಧದಿಂದ ಅವನ್ನು ಕಡಿದನು ಎಂಬುದು ಪೂರ್ವಕತೆ.

೧೯ ಹಿಂದೆ ಶಿವನು ತ್ರಿಪುರ ಸಂಹಾರಮಾಡಲು ತೆರಳಿದಾಗ ಬ್ರಹ್ಮನೇ ಸಾರಥಿಯಾಗಿದ್ದನು.

೨೨ ಧುರಾಧುರಯೋಗ- ಸೂರ್ಯನುಹೊರತು ಉಳಿದ ಎರಡುಗ್ರಹಗಳ ಮಧ್ಯದಲ್ಲಿ ಚಂದ್ರನು ಬರುವುದು. ಅನಿಲಸುತ- ಭೀಮ. ಅಂತರ- ಮಧ್ಯದಲ್ಲಿ

೨೩ ವಶಿ- ಇಂದ್ರಿಯ ಜಯವುಳ್ಳವನು. ನೃಪವರನ ಅಯ ನಯುಗಳೊಲು ಅಯ–ಶುಭಾವಹವಿಧಿ, ನಯ-ನೀತಿ, ನಿಯತಯುತಿ–ಆಚಾರನಿಷ್ಠನಾದ ಜಿತೇಂದ್ರಿಯ. ಯಮ- ಶರೀರ ಮಾತ್ರ ಸಾಧನಾಪೇಕ್ಷ ಅಹಿಂಸಾದಿ ಕರ್ಮ, ನಿಯಮ- ನಿತ್ಯಾಗಂತುಕ ಸಾಧನವಾದದ್ದು. ಮಾಲೋಪಮಾಲಂಕಾರ.

೨೪ ಸಂಭ್ರಮ- ಆದರ, ಅದರಿಂದಪ್ರಕಟ– ವಿಕಾಸವಾಗುವ.

೨೮ 'ಬಹುಬಾರಿ- -ಶ್ರೀಪುರುಷ'– ಮತ್ಸ್ಯ ಕೂರ್ಮಾದಿ ಶರೀರಗಳನ್ನು. ಧರಿಸಿದ ಪುರಾಣಪುರುಷ–ವಿಷ್ಣು ಮತ್ತು ಪ್ರಾಕ್ತನಕರ್ಮದಿಂದ ಅನೇಕ ಜನ್ಮಗಳನ್ನು ಧರಿಸಿದ ಪುರುಷ, 'ನವ......ಪುರವ'– ನೂತನ ದ್ವಾರಗಳುಳ್ಳ ಪಟ್ಟಣವನ್ನು ಮತ್ತು ನವಸಂಖ್ಯೆಯ ಇಂದ್ರಿಯದ್ವಾರಗಳುಳ್ಳ ಶರೀರವನ್ನು ನೃಪಪುತ್ರ, ರೈವರಿಂ– ಪಂಚಪಾಂಡವ ಪುತ್ರರಿಂದ ಮತ್ತು ಪಂಚೇಂದ್ರಿಯಗಳಿಂದ 'ದೇಹಾಂತ......ವಂತೆ'- ಜೀವನು ಹಿಂದಿನ ಇಂದ್ರಿಯಗಳಿಂದ ಬೇರೆ ದೇಹವನ್ನು ಹೊಂದುವಂತೆ. ಶ್ಲೇಷಸಂಕೀರ್ಣೋಪಮಾಲಂಕಾರ.

೩೧ ಉತ್ಪ್ರೇಕ್ಷಾಲಂಕಾರ,

೩೮ 'ಹಿಮ..ರಾಜಿ'- ಹೇಮಂತಕಾಲವು ಕಳೆದ ಚಂದ್ರ ಮತ್ತು ಮನೋಹರನಾದ, ಪದ್ಮಸಹಿತಮ- ಪದ್ಮ ಮತ್ತು ಲಕ್ಷ್ಮಿಯಿಂದ ಸಹಿತನಾದವನು, ದ್ವಿಜ- ಬ್ರಾಹ್ಮಣ- ರೋಲಾದಿಪಕ್ಷಿ, ಝಷಕೇತಜನಕ- ಕಾಮನ ತಂದೆ ಮತ್ತು

ಮದನೋದ್ದೀಪಕ, ಸುಪ್ರಸಾದಿತ ಸುರಭಿ- ದೇವತೆಗಳನ್ನು ಅನುಗ್ರಹಿಸಿದ ಮತ್ತು ಸುರೆಯನ್ನು ನಿರ್ಮೂಲಗೊಳಿಸಿದ, ಮಾಧವಂ- ಕೃಷ್ಣ ಮತ್ತು ವಸಂತ ಇಲ್ಲಿ ಶಬ್ದಶಕ್ತಿಮೂಲಧ್ವನಿ.

೪೦ ಅಧಿಕಾಲಂಕಾರ.

೪೬ ಪ್ರೇಯೋಲಂಕಾರ.

೪೭ ಉತ್ಪ್ರೇಕ್ಷೆ.

೪೮ ಕಾವ್ಯಲಿಂಗಾಲಂಕಾರ.

೪೯ ಭ್ರಾಂತಿಮದಲಂಕಾರ, ವಿರೋಧಾಭಾಸಗಳಿಗೆ ಸಂಕರ.

೫೦ ಪೂರ್ವದಲ್ಲಿ ಖಾಂಡವವನದಹನಸಮಯದಲ್ಲಿ ಅರ್ಜುನನಿಂದ ಅಗ್ನಿದಾಹಮುಕ್ತನಾದ ಮಯನೆಂಬ ಅಸುರಶಿಲ್ಪಿಯು ತನ್ನ ಕೃತಜ್ಞತೆಗಾಗಿ, ತಾನು ಹಿಂದೆ ವೃಷಪರ್ವನೆಂಬ ಅಸುರರಾಜನ ಗೃಹನಿರ್ಮಾಣಮಾಡಿ ಉಳಿದಿದ್ದ ಮಣಿಮಯವಾದ ಶಿಲಾಕಲಾಪವನ್ನು ಹಿಮವತ್ಪರ್ವತದ ಬಿಂದುಸರಸ್ಸಿನಲ್ಲಿ ಗುಪ್ತವಾಗಿಟ್ಟದ್ದನು. ಈಗ ಅವೆಲ್ಲವನ್ನೂ ತಂದು ರಾಜಸೂಯ ಯಾಗಭವನವನ್ನು ನಿರ್ಮಿಸಿಕೊಟ್ಟನೆಂಬುದು ಪೂರ್ವಕಥೆ. (ಭಾರ. ಅ. ೬೬-೭೨-ಭಾಗ. ೯. ೧೫. ಮತ್ಸ್ಯ. ೨೯)

೫೧ ಕಲಧೌತ- ಬೆಳ್ಳಿ (ಕಲಧೌತಂ ರೌಪ್ಯಹೇಮ್ನೋ) ಶೀತರುಚಿ- ಚಂದ್ರ. ಉತ್ಪ್ರೇಕ್ಷಾಲಂಕಾರ.

೫೨ ಹಿಂದೆ ಪರಶುರಾಮನು ಕ್ಷತ್ರಿಯಾಸ್ತ್ರಗಳಿಂದ ಐದು ಸರಸ್ಸುಗಳನ್ನು ಗೆದ್ದು ಅವುಗಳಲ್ಲಿ ಕ್ಷತ್ರಿಯರಕ್ತವನ್ನು ತುಂಬಿ ಪಿತೃತರ್ಪಣ ಕೊಟ್ಟನು.

೫೩ ಸಾಮಾನ್ಯಾಲಂಕಾರ.

೫೪ ಬಿಸಿನಿವಧು- ಪದ್ಮಿನಿ ಎಂಬ ವಧುಗಳು, ಅವುಗಳಿಗಾದ ಪರಿಭವ- ನಿಮೀಲನವೆಂಬ ಅಪಮಾನ, ಅದಕ್ಕಾಗಿ ರಾತ್ರಿಯಲ್ಲಿ ಶಶಿಕಿರಣಗಳನ್ನು ಅಲ್ಲಿದ್ದ ನೀಲಮಣಿಕಾಂತಿಗಳು, ಗುರುಭಾವ- ಪ್ರಭೂತತ್ವ ಮತ್ತು ಸಂಭಾವಿ

ತತ್ವ, ಉಪಾಂಶು- ಅಂಶುಸಮೀಪದಲ್ಲಿ ಮತ್ತು ರಹಸ್ಯವಾಗಿ, ಪ್ರೋಜ್- ಮರೆ ಮಾಡು ಮತ್ತು ಹೊಡೆ, ಅಂತಃಪುರದ್ರೋಹಿಗಳು ನಿರ್ಭೀಕರಾದರೂಕೂಡ, ಗೌರವಸ್ಥರು ಅಪಕೀರ್ತಿಯ ಹೆದರಿಕೆಯಿಂದ ಅವರನ್ನು ಗುಟ್ಟಾಗಿ ಶಿಕ್ಷಿಸುವ ರೆಂದು ತಾತ್ಪರ್ಯ. ಶ್ಲೇಷ ಮತ್ತು ವಿರೋಧಾಭಾಸಾಲಂಕಾರಗಳು.

೫೫ ಸ್ತ್ರೀಯರು ನಾಚಿಕೆಯಿಂದ ಮುಖತಿರುಗಿಸಿದಾಗ ಅವರ ಮುಖಗಳು ರತ್ನಭಿತ್ತಿಗಳಲ್ಲಿ ಪ್ರತಿಬಿಂಬಿಸಿದ್ದರಿಂದ ಅಪ್ರತಿಬಿಂಬಗಳು ಭೋಗಿ (ರಸಿಕ) ಗಳಿಗೆ ಅಭಿಮುಖವೇ ಆಗುತ್ತಿದ್ದವು. ವಿರೋಧಾಭಾಸ.

೫೬ ಭ್ರಾಂತಿಮದಲಂಕಾರ. ಉತ್ಪ್ರೇಕ್ಷೆ.

೫೮ ಸರ್ಪಗಳ ಹೆಣೆಯ ರತ್ನಾಂಕುರಗಳಿಂದ ಹುಟ್ಟಿದ ಮೇಘಧ್ವನಿ ಯಿಂದ ವೈಢೂರ್ಯಭೂಮಿಯು ಬಿರಿಯುತ್ತದೆ. ಆಗ ವೈಢೂರ್ಯ ಕಾಂತಿ ಗಳು ಹೊರಬರುವುವೆಂದು ಪ್ರತೀತಿ. ಉದಾತ್ತಾಲಂಕಾರ.

೫೯ ಗುಪ್ತಜಲನಳಿನಿ- ಕಮಲದಳಗಳಿಂದ ಮುಚ್ಚಲಟ್ಟ ಸರೋವರ. ಸಂಕ್ಷುಭಿತ- ಕೃದ್ಧರಾದ, ಉದಾತ್ತಾಲಂಕಾರ.

೬೦ ಕತ್ತಿಗಪ್ಪಿನ- ಖಡ್ಗದಂತೆ ಕಪ್ಪಾದ, ಜಲಶಂಕೆ- ನೀರು ಎಂಬ ಭ್ರಾಂತಿ

೬೧ ನಯನನಂದನರು- ನೇತ್ರಾನಂದಕರರು.

೯೯ ನವಗೀತವಾದರುಂ- ನೂತನಗೀತವುಳ್ಳದ್ದಾದರೂ ಅವನಗೀತ- ನೂತನಗೀತವುಳ್ಳದ್ದಲ್ಲವೆಂದರೆ ವಿರೋಧ, ಅನವಗೀತಂ- ಅಗರ್ಹಿತ ಗೀತವು ಳ್ಳದ್ದು ಎಂದು ಪರಿಹಾರ, ವಿರೋಧಾಭಾಸಾಲಂಕಾರ, 'ಸಾತ್ವಿ....ನೃತ್ಯಗಳ- ಅಂತಃಕರಣದಿಂದ ನಿವೃತ್ತವಾದುದು ಸಾತ್ವಿಕ, ಹಸ್ತಾದ್ಯಭಿನಯಗಳಿಂದಾ ದುದು ಆಂಗಿಕ, ಮಧುರ (ಲಾಸ್ಯ), ಉಜ್ವಲ (ಉದ್ಧತ) ತಾಂಡವ ನೃತ್ಯಗಳು.

ಲಲ ೪. ಸರ್ವಾಶ್ರಯನು- ಎಲ್ಲಕ್ಕೂ ಆಶ್ರಯನಾದವನು.

ಅನುರವಾಣಿಯವರ ಇತರ ಕನ್ನಡ ಗ್ರಂಥಗಳು

ಕನ್ನಡ ಕುವಲಯಾನಂದ
ಕನ್ನಡ ಚಿತ್ರಮೀಮಾಂಸೆ
ಚಾರುದತ್ತ
ಕನ್ನಡ ರಘುವಂಶ ರತ್ನಾಂಶು
ಕನ್ನಡ ಕಿರಾತಾರ್ಜುನೀಯ
ಶೃಂಗಾರರಸ
ಮಧುವಿದ್ಯೆ
ಗೀತೆ, ಅಂತರ್ವಾಣಿ }
ಗೀತೆಯ ಅಂತರ್ವಾಣಿ }
ಶಿವರಾತ್ರಿಶಿವಾಚಾರ್ಯ
ಕನ್ನಡ ವಿಕ್ರಮೋರ್ವಶೀಯ (ಬಸವಪ್ಪಶಾಸ್ತ್ರೀ)
ಶ್ರೀಕರ ಭಾಷ್ಯಸಾರ
ಮುಂಡಕೋಪನಿಷತ್ ವೀರಶೈವಭಾಷ್ಯಂ